TT-51
(B) 25235

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನ
THIRD SESSION OF THE THIRTIENTH LEGISLATIVE ASSEMBLY

ಸಂಪುಟ – ೯ (ಕ್ರಮಾಂಕ – ೩)
Volume – 9 (No. 3)

(೨೨ನೇ ಜುಲೈ ೨೦೦೯)
(22nd July 2009)

*

ಭಾಗ – ೨
PART – II

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

(B) 25235

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನ
THIRD SESSION OF THE THIRTIENTH LEGISLATIVE ASSEMBLY

ಸಂಪುಟ – ೯ (ಕ್ರಮಾಂಕ – ೩)
Volume – 9 (No. 3)

(೨೨ನೇ ಜುಲೈ ೨೦೦೯)
(22nd July 2009)

ಭಾಗ – ೨
PART – II

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಹದಿಮೂರನೇ ವಿಧಾನಸಭೆ
ಮೂರನೇ ಅಧಿವೇಶನ

ಶ್ರೀ ಜಗದೀಶ್ ಶೆಟ್ಟರ್
ಅಧ್ಯಕ್ಷರು

1112 ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ವಿಧಾನಸಭಾ ಕೇತ್ರದಲ್ಲಿನ ಪಶುಸಂಗೋಪನಾ ಇಲಾಖೆಯಲ್ಲಿ ವೈದ್ಯರ ಮತ್ತು ವೈದ್ಯಕಿಯೇತರ ಸಿಬ್ಬಂದಿಗಳ ಕೊರತೆ ಎಷ್ಟಿದೆ (ಆಸ್ಪತ್ರೆಗಳವಾರು ವಿವರ ನೀಡುವುದು);

ಆ) ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಪಶುಸಂಗೋಪನಾ ಆಸ್ಪತ್ರೆಯ ಕಟ್ಟಡಗಳು ಎಷ್ಟಿವೆ? ಅವುಗಳು ಸುಸ್ಥಿತಿಯಲ್ಲಿ ಇದೆಯೇ? ಇಲ್ಲದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಪಶುವೈದ್ಯ ಘಟಕಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಇದ್ದಲ್ಲಿ, ಅವುಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 7 ಜನ ಪಶುವೈದ್ಯರು ಮತ್ತು 58 ವೈದ್ಯಕೀಯೇತರ ಸಿಬ್ಬಂದಿಗಳ ಕೊರತೆ ಇರುತ್ತದೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲಾಖೆಯಲ್ಲಿ 100 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಮೇಲೆ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದ್ದು ಇದರಲ್ಲಿ 68 ಪಶುವೈದ್ಯಾಧಿಕಾರಿ ಹುದ್ದೆಗಳಿಗೆ ನಿವೃತ್ತ ಪಶುವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಬಾಕಿ 32 ಹುದ್ದೆಗಳಿಗೆ ಕೂಡ ಪಶುವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇತ್ತೀಚೆಗೆ ನೇರ ನೇಮಕಾತಿ ಮೂಲಕ ಆಯ್ಕೆಯಾದ 113 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದೆ. ಆದಾಗ್ಯೂ ಇಲಾಖೆಯಲ್ಲಿ 975 ಹುದ್ದೆಗಳು ಖಾಲಿ ಉಳಿದಿದ್ದು ಈ ಪೈಕಿ 400 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಸಹಮತಿ ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.

ಖಾಲಿ ಇರುವ 55 ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಗಳನ್ನು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಬೇಕಾಗಿದ್ದು, ಮುಂಬಡ್ತಿ ಪ್ರಕ್ರಿಯೆ ಆರಂಭವಾಗಿರುತ್ತದೆ.

ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳು ಮುಂಬಡ್ತಿ ಹುದ್ದೆಗಳಾಗಿದ್ದು, ಖಾಲಿ ಇರುವ 486 ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪಶುವೈದ್ಯಕೀಯ ಪರೀಕ್ಷಕರ 515 ಹುದ್ದೆಗಳು ಖಾಲಿ ಇದ್ದು, ಇವುಗಳನ್ನು 50% ನೇರ ನೇಮಕಾತಿ ಹಾಗೂ 50% ಮುಂಬಡ್ತಿ ಮೂಲಕ ತುಂಬಬೇಕಾಗಿದ್ದು, 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇರ ನೇಮಕಾತಿಯ ಮೂಲಕ ತುಂಬುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಆಯೋಗ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಿದೆ ಹಾಗೂ ಇನ್ನುಳಿದ 215 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಪಶುವೈದ್ಯಕೀಯ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡುವ ಮೂಲಕ ತುಂಬಲಾಗುವುದು.

ಪಶುವೈದ್ಯಕೀಯ ಸಹಾಯಕರ 442 ಹುದ್ದೆಗಳು ಖಾಲಿಯಿದ್ದು, ಅವುಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

2174 "ಡಿ" ದರ್ಜೆ ನೌಕರರ ಹುದ್ದೆಗಳು ಖಾಲಿ ಇದ್ದು ಈ ಪೈಕಿ 1400 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಉಳಿದಂತೆ ಖಾಲಿ ಇರುವ ಹುದ್ದೆಗಳನ್ನು ಬಾಹ್ಯ ಮೂಲ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಗುತ್ತಿಗೆ ಆಧಾರದಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗಿದೆ. ಅನುಕಂಪಾರ್ಥ ನೌಕರಿ ಹಾಗೂ ಸಂಖ್ಯಾತಿರಿಕ್ತ ನೌಕರರನ್ನು ಮರು ವಿನ್ಯಾಸಗೊಳಿಸುವ ಮೂಲಕ ಆದ್ಯತೆಯ ಮೇರೆಗೆ ಭರ್ತಿ ಮಾಡಲಾಗುತ್ತಿದೆ.

ಇ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 28 ಪಶುವೈದ್ಯಕೀಯ ಸಂಸ್ಥೆಗಳಿರುತ್ತದೆ. ಇವುಗಳಲ್ಲಿ 27 ಪಶುವೈದ್ಯಕೀಯ ಸಂಸ್ಥೆಗಳು ಸ್ವಂತ ಕಟ್ಟಡವನ್ನು ಹೊಂದಿದ್ದು ಸುಸ್ಥಿತಿಯಲ್ಲಿದೆ.

ಕೂಡುಮಲ್ಲಿಗೆಯ ಗ್ರಾಮದಲ್ಲಿನ ಪಶುಚಿಕಿತ್ಸಾಲಯವು ಗ್ರಾಮಪಂಚಾಯತಿಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಹೊಸ ಕಟ್ಟಡ ನಿರ್ಮಿಸಲು ಆರ್.ಐ.ಡಿ.ಎಫ್. ಅಡಿಯಲ್ಲಿ ಪರಿಶೀಲಿಸಲಾಗುವುದು.

ಈ) ಇಲ್ಲ.

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿನ ಪಶುಸಂಗೋಪನಾ ಇಲಾಖೆಯಲ್ಲಿ ವೈದ್ಯರ ಮತ್ತು ವೈದ್ಯಕೀಯೇತರ ಖಾಲಿ ಹುದ್ದೆಗಳ ವಿವರ

ಕ್ರ ಸಂ.	ಪಶುವೈದ್ಯ ಸಂಸ್ಥೆಗಳು	ಪಶುವೈದ್ಯಾಧಿಕಾರಿ	ಹಿರಿಯ ಪಶುವೈದ್ಯ ಪರೀಕ್ಷಕರು	ಪಶುವೈದ್ಯ ಪರೀಕ್ಷಕರು	ಪಶುವೈದ್ಯ ಸಹಾಯಕರು	ಡಿ: ದರ್ಜೆ ನೌಕರರು	ಒಟ್ಟು
1	ಪಶು ಆಸ್ಪತ್ರೆ, ತೀರ್ಥಹಳ್ಳಿ	1	–	–	–	1	2
2	ಪಶುಚಿಕಿತ್ಸಾಲಯ, ಗುತ್ತಿಎಡೇಹಳ್ಳಿ	1	–	1	–	1	3
3	ಪಶುಚಿಕಿತ್ಸಾಲಯ, ಯೋಗೀಮಳಲಿ	1	1	–	–	1	3
4	ಪಶುಚಿಕಿತ್ಸಾಲಯ, ನಾಲೂರು	1	–	1	–	1	3
5	ಪಶುಚಿಕಿತ್ಸಾಲಯ, ಕುಡುಮಲ್ಲಿಗೆ	1	–	1	–	2	4
6	ಪಶುಚಿಕಿತ್ಸಾಲಯ, ಯಡೂರು	1	–	1	–	2	4
7	ಪಶುಚಿಕಿತ್ಸಾಲಯ, ರಾಮಚಂದ್ರಪುರ	1	–	1	–	2	4
8	ಪಶುಚಿಕಿತ್ಸಾಲಯ, ಸಾಲ್ಗಡಿ	–	1	–	–	2	3
9	ಪಶುಚಿಕಿತ್ಸಾಲಯ, ಮಂಡಗದ್ದೆ	–	–	1	–	2	3
10	ಪಶುಚಿಕಿತ್ಸಾಲಯ, ಕನ್ನಂಗಿ	–	–	1	–	1	2
11	ಪಶುಚಿಕಿತ್ಸಾಲಯ, ನಗರ	–	–	1	–	–	1
12	ಪಶುಚಿಕಿತ್ಸಾಲಯ, ಹುಂಚ	–	–	1	1	1	3
13	ಪಶುಚಿಕಿತ್ಸಾಲಯ, ಗಾಜನೂರು	–	–	1	–	–	1
14	ಪಶುಚಿಕಿತ್ಸಾಲಯ, ಆರೇಹಳ್ಳಿ	–	–	–	–	1	1
15	ಪಶುಚಿಕಿತ್ಸಾಲಯ, ಕೋಣಂದೂರು	–	–	–	–	1	1
16	ಪಶುಚಿಕಿತ್ಸಾಲಯ, ಆರಗ	–	–	–	–	1	1
17	ಪಶುಚಿಕಿತ್ಸಾಲಯ, ದೇವಂಗಿ	–	–	–	–	1	1
18	ಪಶುಚಿಕಿತ್ಸಾಲಯ, ಮೇಗರಹಳ್ಳಿ	–	–	–	–	1	1
19	ಪಶುಚಿಕಿತ್ಸಾಲಯ, ಸಾಲೂರು	–	–	1	–	2	3
20	ಪಶುಚಿಕಿತ್ಸಾಲಯ, ಆರಳಸುರಳಿ	–	–	–	1	1	2

21	ಪ್ರಾ.ಪ.ಚಿ, ಮಾಳೂರು ಗಬಡಿ	–	1	–	–	1	2
22	ಪ್ರಾ.ಪ.ಚಿ, ಸಂಜಿಕಟ್ಟೆ	–	1	–	–	1	2
23	ಪ್ರಾ.ಪ ಚಿ, ಕಾನಗೋಡು	–	1	–	–	–	1
24	ಪ್ರಾ.ಪ.ಚಿ, ಭಾನಿಕ್ಕೆಸರು	–	–	1	1	–	2
25	ಪ್ರಾ.ಪ ಚಿ, ಬಸವಾನಿ	–	–	1	–	–	1
26	ಪ್ರಾ.ಪ.ಚಿ, ಕೆ.ಬಿ.ಸರ್ಕಲ್	–	–	–	–	1	1
27	ಪ್ರಾ.ಪ.ಚಿ, ಹಾರೋಗುಳಿಗೆ	–	–	–	1	–	1
28	ಪ್ರಾ.ಪ.ಚಿ, ಹಬ್ಬಿಗೆ	–	–	–	–	1	1
29	ಪ್ರಾ.ಪ.ಚಿ, ಹೆದ್ದೂರು	–	–	–	–	1	1
30	ಪ್ರಾ.ಪ ಚಿ, ಹೊದ್ಲ	–	–	–	–	1	1
31	ಪ್ರಾ.ಪ.ಚಿ, ಮರೆಹಳ್ಳಿ ಬಿಸಿಲಮನೆ	–	–	–	–	1	1
32	ಕೃ ಗ.ಕೇಂದ್ರ, ಸೂದೂರು	–	–	1	–	–	1
33	ಕೃ.ಗ.ಕೇಂದ್ರ, ಆಗುಂಬೆ	–	–	1	–	–	1
34	ಕೃ ಗ.ಕೇಂದ್ರ, ಕಲ್ಮನೆ	–	–	1	–	–	1
35	ಕೃ.ಗ ಕೇಂದ್ರ, ಸೋನಲೆ	–	–	1	–	1	2
	ಒಟ್ಟು	7	5	17	4	32	65

561 ಡಾ: ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಒಂದು ವರ್ಷಕ್ಕೆ ಎಷ್ಟು ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ ಹಾಗೂ ರಾಜ್ಯದಲ್ಲಿ ವರ್ಷಕ್ಕೆ ಎಷ್ಟು ಮೆಗಾವ್ಯಾಟ್ ವಿದ್ಯುತ್‌ನ್ನು ತಯಾರಿಸಲಾಗುತ್ತಿದೆ (ಜಲ ಮೂಲಗಳಿಂದ ಮತ್ತು ಥರ್ಮಲ್ ಘಟಕಗಳಿಂದ ಪ್ರತ್ಯೇಕ ಮಾಹಿತಿ ಒದಗಿಸುವುದು);

ಆ) ಪ್ರತಿ ಯೂನಿಟ್ ವಿದ್ಯುತ್ ತಯಾರು ಮಾಡಲು ಸರ್ಕಾರಕ್ಕೆ ತಗಲುವ ವೆಚ್ಚವೆಷ್ಟು (ಜಲ ಮೂಲಗಳಿಂದ ಮತ್ತು ಥರ್ಮಲ್ ಘಟಕಗಳಿಂದ ಪ್ರತ್ಯೇಕ ಮಾಹಿತಿ ಒದಗಿಸುವುದು);

ಇ) ಒಂದು ಯೂನಿಟ್ ವಿದ್ಯುತ್‌ಗೆ ಸಾರ್ವಜನಿಕರಿಗೆ ವಿಧಿಸಲಾಗುವ ದರವೆಷ್ಟು (ಗೃಹ ಉಪಯೋಗಕ್ಕೆ ಮತ್ತು ವಾಣಿಜ್ಯ ಕಾರ್ಯಕ್ಕೆ ಮತ್ತು ರೈತರ ಪಂಪ್‌ಸೆಟ್ಟುಗಳಿಗೆ ವಿಧಿಸಲಾಗುವ ದರವೆಷ್ಟು ಪ್ರತ್ಯೇಕ ಮಾಹಿತಿ ನೀಡುವುದು);

ಈ) ಹೊರ ರಾಜ್ಯಗಳಿಂದ ವರ್ಷಕ್ಕೆ ಎಷ್ಟು ಮೆಗಾವ್ಯಾಟ್ ವಿದ್ಯುತ್‌ನ್ನು ಪಡೆಯಲಾಗುತ್ತಿದೆ;

ಉ) ಹೊರ ರಾಜ್ಯಗಳಿಂದ ಪಡೆಯುವ ಪ್ರತಿ ಯೂನಿಟ್‌ನ ಬೆಲೆ ಎಷ್ಟು; ಸಾರ್ವಜನಿಕರಿಗೆ ಹೊರ ರಾಜ್ಯಗಳಿಂದ ಪಡೆಯುವ ಪ್ರತಿ ಯೂನಿಟ್ ವಿದ್ಯುತ್‌ಗೆ ನಿಗದಿಪಡಿಸಿದ ದರವೆಷ್ಟು (ಗೃಹ ಉಪಯೋಗಕ್ಕೆ ಮತ್ತು ವಾಣಿಜ್ಯ ಕಾರ್ಯಕ್ಕೆ ಮತ್ತು ರೈತರ ಪಂಪುಸೆಟ್ಟುಗಳಿಗೆ ವಿಧಿಸಲಾಗುವ ದರವೆಷ್ಟು ಪ್ರತ್ಯೇಕ ಮಾಹಿತಿ ನೀಡುವುದು);

ಊ) ಇದರಲ್ಲಿ, ಕೇಂದ್ರ ಸರ್ಕಾರದ ಪಾಲು ಎಷ್ಟು (ಸಮಗ್ರ ಮಾಹಿತಿ ಒದಗಿಸುವುದು)

ಶ್ರೀ ಕೆ.ಎಸ್.ಈಶ್ವರಪ್ಪ (ಇಂಧನ ಸಚಿವರು) :

ಅ) ಕಳೆದ ಸಾಲಿನಲ್ಲಿ (2008–09) ರಾಜ್ಯದ ವಿದ್ಯುತ್ ಗರಿಷ್ಠ ಬೇಡಿಕೆಯು ಸುಮಾರು 8228 ಮೆ.ವ್ಯಾಟ್‌ಗಳೆಂದು ಅಂದಾಜು ಮಾಡಲಾಗಿದ್ದು, ವಿದ್ಯುತ್ ಪೂರೈಕೆಗೆ ಗರಿಷ್ಠ ಮಟ್ಟದಲ್ಲಿ ಲಭ್ಯವಾದ ವಿದ್ಯುತ್ 6548 ಮೆ.ವ್ಯಾಟ್‌ಗಳು ಇದೇ ರೀತಿ, 2008–09ನೇ ಸಾಲಿನಲ್ಲಿ ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆಯು ಸುಮಾರು 46,965 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದ್ದು, ಸದರೀ ಸಾಲಿನಲ್ಲಿ ರಾಜ್ಯದ ಆಂತರಿಕ ಉತ್ಪಾದನೆಯೂ ಸೇರಿದಂತೆ ಎಲ್ಲಾ ಮೂಲಗಳಿಂದ ರಾಜ್ಯಕ್ಕೆ ಲಭ್ಯವಾದ ವಿದ್ಯುತ್ತಿನ ಒಟ್ಟು ಪ್ರಮಾಣ 41,799 ದಶಲಕ್ಷ ಯೂನಿಟ್ಟುಗಳು (ತಾತ್ಕಾಲಿಕ). ಮೂಲವಾರು ಮಾಹಿತಿಗಳನ್ನು **ಅನುಬಂಧ–1ರಲ್ಲಿ** ಒದಗಿಸಲಾಗಿದೆ.

ಆ) 2008–09 ನೇ ಸಾಲಿನಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ವಿವಿಧ ಮೂಲಗಳಿಂದ ಉತ್ಪಾದಿಸಿದ ವಿದ್ಯುತ್ತಿಗೆ ತಗುಲಿದ ಸರಾಸರಿ ವೆಚ್ಚ ಈ ಕೆಳಕಂಡಂತಿದೆ:

ಜಲವಿದ್ಯುತ್ : 44.77 ಪೈಸೆ ಪ್ರತಿ ಯೂನಿಟ್‌ಗೆ
ಶಾಖೋತ್ಪನ್ನ : 282.74 ಪೈಸೆ ಪ್ರತಿ ಯೂನಿಟ್‌ಗೆ
ಪವನ ಶಕ್ತಿ : 238.90 ಪೈಸೆ ಪ್ರತಿ ಯೂನಿಟ್‌ಗೆ
ಡೀಸೆಲ್ ಸ್ಥಾವರ : 821.97 ಪೈಸೆ ಪ್ರತಿ ಯೂನಿಟ್‌ಗೆ
ಒಟ್ಟಾರೆ : 166.01 ಪೈಸೆ ಪ್ರತಿ ಯೂನಿಟ್‌ಗೆ

ಇ) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ 2005ರ ವಿದ್ಯುತ್ ದರ ಆದೇಶದ ಪ್ರಕಾರ, ಗೃಹ ಬಳಕೆ, ವಾಣಿಜ್ಯ ಮತ್ತು ರೈತರ ಪಂಪುಸೆಟ್ಟುಗಳಿಗೆ ವಿಧಿಸಲಾಗುತ್ತಿರುವ ವಿದ್ಯುತ್ ದರಗಳ ವಿವರಗಳನ್ನು **ಅನುಬಂಧ–1**ರಲ್ಲಿ ಒದಗಿಸಲಾಗಿದೆ.

(ಅನುಬಂಧದ–1, 2 & 3 ರ ಪುಟಗಳು ಜಾಸ್ತಿ ಇರುವುದರಿಂದ ಅದರ ಪ್ರತಿಯನ್ನು ಮಾನ್ಯ ವಿಧಾನ ಸಭಾ ಸದಸ್ಯರಿಗೆ ಪತ್ಯೇಕವಾಗಿ ಒದಗಿಸಲಾಗಿದೆ)

ಈ) ಮತ್ತು ಉ) ರಾಜ್ಯವು ಛತ್ತೀಸ್‌ಗಡ ರಾಜ್ಯ ವಿದ್ಯುತ್ ಮಂಡಳಿಯಿಂದ ಫೆಬ್ರವರಿ 2009 ರಿಂದ ಏಪ್ರಿಲ್ 2009 ರವರೆಗೆ ಒಟ್ಟು 356.84 ದಶಲಕ್ಷ ಯೂನಿಟ್ಟುಗಳನ್ನು ಖರೀದಿಸಿರುತ್ತದೆ. ವಿವರಗಳು ಕೆಳಕಂಡಂತಿವೆ:

ಕ್ರ ಸಂ.	ತಿಂಗಳು	ಖರೀದಿಸಿದ ವಿದ್ಯುತ್ (ದ.ಲ.ಯೂನಿಟ್ಟುಗಳಲ್ಲಿ)	ದರ (ರೂ.ಗಳಲ್ಲಿ) ಕೆ.ಡಬ್ಲ್ಯೂ ಹೆಚ್)
1	ಫೆಬ್ರವರಿ 09	96.05	6.34
2	ಮಾರ್ಚ್ 09	116.79	9.05
3	ಏಪ್ರಿಲ್ 09	144.00	9.05
	ಒಟ್ಟು	**356.84**	

ಹೊರ ರಾಜ್ಯಗಳ ಇತರ ಮೂಲಗಳಿಂದ ಖರೀದಿಸಲಾದ ವಿದ್ಯುತ್ ಮತ್ತು ಇದಕ್ಕೆ ನೀಡಲಾದ ಖರೀದಿ ದರಗಳ ವಿವರಗಳನ್ನು **ಅನುಬಂಧ–3** ರಲ್ಲಿ ಒದಗಿಸಲಾಗಿದೆ.

ಹೊರ ರಾಜ್ಯಗಳಿಂದ ಪಡೆಯಲಾಗುವ ವಿದ್ಯುತ್ತಿಗೆ ತಗಲುವ ವೆಚ್ಚದ ಮೇಲೆ ವಿದ್ಯುತ್ ಸರಬರಾಜು ಕಂಪನಿಗಳಿಂದ ಗ್ರಾಹಕರುಗಳಿಗೆ ನೇರವಾಗಿ ಯಾವುದೇ ಹೆಚ್ಚುವರಿ ದರವನ್ನು ವಿಧಿಸಲಾಗುತ್ತಿಲ್ಲ. ರಾಜ್ಯದಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ವಿದ್ಯುತ್ ದರಗಳ ನಿಗದಿಪಡಿಸುವಿಕೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಪ್ರಸ್ತುತ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ 2005ರ ವಿದ್ಯುತ್ ದರ ಆದೇಶದ ಪ್ರಕಾರ ಗ್ರಾಹಕರುಗಳಿಗೆ ವಿದ್ಯುತ್ ದರವನ್ನು ವಿಧಿಸಲಾಗುತ್ತಿದೆ.

ಊ) ಕಳೆದ ವರ್ಷದಲ್ಲಿ (2008–09) ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಲಭ್ಯವಾಗಬೇಕಾಗಿದ್ದ ರಾಜ್ಯದ ಪಾಲು 10041

ದಶಲಕ್ಷ ಯೂನಿಟ್ಟುಗಳು. ಇದರಲ್ಲಿ, ಈ ಸಾಲಿನಲ್ಲಿ ಪಡೆಯಲಾದ ರಾಜ್ಯದ ಪಾಲು 9789.80 ದಶಲಕ್ಷ ಯೂನಿಟ್ಟುಗಳು. ವಿದ್ಯುತ್ ಲಭ್ಯತೆಯಲ್ಲಿ 251.20 ದಶಲಕ್ಷ ಯೂನಿಟ್ಟುಗಳಷ್ಟು ಕಡಿಮೆಯಾಗಿರುತ್ತದೆ. ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಈ ಸಾಲಿನಲ್ಲಿ ಲಭ್ಯವಾದ ವಿದ್ಯುತ್ ಪ್ರಮಾಣದ ವಿವರಗಳು ಈ ಕೆಳಕಂಡಂತಿದೆ:-

ಕ್ರ ಸಂ.	ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳು	**2008-09ನೇ ಸಾಲಿನಲ್ಲಿ** ಪಡೆಯಲಾದ ರಾಜ್ಯದ ಪಾಲು (ದಶಲಕ್ಷ ಯೂನಿಟ್ಟುಗಳಲ್ಲಿ)
1	ರಾಮಗುಂಡಂ-ಎನ್.ಟಿ.ಪಿ.ಸಿ-ಹಂತ 1, 2 ಮತ್ತು 3.	4016.28
2	ತಾಲ್ಚೇರ್-ಎನ್.ಟಿ.ಪಿ.ಸಿ.-ಹಂತ-2	2612.60
3	ನೈವೇಲಿ ಲಿಗ್ನೈಟ್ ನಿಗಮದ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರ-2-ಹಂತ-1 ಮತ್ತು 2 ಹಾಗೂ ವಿದ್ಯುತ್ ಉತ್ಪಾದನಾ ಕೇಂದ್ರ-1-ವಿಸ್ತರಣ	2413.33
4	ಮದ್ರಾಸ್ ಅಣು ವಿದ್ಯುತ್ ಉತ್ಪಾದನಾ ಕೇಂದ್ರ	90.38
5	ಕೈಗಾ ಅಣು ವಿದ್ಯುತ್ ಉತ್ಪಾದನಾ ಕೇಂದ್ರ-ಯೂನಿಟ್ 1,2 ಮತ್ತು 3	657.21
	ಒಟ್ಟು	**9789.80**

1092 ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾನಿಲಯಗಳಲ್ಲಿನ ವಿವಿಧ ಕೋರ್ಸ್‌ಗಳು, ಸಂಯೋಜನೆ ಶುಲ್ಕ, ಮುಂದುವರಿಕೆ ಶುಲ್ಕ, ಅರ್ಹತಾ ಶುಲ್ಕ ಒಂದೇ ರೀತಿಯಲ್ಲಿ ಇದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು;

ಆ) ಯಾವ ಯಾವ ವಿಶ್ವವಿದ್ಯಾನಿಲಯಗಳು ಎಷ್ಟು ಸಂಯೋಜನಾ ಶುಲ್ಕವನ್ನು ಪಡೆಯುತ್ತಿವೆ (ಸಂಪೂರ್ಣ ವಿವರವನ್ನು ಒದಗಿಸುವುದು)?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಉನ್ನತ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ಕೋರ್ಸುಗಳು, ಸಂಯೋಜನೆ ಶುಲ್ಕ, ಮುಂದುವರಿಕೆ ಶುಲ್ಕ, ಅರ್ಹತಾ ಶುಲ್ಕಗಳು ಏಕ ರೂಪದಲ್ಲಿರುವುದಿಲ್ಲ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 2000ದ ಪ್ರಕಾರ ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳು ಸಿಂಡಿಕೇಟ್‌ನ ಅನುಮೋದನೆ ಪಡೆದು, ಶುಲ್ಕ ನಿರ್ಧರಣೆಯನ್ನು ಕಾಲಕಾಲಕ್ಕೆ ನಿಗದಿಪಡಿಸುತ್ತವೆ.

ಆ) ಪ್ರತಿಯೊಂದು ವಿಶ್ವವಿದ್ಯಾನಿಲಯಗಳಲ್ಲೂ ಬೇರೆ-ಬೇರೆ ಕೋರ್ಸುಗಳು ಇದ್ದು, ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸಂಯೋಜನಾ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ.

101 ಶ್ರೀ ಬಸವರಾಜನ್ ಎಸ್.ಕೆ. : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಅನುದಾನಿತ ಖಾಸಗಿ ಕಾಲೇಜು ಹಾಗೂ ಅನುದಾನರಹಿತ, ಖಾಸಗಿ ಬಿ.ಎಡ್., ಕಾಲೇಜುಗಳ ಸಂಖ್ಯೆ ಎಷ್ಟು; ಸರ್ಕಾರಿ, ಅನುದಾನಿತ, ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಆ) ಈ ಕಾಲೇಜುಗಳಿಗೆಂದು ಸರ್ಕಾರದಿಂದ ನಿಗದಿಪಡಿಸಿರುವ ಸೀಟುಗಳ ಸಂಖ್ಯೆ ಎಷ್ಟು; ಸರ್ಕಾರಿ ಅನುದಾನಿತ, ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಇ) ಈ ಕಾಲೇಜುಗಳಿಗೆ ಸರ್ಕಾರ ನಿಗದಿಪಡಿಸಿರುವ ಶುಲ್ಕ ಎಷ್ಟು; ಸರ್ಕಾರಿ ಅನುದಾನಿತ ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಈ) ಒಂದು ವರ್ಷದಲ್ಲಿ ಬಿ.ಎಡ್., ಉತ್ತೀರ್ಣರಾದ ಶೇಕಡವಾರು ಅಭ್ಯರ್ಥಿಗಳ ಸಂಖ್ಯೆ ಎಷ್ಟು; ಸರ್ಕಾರಿ ಅನುದಾನಿತ ಖಾಸಗಿ ಮತ್ತು ಅನುದಾನರಹಿತ ಖಾಸಗಿ ಕಾಲೇಜುವಾರು ವಿವರಗಳನ್ನು ನೀಡುವುದು;

ಉ) ಹೀಗೆ ಉತ್ತೀರ್ಣರಾದ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಡಲಾಗಿದೆ (ಕಳೆದ ಮೂರು ವರ್ಷಗಳ ವರ್ಷಾವಾರು ವಿವರ ನೀಡುವುದು)?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಸರ್ಕಾರಿ ಬಿ.ಇಡಿ ಕಾಲೇಜುಗಳು : 009
ಅನುದಾನಿತ ಬಿ.ಇಡಿ.ಕಾಲೇಜುಗಳು : 021
ಖಾಸಗಿ ಬಿ.ಇಡಿ. ಕಾಲೇಜುಗಳು : 380
ಒಟ್ಟು : 410

ಆ) ಪ್ರತಿ ಕಾಲೇಜಿಗೆ 100 ವಿದ್ಯಾರ್ಥಿಗಳ ದಾಖಲಾತಿ ಮಿತಿ ಇರುತ್ತದೆ. ಅದನ್ನು ಕೆಳಕಂಡಂತೆ ಹಂಚಿಕೆ ಮಾಡಲಾಗುವುದು:

1. ಸರ್ಕಾರಿ 100 (ಸರ್ಕಾರಿ ಸೀಟುಗಳು)
2. ಅನುದಾನಿತ 100 (ಸರ್ಕಾರಿ 75, ಆಡಳಿತ ಮಂಡಳಿ 25)
3. ಅನುದಾನರಹಿತ 100 (ಸರ್ಕಾರಿ 50,ಆಡಳಿತ ಮಂಡಳಿ 50)

ಇ) ಸರ್ಕಾರಿ ಸೀಟುಗಳು : ರೂ.05125.00
ಅನುದಾನಿತ ಕಾಲೇಜುಗಳಲ್ಲಿ ಸರ್ಕಾರಿ ಸೀಟು : ರೂ.06125.00
ಅನುದಾನರಹಿತ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳು: ರೂ.10,125.00
ಅನುದಾನರಹಿತ ಕಾಲೇಜುಗಳಲ್ಲಿ ಖಾಸಗಿ ಸೀಟುಗಳು: ರೂ.35.000.00

ಈ)

ಕ್ರ ಸಂ.	ವಿಶ್ವವಿದ್ಯಾಲಯದ ಹೆಸರು	ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ
1	ಮೈಸೂರು ವಿಶ್ವವಿದ್ಯಾನಿಲಯ	97.37%
2	ಬೆಂಗಳೂರು ವಿಶ್ವವಿದ್ಯಾನಿಲಯ	4401
3	ಕರ್ನಾಟಕ ವಿಶ್ವವಿದ್ಯಾನಿಲಯ	91.75%
4	ಕುವೆಂಪು ವಿಶ್ವವಿದ್ಯಾನಿಲಯ	91.75%
5	ಮಂಗಳೂರು ವಿಶ್ವವಿದ್ಯಾನಿಲಯ	96.65%
6	ಗುಲ್ಬರ್ಗ ವಿಶ್ವವಿದ್ಯಾನಿಲಯ	94.58%
7	ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ	98.27%
8	ತುಮಕೂರು ವಿಶ್ವವಿದ್ಯಾನಿಲಯ	85.47%

ಉ) ಕಳೆದ ಮೂರು ವರ್ಷಗಳಲ್ಲಿ ಉದ್ಯೋಗಾವಕಾಶವನ್ನು ಪಡೆದಿರುವ ಅಭ್ಯರ್ಥಿಗಳ ಸಂಖ್ಯೆ :

2006–07 – 5984
2007–08 – 5282
2008–09 – 0099*

*ಅಂಗವಿಕಲರಿಗೆ ವಿಶೇಷ ನೇಮಕಾತಿ

789 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪೂರ ಜಿಲ್ಲೆ, ಬಸವನಬಾಗೇವಾಡಿ ಮತಕ್ಷೇತ್ರದಲ್ಲಿ ಪಶು ಆಸ್ಪತ್ರೆಗಳನ್ನು ಸ್ಥಾಪಿಸುವುದು ಅತ್ಯವಶ್ಯಕತೆ ಬಗ್ಗೆ ಹಾಗೂ ಈಗಿರುವ ತಾಲ್ಲೂಕು ಪಶು ಚಿಕಿತ್ಸಾ ಸಂಚಾರ ವಾಹನದಲ್ಲಿನ ಸಿಬ್ಬಂದಿ ಕೊರತೆ ಹಾಗೂ ಅತ್ಯವಶ್ಯಕವಾಗಿರುವ ಸಿಬ್ಬಂದಿಗಳ ಕೊರತೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಂದ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗುತ್ತದೆ. ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ತಾಲ್ಲೂಕಿನಲ್ಲಿ 2003ರ ಜಾನುವಾರು ಗಣತಿಯಂತೆ 75150 ಜಾನುವಾರು ಘಟಕಗಳಿದ್ದು, ಅದರಂತೆ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ 15 ಪಶುವೈದ್ಯಕೀಯ ಸಂಸ್ಥೆಗಳ ಅಗತ್ಯವಿರುತ್ತದೆ. ಆದರೆ ಹಾಲಿ 22 ಪಶುವೈದ್ಯಕೀಯ ಸಂಸ್ಥೆಗಳಿದ್ದು, 7 ಸಂಸ್ಥೆಗಳು ಹೆಚ್ಚುವರಿಯಾಗಿರುತ್ತದೆ. ಆದುದರಿಂದ ಸದರಿ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ನೂತನವಾಗಿ ಪಶುವೈದ್ಯಕೀಯ ಆಸ್ಪತ್ರೆ ತೆರೆಯುವ ಅವಶ್ಯಕತೆವಿರುವುದಿಲ್ಲ. ಬಸವನ ಬಾಗೇವಾಡಿ ಸಂಚಾರಿ ಪಶುಚಿಕಿತ್ಸಾಲಯಕ್ಕೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

789 Sri Bellubbi Sangappa Kallappa (Basavanabagewadi) : Hon'ble Minister for Animal Husbandry kindly answer to the below question?

a) Whether shortage of Veterinary Hospital at Basavanabagevadi constituency of Bijapur District, staff at the exisiting Mobile Veterinary Dispensary, has it come to the notice of the Government;

b) If so, what action has been taken by the Government?

Sri Revunaik Belamagi (Minister for Animal Husbandry):

a) As per 2003 Cattle Census, there are 75150 Cattle Hnits in Basavanabagevadi Taluk. As per the recommendation of National Commission on Agriculture, there should be one veterinary institution for every 5000 Cattle Units. Accordingly Basavana bagevadi Taluk requires 15 Veterinary Institutions but has got 22 Veterinary Institution, which is excess by 7 Institutions. Hence, there is no need to open new Veterinary Institution in that constituency. The scarcity of staff in Mobile Veterinary Dispensary at Basavanabagewadi taluk has not come to the notice of Government.

b) This will be examined and take necessary action as per rules.

1151 ಶ್ರೀ ಬಚ್ಚೇಗೌಡ ಕೆ.ಪಿ. : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪಶುಸಂಗೋಪನಾ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಈ ಕಾಲೇಜುಗಳನ್ನು ಯಾವ ಯಾವ ವರ್ಷ ಮಂಜೂರು ಮಾಡಲಾಗಿದೆ ಹಾಗೂ ಕಳೆದ ಮೂರು ವರ್ಷಗಳಿಂದ ಮಂಜೂರಾದ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಇ) ಸರ್ಕಾರಿ ಪಶುಸಂಗೋಪನಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡಲು ಅವಕಾಶವಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಕಾಲೇಜುವಾರು ಮಾಹಿತಿ ನೀಡುವುದು);

ಈ) ಈಗಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು;

ಉ) ಹಾಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು; ವಿಷಯವಾರು ಮಾಹಿತಿ ನೀಡುವುದು; ಉಪನ್ಯಾಸಕರ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು ನಾಲ್ಕು ಸರ್ಕಾರಿ ಪಶುವೈದ್ಯಕೀಯ ಮಹಾ ವಿದ್ಯಾನಿಲಯಗಳಿದ್ದು ಅವುಗಳು ಬೆಂಗಳೂರು, ಬೀದರ್, ಶಿವಮೊಗ್ಗ ಹಾಗೂ ಹಾಸನದಲ್ಲಿರುತ್ತವೆ.

ಆ) ರಾಜ್ಯದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯಗಳು ಸ್ಥಾಪನೆಗೊಂಡ ವರ್ಷ ಕೆಳಗಿನಂತಿದೆ:

ಬೆಂಗಳೂರು–1958, ಬೀದರ್–1984, ಶಿವಮೊಗ್ಗ–2006 ಹಾಗೂ ಹಾಸನ–2007.

ಕಳೆದ ಮೂರು ವರ್ಷಗಳಲ್ಲಿ 2 ಸರ್ಕಾರಿ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ. ಅವುಗಳು ಯಾವುವೆಂದರೆ ಶಿವಮೊಗ್ಗ ಮತ್ತು ಹಾಸನ ಪಶುವೈದ್ಯಕೀಯ ಕಾಲೇಜುಗಳು.

ಇ) ಅವಕಾಶವಿರುವ ವಿದ್ಯಾರ್ಥಿಗಳ ಸಂಖ್ಯೆ 60. ಕರ್ನಾಟಕದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಶೈಕ್ಷಣಿಕ ವರ್ಷ 2009–10ನೇ ಸಾಲಿಗೆ ಒಟ್ಟು 196 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಇರುತ್ತದೆ. ಮಹಾವಿದ್ಯಾಲಯವಾರು ಪ್ರವೇಶ ಅವಕಾಶ ಈ ಕೆಳಗಿನಂತಿದೆ:

1) ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು–60
2) ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ್–51
3) ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ–45
4) ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ–40

ವಿದ್ಯಾರ್ಥಿಗಳ ಸಂಖ್ಯೆ 60 ಮುಟ್ಟುವವರೆವಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ ಮತ್ತು ಹಾಸನಗಳಿಗೆ ಪ್ರತಿ ವರ್ಷ 5 ವಿದ್ಯಾರ್ಥಿಗಳ ಪ್ರವೇಶ ಹೆಚ್ಚಳವಿರುತ್ತದೆ.

ಈ) ಇಲ್ಲ. ಇದಕ್ಕೆ ಮುಖ್ಯ ಕಾರಣ ಶಿವಮೊಗ್ಗ ಮತ್ತು ಹಾಸನ ಪಶುವೈದ್ಯಕೀಯ ಮಹಾವಿದ್ಯಾಲಯಗಳನ್ನು ನೂತನವಾಗಿ ಸ್ಥಾಪಿಸಿದ್ದು ಅವಶ್ಯಕತೆಯಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಇತ್ತೀಚೆಗಷ್ಟೆ ವಿಶ್ವವಿದ್ಯಾಲಯವು ವ್ಯವಸ್ಥಾಪಕ ಮಂಡಳಿ ಅನುಮೋದನೆ ಪಡೆದು ಸೃಷ್ಟಿಸಿದೆ. ಆದಕಾರಣ, ಸದರಿ ಹುದ್ದೆಗಳನ್ನು ಶೀಘ್ರವಾಗಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ವಿಶ್ವವಿದ್ಯಾಲಯದಲ್ಲಿ ವಿವಿಧ ವಿಭಾಗಗಳಲ್ಲಿ ಲಭ್ಯವಿರುವ ಹುದ್ದೆಗಳ ವಿವರ ಕೆಳಗಿನಂತಿದೆ :

ವಿಭಾಗ	ಪಶುವೈದ್ಯಕೀಯ ವಿಭಾಗ			ಹೈನುಗಾರಿಕಾ ವಿಭಾಗ			ಮೀನುಗಾರಿಕಾ ವಿಭಾಗ		
ಹುದ್ದೆ	ಒಟ್ಟು	ಭರ್ತಿ	ಖಾಲಿ	ಒಟ್ಟು	ಭರ್ತಿ	ಖಾಲಿ	ಒಟ್ಟು	ಭರ್ತಿ	ಖಾಲಿ
ಪ್ರಾಧ್ಯಾಪಕರು	31	08	23	04	01	03	07	00	07
ಸಹ ಪ್ರಾಧ್ಯಾಪಕರು	50	10	40	08	04	04	15	01	14
ಸಹಾಯಕ ಪ್ರಾಧ್ಯಾಪಕರು	114	64	50	23	11	12	38	15	23
ಒಟ್ಟು	**195**	**82**	**113**	**35**	**16**	**19**	**60**	**16**	**44**

ಮೇಲಿನ ಹುದ್ದೆಗಳನ್ನು ಹೊರತುಪಡಿಸಿ ಪಶುವೈದ್ಯಕೀಯ ವಿಭಾಗದಲ್ಲಿ 21 ಜನ ಮತ್ತು ಮೀನುಗಾರಿಕಾ ವಿಭಾಗದಲ್ಲಿ 16 ಜನ ಬೋಧಕರು ಇನ್‌ಸ್ಟ್ರಕ್ಟರ್ (Instructor) ಕೆಲಸ ನಿರ್ವಹಿಸುತ್ತಿದ್ದಾರೆ. ವಿಶ್ವ ವಿದ್ಯಾಲಯವು ವ್ಯವಸ್ಥಾಪಕ ಮಂಡಳಿ ಅನುಮೋದನೆ ಪಡೆದು ಹೊಸ ಮಹಾವಿದ್ಯಾಲಯಗಳಾದ ಹಾಸನ ಮತ್ತು ಶಿವಮೊಗ್ಗಕ್ಕೆ ಬೇಕಾದ ಹುದ್ದೆಗಳನ್ನು ಸೃಷ್ಟಿಸಿದೆ. ಸದರಿ ಹುದ್ದೆಗಳನ್ನು ತ್ವರಿತವಾಗಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

1151 Sri Bachegowda K.P. : Hon'ble Minister for Animal Husandry kindly answer to the below question?

a) How many Government Veterinary Colleges are there in the State? (District wise information)

b) When these Government Colleges started functioning and how many colleges have been sanctioned during the last three years?

c) What is the intake capacity of these Government Veterinary Colleges (Give College wise information)?

d) Whether sufficient teachers are available as per the student strength, if not provide reasons?

e) Give faculty wise vacancy of teaching staff. What measures Government has taken to fill up the vacancies?

Sri Revunayak Belamagi (Minister for Animal Husbandry) :

a) There are four Veterinary Colleges in the State and they are situated at Bangalore, Bidar, Shivamoga and Hassan.

b) The year of establishment of four Government Colleges functioning in the State are as follows;

Bangalore-1958, Bidar-1984, Shivmoga-2006 and Hassan-2007.

During the last three years, two Government Colleges have been started at Shimoga & Hassan.

c) The Total intake capacity of all the Veterinary Colleges in the State is 196 during the academic year 2009-10. The college wise intake capacity are as follows;

Veterinary College, Bangalore	- 60
Veterinary College, Bidar	- 51
Veterinary College, Shivamoga	- 45
Veterinary College, Hassan	- 40

The intake to Veterinary College, Shimoga and Hassan increases by 5 seats annually till the it reaches 60.

d) No. Since the colleges at Shimoga and Hassan and Teaching and Non-Teaching staff created recently. Action will be taken to fill up newly created posts early.

e) The vacancy position of teaching staff in different faculties of the University are given below.

Faculty	Veterinary Science			Dairy Science			Fisheries Science		
Posts	Total	Filled	Vacant	Total	Filled	Vacant	Total	Filled	Vacant
Prof.	31	08	23	04	01	03	07	00	07
Ass Prof.	50	10	40	08	04	04	15	01	14
Asst Prof	114	64	50	23	11	12	38	15	23
Total	**195**	**82**	**113**	**35**	**16**	**19**	**60**	**16**	**44**

In addition to above there are 21 Teachers in Veterinary faculty and 16 Teachers in Fisheries faculty who are holding original post of Instructors. The University has created Teaching and Non-Teaching posts to Veterinary College Shimoga and Hassan, land action will be taken to fill up these posts early.

1163 ಶ್ರೀ ಬಾಲಕೃಷ್ಣ ಹೆಚ್.ಸಿ. : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪಶುಸಂಗೋಪನಾ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಈ ಕಾಲೇಜುಗಳನ್ನು ಯಾವ ಯಾವ ವರ್ಷ ಮಂಜೂರು ಮಾಡಲಾಗಿದೆ ಹಾಗೂ ಕಳೆದ ಮೂರು ವರ್ಷಗಳಿಂದ ಮಂಜೂರಾದ ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಇ) ಸರ್ಕಾರಿ ಪಶುಸಂಗೋಪನಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡಲು ಅವಕಾಶವಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಕಾಲೇಜುವಾರು ಮಾಹಿತಿ ನೀಡುವುದು);

ಈ) ಈಗಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆಯೇ; ಹಾಗಿಲ್ಲದಿದ್ದಲ್ಲಿ ಕಾರಣಗಳೇನು;

ಉ) ಹಾಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು; ವಿಷಯವಾರು ಮಾಹಿತಿ ನೀಡುವುದು; ಉಪನ್ಯಾಸಕರ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು ನಾಲ್ಕು ಸರ್ಕಾರಿ ಪಶುವೈದ್ಯಕೀಯ ಮಹಾ ವಿದ್ಯಾನಿಲಯಗಳಿದ್ದು ಅವುಗಳು ಬೆಂಗಳೂರು, ಬೀದರ್, ಶಿವಮೊಗ್ಗ ಹಾಗೂ ಹಾಸನದಲ್ಲಿರುತ್ತವೆ.

ಆ) ರಾಜ್ಯದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯಗಳು ಸ್ಥಾಪನೆಗೊಂಡ ವರ್ಷ ಕೆಳಗಿನಂತಿದೆ:

ಬೆಂಗಳೂರು–1958, ಬೀದರ್–1984, ಶಿವಮೊಗ್ಗ–2006 ಹಾಗೂ ಹಾಸನ–2007.

ಕಳೆದ ಮೂರು ವರ್ಷಗಳಲ್ಲಿ 2 ಸರ್ಕಾರಿ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ. ಅವುಗಳು ಯಾವುವೆಂದರೆ ಶಿವಮೊಗ್ಗ ಮತ್ತು ಹಾಸನ ಪಶುವೈದ್ಯಕೀಯ ಕಾಲೇಜುಗಳು.

ಇ) ಅವಕಾಶವಿರುವ ವಿದ್ಯಾರ್ಥಿಗಳ ಸಂಖ್ಯೆ 60. ಕರ್ನಾಟಕದಲ್ಲಿರುವ ಪಶುವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಶೈಕ್ಷಣಿಕ ವರ್ಷ 2009–10ನೇ ಸಾಲಿಗೆ ಒಟ್ಟು 196 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಇರುತ್ತದೆ. ಮಹಾವಿದ್ಯಾಲಯವಾರು ಪ್ರವೇಶ ಅವಕಾಶ ಈ ಕೆಳಗಿನಂತಿದೆ:

1) ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು–60
2) ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ್–51
3) ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ–45
4) ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ–40

ವಿದ್ಯಾರ್ಥಿಗಳ ಸಂಖ್ಯೆ 60 ಮುಟ್ಟುವವರೆವಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ ಮತ್ತು ಹಾಸನಗಳಿಗೆ ಪ್ರತಿ ವರ್ಷ 5 ವಿದ್ಯಾರ್ಥಿಗಳ ಪ್ರವೇಶ ಹೆಚ್ಚಳವಿರುತ್ತದೆ.

ಈ) ಇಲ್ಲ. ಇದಕ್ಕೆ ಮುಖ್ಯ ಕಾರಣ ಶಿವಮೊಗ್ಗ ಮತ್ತು ಹಾಸನ ಪಶುವೈದ್ಯಕೀಯ ಮಹಾವಿದ್ಯಾಲಯಗಳನ್ನು ನೂತನವಾಗಿ ಸ್ಥಾಪಿಸಿದ್ದು ಅವಶ್ಯಕತೆಯಿರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಇತ್ತೀಚೆಗಷ್ಟೆ ವಿಶ್ವವಿದ್ಯಾಲಯವು ವ್ಯವಸ್ಥಾಪಕ ಮಂಡಳಿ ಅನುಮೋದನೆ ಪಡೆದು ಸೃಷ್ಟಿಸಿದೆ. ಆದಕಾರಣ, ಸದರಿ ಹುದ್ದೆಗಳನ್ನು ಶೀಘ್ರವಾಗಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಉ) ವಿಶ್ವವಿದ್ಯಾಲಯದಲ್ಲಿ ವಿವಿಧ ವಿಭಾಗಗಳಲ್ಲಿ ಲಭ್ಯವಿರುವ ಹುದ್ದೆಗಳ ವಿವರ ಕೆಳಗಿನಂತಿದೆ :

ವಿಭಾಗ	ಪಶುವೈದ್ಯಕೀಯ ವಿಭಾಗ			ಹೈನುಗಾರಿಕಾ ವಿಭಾಗ			ಮೀನುಗಾರಿಕಾ ವಿಭಾಗ		
ಹುದ್ದೆ	ಒಟ್ಟು	ಭರ್ತಿ	ಖಾಲಿ	ಒಟ್ಟು	ಭರ್ತಿ	ಖಾಲಿ	ಒಟ್ಟು	ಭರ್ತಿ	ಖಾಲಿ
ಪ್ರಾಧ್ಯಾಪಕರು	31	08	23	04	01	03	07	00	07
ಸಹ ಪ್ರಾಧ್ಯಾಪಕರು	50	10	40	08	04	04	15	01	14
ಸಹಾಯಕ ಪ್ರಾಧ್ಯಾಪಕರು	114	64	50	23	11	12	38	15	23
ಒಟ್ಟು	**195**	**82**	**113**	**35**	**16**	**19**	**60**	**16**	**44**

ಮೇಲಿನ ಹುದ್ದೆಗಳನ್ನು ಹೊರತುಪಡಿಸಿ ಪಶುವೈದ್ಯಕೀಯ ವಿಭಾಗದಲ್ಲಿ 21 ಜನ ಮತ್ತು ಮೀನುಗಾರಿಕಾ ವಿಭಾಗದಲ್ಲಿ 16 ಜನ ಬೋಧಕರು ಇನ್ಸ್ಟ್ರಕ್ಟರ್ (Instructor) ಕೆಲಸ ನಿರ್ವಹಿಸುತ್ತಿದ್ದಾರೆ. ವಿಶ್ವ ವಿದ್ಯಾಲಯವು ವ್ಯವಸ್ಥಾಪಕ ಮಂಡಳಿ ಅನುಮೋದನೆ ಪಡೆದು ಹೊಸ ಮಹಾವಿದ್ಯಾಲಯಗಳಾದ ಹಾಸನ ಮತ್ತು ಶಿವಮೊಗ್ಗಕ್ಕೆ ಬೇಕಾದ ಹುದ್ದೆಗಳನ್ನು ಸೃಷ್ಟಿಸಿದೆ. ಸದರಿ ಹುದ್ದೆಗಳನ್ನು ತ್ವರಿತವಾಗಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

1163 Sri Balakrishna. H.C. : Hon'ble Minister for Animal Husandry kindly answer to the below question?

a) How many Government Veterinary Colleges are there in the State? (District wise information)

b) When these Government Colleges started functioning and how many colleges have been sanctioned during the last three years?

c) What is the intake capacity of these Government Veterinary Colleges (Give College wise information)?

d) Whether sufficient teachers are available as per the student strength, if not provide reasons?

e) Give faculty wise vacancy of teaching staff. What measures Government has taken to fill up the vacancies?

Sri Revunayak Belamagi (Minister for Animal Husbandry) :

a) There are four Veterinary Colleges in the State and they are situated at Bangalore, Bidar, Shivamoga and Hassan.

b) The year of establishment of four Government Colleges functioning in the State are as follows;

Bangalore-1958, Bidar-1984, Shivmoga-2006 and Hassan-2007.

During the last three years, two Government Colleges have been started at Shimoga & Hassan.

c) The Total intake capacity of all the Veterinary Colleges in the State is 196 during the academic year 2009-10. The college wise intake capacity are as follows;

Veterinary College, Bangalore	- 60
Veterinary College, Bidar	- 51
Veterinary College, Shivamoga	- 45
Veterinary College, Hassan	- 40

The intake to Veterinary College, Shimoga and Hassan increases by 5 seats annually till the it reaches 60.

d) No. Since the colleges at Shimoga and Hassan and Teaching and Non-Teaching staff created recently. Action will be taken to fill up newly created posts early.

e) The vacancy position of teaching staff in different faculties of the University are given below.

Faculty	Veterinary Science			Dairy Science			Fisheries Science		
Posts	Total	Filled	Vacant	Total	Filled	Vacant	Total	Filled	Vacant
Prof.	31	08	23	04	01	03	07	00	07
Ass Prof	50	10	40	08	04	04	15	01	14
Asst Prof	114	64	50	23	11	12	38	15	23
Total	195	82	113	35	16	19	60	16	44

In addition to above there are 21 Teachers in Veterinary faculty and 16 Teachers in Fisheries faculty who are holding original post of Instructors. The University has created Teaching and Non-Teaching posts to Veterinary College Shimoga and Hassan, land action will be taken to fill up these posts early.

793 **ಶ್ರೀ ಸುರೇಶ್‌ಗೌಡ (ನಾಗಮಂಗಲ)** : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ, ಪಶುಘಟಕಗಳು ಹಾಗೂ ಪಶುಚಿಕಿತ್ಸಾಲಯಗಳು ಇವೆ?

ಆ) ಈ ಪ್ರಾಥಮಿಕ ಪಶು ಘಟಕಗಳು/ಪಶು ಚಿಕಿತ್ಸಾಲಯಗಳು ಎಷ್ಟು ಸ್ವಂತ ಕಟ್ಟಡಗಳನ್ನು ಹೊಂದಿವೆ ಹಾಗೂ ಎಷ್ಟಕ್ಕೆ ಸ್ವಂತ ಕಟ್ಟಡಗಳಿರುವುದಿಲ್ಲ. (ವಿವರ ನೀಡುವುದು);

ಇ) ಈ ಪ್ರಾಥಮಿಕ ಪಶು ಘಟಕಗಳನ್ನು ಪಶು ಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಈ) ಸ್ವಂತ ಕಟ್ಟಡಗಳಿಲ್ಲದ ಪಶು ಘಟಕಗಳಿಗೆ ಹಾಗೂ ಪಶು ಚಿಕಿತ್ಸಾಲಯಗಳಿಗೆ ಹೊಸ ಕಟ್ಟಡ ನಿರ್ಮಾಣ ಮಾಡಲು ಸರ್ಕಾರವು ಅನುದಾನ ಬಿಡುಗಡೆ ಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ನಾಗಮಂಗಲ ತಾಲ್ಲೂಕಿನಲ್ಲಿ ಹಾಲಿ 4 ಪಶುವೈದ್ಯಕೀಯ ಆಸ್ಪತ್ರೆಗಳು, 9 ಪಶು ಚಿಕಿತ್ಸಾಲಯಗಳು ಮತ್ತು 13 ಪ್ರಾಥಮಿಕ ಪಶು ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

ಆ) 3 ಪಶು ವೈದ್ಯಕೀಯ ಆಸ್ಪತ್ರೆಗಳು, 5 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು ಮತ್ತು 6 ಪಶು ಚಿಕಿತ್ಸಾಲಯಗಳು ಸ್ವಂತ ಕಟ್ಟಡ ಹೊಂದಿದ್ದು, 1 ಪಶು ವೈದ್ಯಕೀಯ ಆಸ್ಪತ್ರೆ, 8 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಮತ್ತು 3 ಪಶುಚಿಕಿತ್ಸಾಲಯಗಳು ಸ್ವಂತ ಕಟ್ಟಡ ಹೊಂದಿರುವುದಿಲ್ಲ. ವಿವರಗಳು ಅನುಬಂಧದಲ್ಲಿ ನೋಡುವುದು.

ಇ) ಪ್ರಸ್ತಾವನೆ ಬಂದಿರುವುದಿಲ್ಲ.

ಈ) ನಾಗಮಂಗಲ ತಾಲ್ಲೂಕಿಗೆ ಕೇಂದ್ರ ಸ್ಥಾನದಲ್ಲಿ ಪಶುವೈದ್ಯಕೀಯ ಆಸ್ಪತ್ರೆ ಕಟ್ಟಡಕ್ಕಾಗಿ ರೂ.50 ಲಕ್ಷಗಳು ಬಿಡುಗಡೆಯಾಗಿದ್ದು ಕಟ್ಟಡ ನಿರ್ಮಾಣ ಮಾಡಲು ನಿರ್ಮಿತಿ ಕೇಂದ್ರದವರಿಗೆ ವಹಿಸಲಾಗಿದ್ದು ಕಾಮಗಾರಿ ಪ್ರಾರಂಭವಾಗಬೇಕಾಗಿದೆ.

ಟಿ. ಚನ್ನಪುರಕ್ಕೆ ಹಿಂದುಳಿದ ತಾಲ್ಲೂಕುಗಳಲ್ಲಿ ಪಶು ಚಿಕಿತ್ಸಾಲಯ ತೆರೆಯುವ ಯೋಜನೆಯಡಿಯಲ್ಲಿ ಹಣ ಬಿಡುಗಡೆಯಾಗಿದ್ದು ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯದವರು ಕಾಮಗಾರಿ ಪ್ರಾರಂಭ ಮಾಡಬೇಕಾಗಿದೆ. ಆರ್.ಐ.ಡಿ.ಎಫ್. 11ರಡಿಯಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಕೆಲಗೆರೆ, ಅಂಚೆಚಿಟ್ಟನಹಳ್ಳಿ ಹಾಗೂ ಪಶು ಚಿಕಿತ್ಸಾಲಯ ಹಾಲ್ತಿಗಳಲ್ಲಿ ಮಂಜೂರಾತಿ ದೊರೆತಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಆರ್.ಐ.ಡಿ.ಎಫ್. 13ರ ಅಡಿಯಲ್ಲಿ ಬೃಹ್ಮದೇವರ ಹಳ್ಳಿಯ ಪಶುಚಿಕಿತ್ಸಾಲಯ ಕಟ್ಟಡಕ್ಕೆ ಮಂಜೂರಾತಿ ದೊರೆತಿದ್ದು ಕಾಮಗಾರಿ ಪ್ರಾರಂಭವಾಗಬೇಕಾಗಿದೆ.

ಸ್ವಂತ ಕಟ್ಟಡವಿಲ್ಲದ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಿಗೆ ನಿವೇಶನಗಳು ದೊರೆತು ಇಲಾಖೆಯ ಹೆಸರಿನಲ್ಲಿ ನೋಂದಣಿಯಾದ ನಂತರ ಆರ್.ಐ.ಡಿ.ಎಫ್. ಯೋಜನೆಯಡಿಯಲ್ಲಿ ಕಟ್ಟಡ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಅನುಬಂಧ

ಕ್ರ ಸಂ.	ಪಶುವೈದ್ಯ ಸಂಸ್ಥೆಗಳು	ಸ್ವಂತ ಕಟ್ಟಡ ಹೊಂದಿರುವುದು	ಸ್ವಂತ ಕಟ್ಟಡ ಇಲ್ಲದಿರುವುದು
1	ಪಶುವೈದ್ಯಕೀಯ ಆಸ್ಪತ್ರೆ	1. ಬೆಳ್ಳೂರು 2. ಆದಿಚುಂಚನಗಿರಿ 3. ಕದಬಹಳ್ಳಿ	ಪಶುವೈದ್ಯಕೀಯ ಆಸ್ಪತ್ರೆ (ಪಾಲಿ ಕೀನಿಕ್) ನಾಗಮಂಗಲ
2	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	1. ತಟ್ಟೆಕೆರೆ 2. ಕಾಳಿಂಗನಹಳ್ಳಿ 3. ದೊಡ್ಡಜಟಕಾ 4. ಕಾಂತಾಪುರ 5. ಚೀಣ್ಯ	1. ಕೆಲಗೆರೆ 2. ಅಂಚೆಚಿಟ್ಟನಹಳ್ಳಿ 3. ಬಿಂಡೇನಹಳ್ಳಿ 4. ತಿರುಮಲಾಪುರ 5. ಚಾಕೇನಹಳ್ಳಿ 6. ಲಾಳನಕೆರೆ 7. ಸಾತೇನಹಳ್ಳಿ 8. ದೊಡ್ಡಜಕ್ಕನಹಳ್ಳಿ
3	ಪಶು ಚಿಕಿತ್ಸಾಲಯಗಳು	1. ಹೊಣಕೆರೆ 2. ಬಿಂದಿಗನವಿಲೆ 3. ದೇವಲಾಪುರ 4. ಬೋಗಾಧಿ 5. ಬೀಮನಹಳ್ಳಿ 6. ಹರದನಹಳ್ಳಿ	1. ಹಾಲ್ತಿ 2. ಟಿ.ಚಹ್ನಾಪುರ 3. ಬ್ರಹ್ಮದೇವರಹಳ್ಳಿ

793 Sri Suresh Gowda (Nagamangala) : Hon'ble Minister for Animal Husbandry kindly answer to the below question?

a) How many Primary Veterinary Centers, Veterinary Dispensaries are there in Nagamangala Taluk?

b) How many Veterinary Institutions have their own buildings and how many do not have? (give particulars)

c) What is the action taken by the Government to upgrade the Primary Veterinary Centers?

d) What is the action taken by the Government to release the grant for construction of new buildings, which are not having the buildings?

Sri Revunaik Belamagi (Minister for Animal Husbandry):

a) There are 4 Veterinary Hospitals, 9 Veterinary Dispensaries and 13 Primary Veterinary Centers working in Nagamangala Taluk.

b) 3 Veterinary Hospitals, 5 Primary Veterinary Centers and 6 Vetierinary Dispensaries hane own buildings and I Veterinary Hospital, 8 Primary Veterinary Centers and 3 Veterinary Dispensaries do not have own buildings. Details are at Annexure.

c) Proposal not received

d) Rs.50.00 lakhs is released for the construction of Veterinary Hospital at Taluk headquarter of Nagamangala. The construction work is assigned to Nirmitha Kendra and the work is yet to be started. Under the scheme opening of Veterinary Dispensaries in Backward Taluks budget has been released to T. Chennapura. Work is entrusted to Executive Engineer, Zilla Panchayath, Mandya and the same is yet to be started.

Under RIDF XI construction of building for Veterinary Dispensary Halthi and Primary Veterinary Center at Anchechattanhally and Kelagere have been sanctioned and work is under progress. Under RIDF XIII sanction is accorded for construction of building to Veterinary Dispensary at Brahmadevarahally and the work is yet to be taken up. The Instititions, which do not have, own buildings will be included in the RIDF, provided they get sites and registered in the name of the Department.

ಅನುಬಂಧ

ಕ್ರ ಸಂ.	ಪಶುವೈದ್ಯ ಸಂಸ್ಥೆಗಳು	ಸ್ವಂತ ಕಟ್ಟಡ ಹೊಂದಿರುವುದು	ಸ್ವಂತ ಕಟ್ಟಡ ಇಲ್ಲದಿರುವುದು
1	ಪಶುವೈದ್ಯಕೀಯ ಆಸ್ಪತ್ರೆ	1. ಬೆಳ್ಳೂರು 2. ಆದಿಚುಂಚನಗಿರಿ 3. ಕದಬಹಳ್ಳಿ	ಪಶುವೈದ್ಯಕೀಯ ಆಸ್ಪತ್ರೆ (ಪಾಲಿ ಕೀನಿಕ್) ನಾಗಮಂಗಲ
2	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	1. ತಟ್ಟೆಕೆರೆ 2. ಕಾಳಿಂಗನಹಳ್ಳಿ 3. ದೊಡ್ಡಜಟಕಾ 4. ಕಾಂತಾಪುರ 5. ಚೀಣ್ಯ	1. ಕೆಲಗೆರೆ 2. ಅಂಚೆಚಿಟ್ಟನಹಳ್ಳಿ 3. ಬಿಂಡೇನಹಳ್ಳಿ 4. ತಿರುಮಲಾಪುರ 5. ಚಾಕೇನಹಳ್ಳಿ 6. ಲಾಳನಕೆರೆ 7. ಸಾತೇನಹಳ್ಳಿ 8. ದೊಡ್ಡಜಕ್ಕನಹಳ್ಳಿ
3	ಪಶು ಚಿಕಿತ್ಸಾಲಯಗಳು	1. ಹೊಣಕೆರೆ 2. ಬಿಂದಿಗನವಿಲೆ 3. ದೇವಲಾಪುರ 4. ಬೋಗಾಧಿ 5. ಬೀಮನಹಳ್ಳಿ 6. ಹರದನಹಳ್ಳಿ	1. ಹಾಲ್ತಿ 2. ಟಿ.ಚಹ್ನಾಪುರ 3. ಬ್ರಹ್ಮದೇವರಹಳ್ಳಿ

ದೇವಸ್ಥಾನಗಳಿಗೆ ಬಿಡುಗಡೆ ಮಾಡಿರುವ ಅನುದಾನ

883 ಶ್ರೀ ನಾಗೇಂದ್ರ ಬಿ : ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕಿನಲ್ಲಿರುವ ವಿವಿಧ ದೇವಸ್ಥಾನಗಳು ಯಾವುವು ಹಾಗೂ ಇದರಲ್ಲಿ ಮುಜರಾಯಿ ಇಲಾಖೆಯ ವಶದಲ್ಲಿರುವ ದೇವಸ್ಥಾನಗಳು ಯಾವುವು (ಗ್ರಾಮವಾರು ವಿವರ ನೀಡುವುದು);

ಆ) ಕಳೆದ ಎರಡು ವರ್ಷಗಳಿಂದ ವಿವಿಧ ದೇವಸ್ಥಾನಗಳಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು (ವಿವರ ನೀಡುವುದು);

ಇ) ಕಳೆದ ಎರಡು ವರ್ಷಗಳಿಂದ ಮುಜರಾಯಿ ಇಲಾಖೆ ವತಿಯಿಂದ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಕೈಗೊಂಡ ಕಾಮಗಾರಿಗಳು ಯಾವ ಹಂತದಲ್ಲಿದೆ (ವಿವರ ನೀಡುವುದು);

ಈ) ಕೂಡ್ಲಿಗಿ ತಾಲ್ಲೂಕಿನ ಯಾವುದಾದರೂ ದೇವಸ್ಥಾನಗಳನ್ನು ಮುಜರಾಯಿ ಹಾಗೂ ಇಲಾಖೆಯ ವಶಕ್ಕೆ ಪಡೆಯುವ ಪ್ರಸ್ತಾವವು ಸರ್ಕಾರದಲ್ಲಿದೆಯೇ (ವಿವರ ನೀಡುವುದು)?

ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕಿನಲ್ಲಿ ಒಟ್ಟು 204 ದೇವಸ್ಥಾನಗಳು ಮುಜರಾಯಿ ಇಲಾಖೆಯ ಅಧೀನದಲ್ಲಿ ಇರುತ್ತವೆ.

(ಗ್ರಾಮವಾರು ವಿವರ ಅನುಬಂಧ-I ರಲ್ಲಿ ಲಗತ್ತಿಸಿದೆ)

ಆ) 2008-09ನೇ ಸಾಲಿನಲ್ಲಿ ಕೂಡ್ಲಿಗಿ ತಾಲ್ಲೂಕಿನ ದೇವಸ್ಥಾನಗಳಿಗೆ ರೂ.6.00 ಲಕ್ಷ, (ವಿವರ ಅನುಬಂಧ- II ರಲ್ಲಿ ಲಗತ್ತಿಸಿದೆ)

ಪ್ರಸಕ್ತ ಸಾಲಿನಲ್ಲಿ ಅನುದಾನವನ್ನು ಮಂಜೂರು ಮಾಡಿರುವುದಿಲ್ಲ.

ಇ) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ವತಿಯಿಂದ ಕೈಗೊಂಡ ಕಾಮಗಾರಿಗಳ ವಿವರ ಅನುಬಂಧ- III ರಲ್ಲಿ ಲಗತ್ತಿಸಿದೆ.

ಈ) ಪ್ರಸ್ತುತ ಯಾವುದು ಇರುವುದಿಲ್ಲ.

ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆಗೆ ಸೇರಿರುವ ಧಾರ್ಮಿಕ ಸಂಸ್ಥೆಗಳ ವಿವರ

ಅನುಬಂಧ – I

ಕ್ರಸಂ.	ಸಂಸ್ಥೆಯ ಹೆಸರು	ಗ್ರಾಮ
1	ಶ್ರೀ ಗುರುಬಸವೇಶ್ವರ ಸ್ವಾಮಿ ದೇವಸ್ಥಾನ	ಕೊಟ್ಟೂರು ಪಟ್ನ
2	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಅಮಲಾಪುರ
3	ಶ್ರೀ ಹನುಮಂತರಾಯ ಸ್ವಾಮಿ ದೇವಸ್ಥಾನ	ಅಮಲಾಪುರ
4	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಅಮ್ಮನಕೆರೆ
5	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಅಯ್ಯನಕೆರೆ
6	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಹಳ್ಳಿಕಟ್ಟೆ
7	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಬನ್ನೀಕಲ್ಲು
8	ಶ್ರೀ ಈಶ್ವರ ಸ್ವಾಮಿ ದೇವಸ್ಥಾನ	ಬನ್ನೀಕಲ್ಲು
9	ಶ್ರೀ ಹನುಮಂತರಾಯ ಸ್ವಾಮಿ ದೇವಸ್ಥಾನ	ಬೀವೂರು
10	ಶ್ರೀ ಕಲ್ಲೇಶ್ವರ ಸ್ವಾಮಿ ದೇವಸ್ಥಾನ	ಬೀವೂರು
11	ಶ್ರೀ ಮೈಲಾರ ದೇವರು	ಬೀವೂರು
12	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಬಟ್ಲಾಪುರ

13	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಬಟ್ಲಾಪುರ
14	ಶ್ರೀ ಕಾಶಿ ಸಿದ್ದೇಶ್ವರ ಸ್ವಾಮಿ ದೇವಸ್ಥಾನ	ಚಿಂತಾಮಣಿ
15	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಚೌದಾಪುರ
16	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಧೂಪದಹಳ್ಳಿ
17	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಧೂಪದಹಳ್ಳಿ
18	ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ	ಧೂಪದಹಳ್ಳಿ
19	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಗಂಡುಬೊಮ್ಮನಹಳ್ಳಿ
20	ಶ್ರೀ ಕೆಟ್ಟೂರು ಬಸವೇಶ್ವರ ಸ್ವಾಮಿ ದೇವಸ್ಥಾನ	ಗಜಪುರ
21	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಗುಡೇಕೋಟೆ
22	ಶ್ರೀ ಚೌಡೇಶ್ವರಿ ದೇವಸ್ಥಾನ	ಗುಡೇಕೋಟೆ
23	ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ	ಗುಡೇಕೋಟೆ
24	ಶ್ರೀ ವೆಂಕಟರಮಣ ಸ್ವಾಮಿ ದೇವಸ್ಥಾನ	ಗುಡೇಕೋಟೆ
25	ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನ	ಗುಣಸಾಗರ
26	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ	ಹೊಲಸಾಗರ
27	ಶ್ರೀ ಗ್ರಾಮದೇವತಾ ದೇವಸ್ಥಾನ	ಹೊಲಸಾಗರ
28	ಶ್ರೀ ಚೆನಕಪ್ಪ ದೇವಸ್ಥಾನ	ಹೊಲಸಾಗರ
29	ಶ್ರೀ ಕಲ್ಲೇಶ್ವರ ಸ್ವಾಮಿ ದೇವಸ್ಥಾನ	ಹಿರೇಕೊಂಡನಹಳ್ಳಿ
30	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಹೊಸಹಳ್ಳಿ
31	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಹುಡೆಮ್
32	ಶ್ರೀ ಕೊಂಡಲಸ್ವಾಮಿ (ಕಂಪಾಲ ದೇವರು)	ಹುಡೆಮ್
33	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಹೊಸಕೆರೆ
34	ಶ್ರೀ ಸಿದ್ದೇಶ್ವರ ಸ್ವಾಮಿ ದೇವಸ್ಥಾನ	ಹೊಸಕೆರೆ
35	ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ	ಹೊಸಕೆರೆ
36	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಹ್ಯಾಲಸಿ
37	ಶ್ರೀ ಓಬಲೇಶ್ವರ ಸ್ವಾಮಿ ದೇವಸ್ಥಾನ	ಜುಂಬನಹಳ್ಳಿ
38	ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ	ಕಲ್ಲಹಳ್ಳಿ
39	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಮರೂರು
40	ಶ್ರೀ ಕೊಟ್ಟೂರಮ್ಮ ದೇವಸ್ಥಾನ	ಕೊಟ್ಟೂರು ಟೌನ್

41	ಶ್ರೀ ಕೊತ್ತಲ ಆಂಜನೇಯ ಸ್ವಾಮಿ ದೇವಸ್ಥಾನ	ಕೂಡ್ಲಿಗಿ ಟೌನ್
42	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಲೋಕಿಕೆರೆ
43	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಮದ್ದೂರು
44	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಮಂಗಾಪುರ
45	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ನಾಗೇನಹಳ್ಳಿ
46	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ರಾಮದುರ್ಗ
47	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ರಂಗನಾಥಪುರ
48	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಸಿಡಿಗಲೆ
49	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಸಿಡಿಗಲೆ
50	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಸುಂಕದಕಲ್ಲು
51	ಶ್ರೀ ತಿಮ್ಮಪ್ಪ ಸ್ವಾಮಿ ದೇವಸ್ಥಾನ	ತಿಮ್ಮಲಾಪುರ
52	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಹಿರೇಹೆಗ್ಗದಹಾಳು
53	ಶ್ರೀ ಹನುಮಂತರಾಯ ಸ್ವಾಮಿ ದೇವಸ್ಥಾನ	ಕುಂದಗೋಳ
54	ಶ್ರೀ ಪರಶುರಾಮ ಸ್ವಾಮಿ ದೇವಸ್ಥಾನ	ಗುಡೇಕೋಟೆ
55	ಶ್ರೀ ಅನಂತಸ್ವಾಮಿ ದೇವಸ್ಥಾನ	ಕೈವಲ್ಯಪುರಂ
56	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಕೆ.ಆಯ್ಯನಹಳ್ಳಿ
57	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಎಂ.ಜಿ.ಅಯ್ಯನಹಳ್ಳಿ
58	ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನ	ಚಿಕ್ಕಜೋಗೀಹಳ್ಳಿ
59	ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನ	ಮಾರಬ
60	ಶ್ರೀ ಆದಿಶಕ್ತಿ ದೇವಿ ದೇವಸ್ಥಾನ	ಚಿಕ್ಕಜೋಗೀಹಳ್ಳಿ
61	ಶ್ರೀ ಮಾಯಮ್ಮ ದೇವಿ ದೇವಸ್ಥಾನ	ಬೀರಲಗುಡ್ಡ
62	ಶ್ರೀ ವಿಠ್ಠಲ ಮಂದಿರ ದೇವಸ್ಥಾನ	ಕೊಟ್ಟೂರು
63	ಶ್ರೀ ರಾಮಲಿಂಗ ಸ್ವಾಮಿ ದೇವಸ್ಥಾನ	ಕೂಡ್ಲಿಗಿ
64	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಕುಪ್ಪಿನಕೆರೆ
65	ಶ್ರೀ ಮಾದಗಮ್ಮ ದೇವಿ ದೇವಸ್ಥಾನ	ಹಿರೇಹೆಗಹಾಲೆ
66	ಶ್ರೀ ಆಂಜನೇಯ ಸ್ವಾಮಿ, ಬಸವೇಶ್ವರ, ಮಾರಿಕಾಂಬ ದೇವಸ್ಥಾನ	ಚಿಕ್ಕಾಜಿಬನಹಳ್ಳಿ
67	ಶ್ರೀ ತುರುವಂದಿ ಬಸವೇಶ್ವರ ಸ್ವಾಮಿ ದೇವಸ್ಥಾನ	ತೂಲದಹಳ್ಳಿ

68	ಶ್ರೀ ಮಾದಗಮ್ಮ ದೇವಿ ದೇವಸ್ಥಾನ	ಗುಣಸಾಗರ
69	ಶ್ರೀ ಈಶ್ವರ ಸ್ವಾಮಿ, ಹನುಮಂತರಾಯ ದೇವಸ್ಥಾನ	ಕುದರೇದೇವು
70	ಶ್ರೀ ಊರಮ್ಮ ದೇವಿ ದೇವಸ್ಥಾನ	ಕೂಡ್ಲಿಗಿ
71	ಶ್ರೀ ಉಗ್ರನರಸಿಂಹ ಸ್ವಾಮಿ ದೇವಸ್ಥಾನ	ಓಬಲತಟ್ಟಿಹಳ್ಳಿ
72	ಶ್ರೀ ಮೂಗಬಸವೇಶ್ವರ ಸ್ವಾಮಿ ದೇವಸ್ಥಾನ	ಚಿರಾಬಿ
73	ಶ್ರೀ ಗಾಳಮ್ಮ ದೇವಿ ದೇವಸ್ಥಾನ	ಕೋಡಿಹಳ್ಳಿ
74	ಶ್ರೀ ಮುದಗಮ್ಮ ದೇವಿ ದೇವಸ್ಥಾನ	ಹಾರಲು
75	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ರಾಮನಾಯಕನಹಳ್ಳಿ
76	ಶ್ರೀ ಪಾಂಡುರಂಗಸ್ವಾಮಿ ದೇವಸ್ಥಾನ	ಬಂಡಿ ಬಸಾಪುರ ತಾಂಡ
77	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ನಂ.76 ಕಲ್ಲಹಳ್ಳಿ
78	ಶ್ರೀ ಕುರಿಹಕ್ಕಿಲಿಂಗೇಶ್ವರ ಸ್ವಾಮಿ ದೇವಸ್ಥಾನ	ಹಾಲುದೇವಲಾಪುರ ಕೆ.ಗಜಪುರ
79	ಶ್ರೀ ಜವನಹಳ್ಳಿದಾನಂತ ದುರ್ಗಮ್ಮ ದೇವಿ ದೇವಸ್ಥಾನ	ಕೊಟ್ಟೂರು
80	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಗಡ್ಡಲಗಟ್ಟಿ
81	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಸನಿಹಳ್ಳಿ
82	ಶ್ರೀ ಕೊಲ್ಲಾಪುರಮ್ಮ ದೇವಸ್ಥಾನ	ಬಪ್ನಹಳ್ಳಿ
83	ಶ್ರೀ ಮಾರಮ್ಮ ದೇವಿ	ಶ್ರೀಕರಿಂಪುರ
84	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಟಿ.ಬಸಾಪುರ
85	ಶ್ರೀ ಬಾಲಸುಗ್ರೀವ ದೇವಸ್ಥಾನ	ಚೌಡಾಪುರ
86	ಶ್ರೀ ಕೊಟಗುಡ್ಡ ಮಾರಮ್ಮದೇವಿ ದೇವಸ್ಥಾನ	ಯಾಕೋ ಬೈನಹಳ್ಳಿ
87	ಶ್ರೀ ಬಳ್ಳಾರಿ ದುರ್ಗಮ್ಮ ದೇವಿ ದೇವಸ್ಥಾನ	ಕಾಸಾಪುರ
88	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಹುಲಿಕೆರೆ
89	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಕ್ಯಾಸನಕೆರೆ
90	ಶ್ರೀ ಬೀರಲಿಂಗೇಶ್ವರ ಸ್ವಾಮಿ ದೇವಸ್ಥಾನ	ಉಜ್ಜಿನಿ
91	ಶ್ರೀ ಕಾಳಿಕಾ ದೇವಿ ದೇವಸ್ಥಾನ	ಉಜ್ಜಿನಿ
92	ಶ್ರೀ ದುರ್ಗಮ್ಮ ದೇವಿ ದೇವಸ್ಥಾನ	112 ರಾಮಪುರ ಕೊಟ್ಟೂರು

		ಹೋಬಳಿ
93	ಶ್ರೀ ಜರೀಬೀದುರ್ಗಮ್ಮ ದೇವಿ ದೇವಸ್ಥಾನ	ಕನಮಡಗು
94	ಶ್ರೀ ಮರಿವಾಲೇಶ್ವರ ಸ್ವಾಮಿ ದೇವಸ್ಥಾನ	ಕನಮಡಗು
95	ಶ್ರೀ ಪಾರ್ವತಿ ಪರಮೇಶ್ವರ ಸ್ವಾಮಿ	ಗುಡಿಕೋಟೆ
96	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಹಿರೇವಡೇರಹಳ್ಳಿ
97	ಶ್ರೀ ಗಾಡಿಲಿಂಗೇಶ್ವರ ಸ್ವಾಮಿ ದೇವಸ್ಥಾನ	ಹುಲಿಕೆರೆ
98	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಸುಲದಹಳ್ಳಿ
99	ಶ್ರೀ ದುರ್ಗಮ್ಮ ದೇವಿ ದೇವಸ್ಥಾನ	ಹುಡೆಮ್
100	ಶ್ರೀ ತಿಮ್ಮಪ್ಪಸ್ವಾಮಿ ದೇವಸ್ಥಾನ	ಅಲ್ಲೂರಗೊಲ್ಲರಹಟ್ಟಿ
101	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಆಲೂರು
102	ಶ್ರೀ ಕೋಟಿಲಿಂಗೇಶ್ವರ ಸ್ವಾಮಿ ದೇವಸ್ಥಾನ	ಹುಲಿಕೆರೆ
103	ಶ್ರೀ ವಿನಾಯಕ ದೇವಸ್ಥಾನ	ಗುಂಡುಮನಗು
104	ಶ್ರೀ ಕಂಬಿ ಬಸವೇಶ್ವರ ದೇವಸ್ಥಾನ	ಕನಮಡಗು
105	ಶ್ರೀ ವೀರನಾಗಣ್ಣಸ್ವಾಮಿ ದೇವಸ್ಥಾನ	ಕನಮಡಗು
106	ಶ್ರೀ ಚಿಕ್ಕ ನಾಗಮ್ಮ ದೇವಸ್ಥಾನ	ಕನಮಡಗು
107	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ವೀರೂಪಪುರ
108	ಶ್ರೀ ಬ್ರಹ್ಮಲಿಂಗೇಶ್ವರ ಸ್ವಾಮಿ ದೇವಸ್ಥಾನ	ಹರಕನಾಳು
109	ಶ್ರೀ ಊರಮ್ಮ ದೇವಿ ದೇವಸ್ಥಾನ	ಶಿವಪುರ
110	ಶ್ರೀ ಕಾಳಮ್ಮ ದೇವಿ ದೇವಸ್ಥಾನ	ಕೊಟ್ಟೂರು ಪಟ್ನ
111	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಜೈನಕನಹಳ್ಳಿ
112	ಶ್ರೀ ಹುಲಿಗಮ್ಮ ದೇವಸ್ಥಾನ	ಬೈರದೇವರಗುಡ್ಡ
113	ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನ	ನಡುಮಾವಿನಹಳ್ಳಿ
114	ಶ್ರೀ ಯಲ್ಲಮ್ಮ ದೇವಸ್ಥಾನ	ನಡುಮಾವಿನಹಳ್ಳಿ
115	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಯಡ್ರಮ್ಮನಹಳ್ಳಿ
116	ಶ್ರೀ ಕರೇ ಚೌಡೇಶ್ವರಿ ದೇವಸ್ಥಾನ	ತೂಲದಹಳ್ಳಿ
117	ಶ್ರೀ ಹಾಲಿಗುಡಿ ಆಂಜನೇಯ ಸ್ವಾಮಿ ದೇವಸ್ಥಾನ	ಬೆನಕನಹಳ್ಳಿ
118	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ತೂಲದಹಳ್ಳಿ
119	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಹ್ಯಾಲಿಗ್ರಾಮ
120	ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ	ಕೊಟ್ಟೂರು

121	ಶ್ರೀ ಉಜ್ಜನಿ ಉಚ್ಚಂಗಮ್ಮ ದೇವಸ್ಥಾನ	ಉಜ್ಜನಿ
122	ಶ್ರೀ ವೀರಣ್ಣ ದೇವಸ್ಥಾನ	ರಾಂಪುರ
123	ಶ್ರೀ ಮಾರಮ್ಮ ದೇವಸ್ಥಾನ	ಹೊಸಹಟ್ಟಿ
124	ಶ್ರೀ ಶರಣಬಸವೇಶ್ವರ ಸ್ವಾಮಿ ದೇವಸ್ಥಾನ	ಕನಮಡಗು
125	ಶ್ರೀ ದುರ್ಗಮ್ಮ ದೇವಿ ದೇವಸ್ಥಾನ	ತಾಯನಹಳ್ಳಿ
126	ಶ್ರೀ ಕಲ್ಲೇಶ್ವರ ದೇವಸ್ಥಾನ	ಚಂದ್ರಶೇಖರಪುರ
127	ಶ್ರೀ ಸತ್ಯಮ್ಮ ದೇವಿ ದೇವಸ್ಥಾನ	ಕಲಾಪುರ
128	ಶ್ರೀ ವೀರಂಗಮ್ಮ ದೇವಿ ದೇವಸ್ಥಾನ	ಕಲಾಪುರ
129	ಶ್ರೀ ಪತಿಸ್ವಾಮಿ ದೇವಸ್ಥಾನ	ಚಂದ್ರಶೇಖರ ಪುರ
130	ಶ್ರೀ ಮಾರಮ್ಮ ದೇವಿ ದೇವಸ್ಥಾನ	ಗೋವಿಂದಗಿರಿ
131	ಶ್ರೀ ಮಾರಮ್ಮ ದೇವಸ್ಥಾನ	ಬತ್ತನಹಳ್ಳಿ
132	ಶ್ರೀ ದುರ್ಗಮ್ಮ ದೇವಿ ದೇವಸ್ಥಾನ	ಎ.ದಿಬ್ಬಹಳ್ಳಿ
133	ಶ್ರೀ ಗುರುಕೋಟೇಶ್ವರ ದೇವಸ್ಥಾನ	ಹಾಲಸಾಗರ
134	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಹೊಸೂರು
135	ಶ್ರೀ ಕಲ್ಲೇಶ್ವರ ದೇವಸ್ಥಾನ	ಹುಲಿಕೆರೆ
136	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಚಿಗಟಗೇರಿ
137	ಶ್ರೀ ಜುಂಜಪ್ಪ, ಕದ್ರಿ ನರಸಿಂಹ, ಓಬಲೇಶ್ವರ ದೇವಸ್ಥಾನ	ಗೋವಿಂದಗೇರಿ
138	ಶ್ರೀ ಶರಣ ಬಸವೇಶ್ವರ ದೇವಸ್ಥಾನ	ಸಕಲಾಪುರ ಹಟ್ಟಿ
139	ಶ್ರೀ ಸದ್ಗುರು ಪಂಪಾರೂಢ ದೇವಸ್ಥಾನ	ಅಪ್ಪನಹಳ್ಳಿ
140	ಶ್ರೀ ವೀರಭದ್ರ ದೇವಸ್ಥಾನ	ಹುಲಕೆರೆ
141	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಕೊಟ್ಟೂರು ರಾಜುವನಗರ
142	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಹಾಲೂರು
143	ಶ್ರೀ ವೀರಸಂಗಮೇಶ್ವರ ದೇವಸ್ಥಾನ	ಇಮ್ಮದಾಪುರ
144	ಶ್ರೀ ಬಸವೇಶ್ವರ ದೇವಸ್ಥಾನ	ಟಿ.ಸೂರವನಹಳ್ಳಿ
145	ಶ್ರೀ ಮುಖ ದುರ್ಗಮ್ಮ ದೇವಸ್ಥಾನ	ಕೊಟ್ಟೂರು
146	ಶ್ರೀ ಸದ್ಗುರು ಓಂಕಾರ ಹುಚ್ಚ ನಾಗಲಿಂಗ ದೇವಸ್ಥಾನ	ಮಹಾದೇವಪುರ
147	ಶ್ರೀ ಪೆನ್ನ ಓಬಲಸ್ವಾಮಿ ದೇವಸ್ಥಾನ	ಲೋಕಿಕೆರೆ

148	ಶ್ರೀ ಮರುಳರಾಯ ದೇವಸ್ಥಾನ	ಉಜ್ಜಿನಿ
149	ಶ್ರೀ ವೀರಲಿಂಗೇಶ್ವರ ದೇವಸ್ಥಾನ	ಹೊಸ ಕೋಡಿಹಳ್ಳೀ
150	ಶ್ರೀ ವೀರಾಂಜನೇಯ ದೇವಸ್ಥಾನ	ತಯಾಕನಹಳ್ಳಿ
151	ಶ್ರೀ ಚಂದ್ರಗುತ್ತಮ್ಮ ದೇವಸ್ಥಾನ	ಹಿರೇವಡೇರಹಳ್ಳಿ
152	ಶ್ರೀ ದುರ್ಗಮ್ಮ ದೇವಸ್ಥಾನ	ಚಿಕ್ಕಜೋಗೀಹಳ್ಳಿ
153	ಶ್ರೀ ಬಸವಣ್ಣ ದುರ್ಗಮ್ಮ ದೇವಸ್ಥಾನ	ಹುರಿವಿದಾಳ
154	ಶ್ರೀ ತಮ್ಮಪ್ಪ ದೇವಸ್ಥಾನ	ಹುರಿವಿದಾಳ
155	ಶ್ರೀ ವೀರಾಂಜನೇಯ ದೇವಸ್ಥಾನ	ವೀರಾಶಪುರ
156	ಶ್ರೀ ದುರ್ಗಮ್ಮ ದೇವಸ್ಥಾನ	ಬೀರಲಗುಡ್ಡೆ
157	ಶ್ರೀ ಹುಲ್ಯಾರ ಲಿಂಗೇಶ್ವರ ದೇವಸ್ಥಾನ ತಿಪ್ಪೇರುದ್ರಸ್ವಾಮಿ	ಹೊಸಹಳ್ಳಿ
158	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಬಯಾಳು ತುಂಬರಗುಡ್ಡ
159	ಶ್ರೀ ಗಲ್ಲಿ ದುರ್ಗಮ್ಮ ದೇವಸ್ಥಾನ	ಹಯಾಲು
160	ಶ್ರೀ ಕೃಷ್ಣ ದೇವಸ್ಥಾನ	ಶ್ರೀಕಂಠಪುರ ತಾಂಡ್ಯ
161	ಶ್ರೀ ಪಂಚದುರ್ಗ ದೇವಸ್ಥಾನ	ಬಂಡಬಸಾಪುರ
162	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಈಚಲಹೊಮ್ಮನಹಳ್ಳಿ
163	ಶ್ರೀ ಶಕ್ತಿ ದುರ್ಗಾಂಬಿಕಾ ದೇವಸ್ಥಾನ	ಜಗಟಗೆರೆ
164	ಶ್ರೀ ಸುಂಕೇಶ್ವರ ದೇವಸ್ಥಾನ	ಹೊಸಹಳ್ಳಿ
165	ಶ್ರೀ ಯಲ್ಲಮ್ಮ ದೇವಸ್ಥಾನ	ಹೊಸಹಳ್ಳಿ
166	ಶ್ರೀ ದುರ್ಗಮ್ಮ ದೇವಸ್ಥಾನ	ಅಮ್ಮನಕೆರೆ
167	ಶ್ರೀ ಉಚ್ಚಂಗೀ ಯಲ್ಲಮ್ಮ ದೇವಸ್ಥಾನ	ತಾಯಕನಹಳ್ಳಿ
168	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಸಕಲವಾಡ
169	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಮಂಗಾಪುರ
170	ಶ್ರೀ ಮೂಗಬಸವೇಶ್ವರ ದೇವಸ್ಥಾನ	ಚೈರಾಬಿ
171	ಶ್ರೀ ದುರ್ಗಾಂಬಿಕಾ ದೇವಸ್ಥಾನ	ಚೋಲದಕೂಡ್ಲಿಗಿ
172	ಶ್ರೀ ವೀರಭದ್ರಸ್ವಾಮಿ ದೇವಸ್ಥಾನ	ಕುಮಾತಿ
173	ಶ್ರೀ ದುರ್ಗಾಂಬಿಕಾ ದೇವಸ್ಥಾನ	ಗುರದುಮುನಗು
174	ಶ್ರೀ ಕಟ್ಟೆ ಬಸವೇಶ್ವರ ದೇವಸ್ಥಾನ	ರಾಮದುರ್ಗ

175	ಶ್ರೀ ಕೇರಿ ದುರ್ಗಮ್ಮ ದೇವಸ್ಥಾನ	ಕಡೇಕೋಳಿ
176	ಶ್ರೀ ವೀರಭದ್ರಸ್ವಾಮಿ ದೇವಸ್ಥಾನ	ಮುಡ್ಲಕಾನಹಳ್ಳಿ ನಂ–76.
177	ಶ್ರೀ ಬಸವೇಶ್ವರ ದೇವಸ್ಥಾನ	ಕೊತ್ತೂರು ಪಟ್ನ ವಾರ್ಡ್ ನಂ–5.
178	ಶ್ರೀ ಕರಿಯಣ್ಣ ದೇವಸ್ಥಾನ	ಉಜ್ಜನಿ ಗ್ರಾಮ ವಾರ್ಡ್ ನಂ–5.
179	ಶ್ರೀ ಗುಡೇಕೋಟೆ ದುರ್ಗಮ್ಮ	ಕೊಟ್ಟೂರು ಪಟ್ನ
180	ಶ್ರೀ ಮ್ಯಗೇರಿ ಜರಮಾಲಿ ದುರ್ಗಾ ದೇವಸ್ಥಾನ	ಕೊಟ್ಟೂರು ಪಟ್ನ
181	ಶ್ರೀ ಬಸವೇಶ್ವರ ದೇವಸ್ಥಾನ	ಶಾಂತಹಳ್ಳಿ
182	ಶ್ರೀ ದುರ್ಗಾಂಬಿಕಾ ದೇವಸ್ಥಾನ	ಬಿಲಿಕಟ್ಟೆ
183	ಶ್ರೀ ಬಸವೇಶ್ವರ ದೇವಸ್ಥಾನ	ಅಮಲಾಪುರ
184	ಶ್ರೀ ಹನುಮಂತರಾಯ ದೇವಸ್ಥಾನ	ಅಂಬಾಲಿ
185	ಶ್ರೀ ರಾಮೇಶ್ವರ ದೇವಸ್ಥಾನ	ಅಮ್ಮನಕೆರೆ
186	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಹೊಲಸಗರಮ್ಮ
187	ಶ್ರೀ ಗ್ರಾಮದೇವತಾ ಊರಮ್ಮ ದೇವಸ್ಥಾನ	ಹೊಲಸಗರಮ್ಮ
188	ಶ್ರೀ ಕರಿಬೆನೆಕಪ್ಪ ದೇವಸ್ಥಾನ	ಹೊಲಸಗರಮ್ಮ
189	ಶ್ರೀ ಪರಮೇಶ್ವರ ದೇವಸ್ಥಾನ	ಹುನಾಶಿ
190	ಶ್ರೀ ಕಂಪಲಾಲ ದೇವತಾ ದೇವಸ್ಥಾನ	ಹುಡೆಂ
191	ಶ್ರೀ ಹೊನ್ನೂರಮ್ಮ ದೇವಿ ದೇವಸ್ಥಾನ	ಹುಶಿಹಲೆ
192	ಶ್ರೀ ಮರಳಿಸಿದ್ದೇಶ್ವರ ಸ್ವಾಮಿ ದೇವಸ್ಥಾನ	ಉಜ್ಜನಿ
193	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಕೂಡ್ಲಿಗಿ
194	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಗುಣಸಾಗರ
195	ಶ್ರೀ ಕರಿಯಮ್ಮ ದುರ್ಗಮ್ಮ ದೇವಸ್ಥಾನ	ಧೂಪದಹಳ್ಳಿ
196	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಹಾಲಸಾಗರ
197	ಶ್ರೀ ಕನ್ನೀರಮ್ಮ ದೇವಸ್ಥಾನ	ಹಾಲಸಾಗರ
198	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಕಕ್ಕುಪ್ಪಿ
199	ಶ್ರೀ ಕಲ್ಲೇಶ್ವರ ಸ್ವಾಮಿ ದೇವಸ್ಥಾನ	ನಿಂಬಲಗೇರಿ
200	ಶ್ರೀ ಕೃಷ್ಣ ಸ್ವಾಮಿ ದೇವಸ್ಥಾನ	ಬಂಡೆಬಸಾಪುರ

201	ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ಮಾಲೂರು
202	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ನೆಲಬೂಮನಹಳ್ಳಿ
203	ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ	ಶಾಂತಹಳ್ಳಿ
204	ಶ್ರೀ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನ	ದಿಬ್ಬದಹಳ್ಳಿ

2008–09ನೇ ಸಾಲಿನಲ್ಲಿ ಕೂಡ್ಲಿಗಿ ತಾಲ್ಲೂಕಿನ ದೇವಸ್ಥಾನಗಳಿಗೆ ಮಂಜೂರು ಮಾಡಲಾದ ಅನುದಾನದ ವಿವರ

ಅನುಬಂಧ–II

ಕ್ರ ಸಂ.	ತಾಲ್ಲೂಕು	ದೇವಸ್ಥಾನದ ಹೆಸರು	ಮಂಜೂರಾದ ಮೊತ್ತ
2008–09			
1	ಕೂಡ್ಲಿಗಿ	ಶ್ರೀ ಓಬಳೇಶ್ವರ ದೇವಸ್ಥಾನ, ತಮ್ಮಯ್ಯನಗುಡ್ಡ, ಕೂಡ್ಲಿಗಿ	1,00,000.00
2	–"–	ಶ್ರೀ ಸಿದ್ದರಾಮೇಶ್ವರ ದೇವಸ್ಥಾನ, ಸಾಸಲವಾಡ, ಕೂಡ್ಲಿಗಿ	50,000.00
3	–"–	ಶ್ರೀ ಕೋಡಿ ಬಸವೇಶ್ವರ ದೇವಸ್ಥಾನ, ಹಿರೇಹೆಗ್ಡಾಲ್	50,000.00
4	–"–	ಶ್ರೀ ಕೋಣೇಶ್ವರ ದೇವಸ್ಥಾನ, ಕೋಣನಹಳ್ಳಿ	50,000.00
5	–"–	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಸುಂಕದಕಲ್ಲು	50,000.00
6	–"–	ಶ್ರೀ ದುರ್ಗಮ್ಮ ದೇವಸ್ಥಾನ, ಗೂಣಸಾಗರ	50,000.00
7	–"–	ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಖಾದಾಮಡಗು	50,000.00
8	–"–	ಶ್ರೀ ಬಯಲು ಆಂಜನೇಯಸ್ವಾಮಿ ದೇವಸ್ಥಾನ, ಎ.ಡಿ.ಗುಡ್ಡ,ಗೊಲ್ಲರಹಟ್ಟಿ	50,000.00
9	–"–	ಶ್ರೀ ಚೌಡೇಶ್ವರಿ ದೇವಸ್ಥಾನ ಹಾರಕಬಾವಿ	50,000.00
10	–"–	ಶ್ರೀ ಗಾಳೇಶ್ವರಿ ದೇವಸ್ಥಾನ, ನಾಗರಕಟ್ಟೆ	50,000.00
11	–"–	ಶ್ರೀ ಮುದ್ಲಿಯಮ್ಮ ದೇವಸ್ಥಾನ, ವಿರುಪಾಪುರ	50,000.00
		ಒಟ್ಟು	6,00,000.00

ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ವತಿಯಿಂದ ಕೈಗೊಂಡ ಕಾಮಗಾರಿಗಳ ವಿವರ

ಅನುಬಂಧ-III

ಕ್ರ ಸಂ.	ದೇವಸ್ಥಾನದ ಹೆಸರು, ಗ್ರಾಮ, ತಾಲ್ಲೂಕು	ಕಾಮಗಾರಿ ವಿವರ	ಅಂದಾಜು ಪಟ್ಟಿ ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿಯ ಹಂತ
1	ಶ್ರೀ ಮೈಲಾರಲಿಂಗ ದೇವಸ್ಥಾನ ಮೈಲಾರ ಕ್ಷೇತ್ರ, ಹೂವಿನಹಡಗಲಿ ತಾ:	ದೇವಸ್ಥಾನದ ಬಲಭಾಗದಲ್ಲಿ ನೆರಳಿನ ಷಲ್ಟರ್ ನಿರ್ಮಾಣ ಕೆಲಸ	11.40	ಶೇಕಡ 40 ರಷ್ಟು ಕಾಮಗಾರಿ ಕೆಲಸ ನಿರ್ವಹಿಸಿದೆ.
2	-"-	ದೇವಸ್ಥಾನದ ಆವರಣದಲ್ಲಿ ಗ್ರಿಲ್ ಕೂಡಿಸುವುದು ಮತ್ತು ವಾಣಿಜ್ಯ ಕೌಂಟರ್ ನಿರ್ಮಾಣ	0.90	ಕಾಮಗಾರಿ ಪೂರ್ಣಗೊಂಡಿದೆ.
3	-"-	ದೇವಸ್ಥಾನದ ಆವರಣದಲ್ಲಿ ಕುಡಿಯುವ ನೀರು ಪೂರೈಕೆ	2.80	-"-
4	-"-	ದೇವಸ್ಥಾನದ ಈಶಾನ್ಯ ಭಾಗದಲ್ಲಿ ಭಕ್ತಾದಿಗಳು ಸರಾಗವಾಗಿ ಪ್ರವೇಶ ಮತ್ತು ಹೊರಗಡೆ ಹೊಗಲು	0.83	-"-

		ಮೆಟ್ಟಿಲುಗಳನ್ನು ನಿರ್ಮಾಣ ಮಾಡುವುದು		
5	ಶ್ರೀ ಗುರುಬಸವೇಶ್ವರಸ್ವಾಮಿ ದೇವಸ್ಥಾನ ಕೊಟ್ಟೂರು, ಕೂಡ್ಲಿಗಿ ತಾಲ್ಲೂಕು	ರಥದ ಬಲ ಗಾಲಿಗಳ ದುರಸ್ತಿ ಕಾಮಗಾರಿ ಕೆಲಸ	0.25	–“–
6	–“–	ರಥದ ಬಲ ಮತ್ತು ಎಡ ಗಾಲಿಗಳು ಮತ್ತು ಬಾಗಿಲವಾಡ ಏಣಿಗಳ ದುರಸ್ತಿ ಕೆಲಸ ದುರಸ್ತಿ ಕಾಮಗಾರಿ ಕೆಲಸ	0.65	–“–
7	–“–	ದೇವಸ್ಥಾನದಲ್ಲಿ ಕ್ಯೂ ಲೈನ್ ವ್ಯವಸ್ಥೆಯನ್ನು ಮಾಡುವ ಕೆಲಸ	2.41	ಶೇಕಡ 80 ರಷ್ಟು ಕಾಮಗಾರಿ ಕೆಲಸ ನಿರ್ವಹಿಸಿದೆ.
8	ಶ್ರೀ ಮಲ್ಲಿಕಾರ್ಜುನ ಸ್ವಾಮಿ ಮತ್ತು ಶ್ರೀ ಬಸವೇಶ್ವರ ಸ್ವಾಮಿದೇವಸ್ಥಾನ, ಕುರುವತ್ತಿ ಗ್ರಾಮ, ಹೂವಿನಹಡಗಲಿ ತಾಲ್ಲೂಕು	ದೇವಸ್ಥಾನದ ಕುಡಿಯುವ ನೀರಿನ ವ್ಯವಸ್ಥೆ	3.18	ಶೇಕಡ 90 ರಷ್ಟು ಕಾಮಗಾರಿ ಕೆಲಸ ನಿರ್ವಹಿಸಿದೆ.
9		ದೇವಸ್ಥಾನದ ಸಿಂಹಾಸನ ಕಟ್ಟೆಯ	4.00	ಕಾಮಗಾರಿ ಪ್ರಾರಂಭಿಸಿ

	–"–	ಹತ್ತಿರ ಸಿಸಿ ಪ್ಲಾಟ್‌ಫಾರಂ ನಿರ್ಮಾಣ		ರುವುದಿಲ್ಲ.
10	ಶ್ರೀ ಮೈಲಾರಲಿಂಗ ದೇವಸ್ಥಾನ ಮೈಲಾರ ಕ್ಷೇತ್ರ, ಹೂವಿನಹಡಗಲಿ ತಾ:	ದೇವಸ್ಥಾನದ ಬಲಭಾಗದಲ್ಲಿ ಹಾಗೂ ಮುಂಭಾಗದಲ್ಲಿ ನೆರಳಿನ ಷಲ್ಟರ್ ನಿರ್ಮಾಣ ಕೆಲಸ	8.00	ಪ್ರಾರಂಭಿಕ ಹಂತದಲ್ಲಿದೆ.
11	–"–	ಈಶಾನ್ಯ ದಿಕ್ಕಿನಲ್ಲಿ ಮಹಾದ್ವಾರ ನಿರ್ಮಾಣ	2.15	–"–
12	–"–	ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಯ ದುರಸ್ತಿ ಕಾಮಗಾರಿ	3.40	–"–
13	ಶ್ರೀ ಗುರುಬಸವೇಶ್ವರಸ್ವಾಮಿ ದೇವಸ್ಥಾನ ಕೊಟ್ಟೂರು, ಕೂಡ್ಲಿಗಿ ತಾಲ್ಲೂಕು	ದೇವಾಲಯದ ಸುತ್ತಲು ಗ್ರಾನೈಟ್ ಹಾಸುಕಲ್ಲು ಜೋಡಿಸುವ ಮತ್ತು ಸ್ನಾನಗೃಹಗಳ ನಿರ್ಮಾಣ ಮತ್ತು ಕ್ಯಾಟಲ್-ಟ್ರಾಪ್ ನಿರ್ಮಾಣ	4.80	ಟೆಂಡರ್ ಕರೆಯಲಾಗಿದೆ.

ಕರ್ನಾಟಕ ವಿಧಾನ ಸಭೆ

993 ಶ್ರೀ ಓಲೇಕಾರ ನೆಹರೂ ಚನ್ನಬಸಪ್ಪ (ಹಾವೇರಿ) : ಮಾನ್ಯ ಸಣ್ಣ ಉಳಿತಾಯ ಹಾಗೂ ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನುಸೂಚಿತ ಜಾತಿ.ಅನುಸೂಚಿತ ಪಂಗಡಗಳವರ ಕೇರಿಗಳಲ್ಲಿ ಗ್ರಂಥಾಲಯ ನಿರ್ಮಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದಲ್ಲಿ ಶಿಕ್ಷಣದಿಂದ ವಂಚಿತರಾಗಿರುವ ಇಂತಹ ವರ್ಗದವರ ಕೇರಿಗಳಲ್ಲಿ ಗ್ರಂಥಾಲಯ ಪ್ರಾರಂಭಿಸುವುದು ಸೂಕ್ತವಲ್ಲವೇ;

ಇ) ಹಾಗಿದ್ದಲ್ಲಿ ಹಾವೇರಿ ಕ್ಷೇತ್ರದ ಅಗಡಿ ಕನವಳ್ಳಿ, ಹಾವನೂರು, ಗುತ್ತಲ. ಕರ್ಜಗಿ, ಹೊಸರಿತ್ತಿ ಕಡಕೋಳ, ಹತ್ತಿಮತ್ತೂರು, ಯಲವಿಗಿ, ಮಾರುತಿಪುರ, ಈ ಹಳ್ಳಿಗಳಲ್ಲಿ ಅತೀ ಹೆಚ್ಚಯ ಅನುಸೂಚಿತ ಜಾತಿ/ಅನುಸೂಚಿತ ಪಂಗಡ ಜನಸಂಖ್ಯೆ ಇರುವಲ್ಲಿ ಗ್ರಂಥಾಲಯ ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ. ಕೆ ಶಿವನಗೌಡ ನಾಯಕ್ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಸಚಿವರು) :

ಅ) ಇಲ್ಲ.

ಆ) ಗ್ರಾಮ ಪಂಚಾಯತಿ ಕೇಂದ್ರ ಸ್ಥಾನದಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದ್ದು, ಎಲ್ಲಾ ಸಾರ್ವಜನಿಕರು ಈ ಗ್ರಂಥಾಲಯಗಳ ಉಪಯೋಗ ಪಡೆಯಬಹುದಾಗಿದೆ.

ಇ) ಹಾವೇರಿ ಕ್ಷೇತ್ರದ ಅಗಡಿ, ಕನವಳ್ಳಿ, ಹಾವನೂರು, ಗುತ್ತಲ, ಕರ್ಜಗಿ, ಹೊಸರಿತ್ತಿ, ಕಡಕೋಳ, ಹತ್ತಿಮತ್ತೂರು, ಯಲವಿಗಿ, ಮಾರುತಿಪುರಗಳಲ್ಲಿ ಗ್ರಾಮ ಪಂಚಾಯತಿ ಗ್ರಂಥಾಲಯಗಳಿದ್ದು, ಎಲ್ಲರೂ ಇದರ ಉಪಯೋಗ ಪಡೆಯಬಹುದಾದ್ದರಿಂದ ಅತೀ ಹೆಚ್ಚು ಅನುಸೂಚಿತ ಜಾತಿ/ಅನುಸೂಚಿತ ಪಂಗಡ ಜನಸಂಖ್ಯೆ ಇರುವಲ್ಲಿ ಗ್ರಂಥಾಲಯ ತೆರೆಯುವ ಪ್ರಸ್ತಾವನೆ ಸಧ್ಯದಲ್ಲಿ ಇರುವುದಿಲ್ಲ.

1169 ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶುಸಂಗೋಪನಾ ಇಲಾಖೆಯನ್ನು ಪುನರ್ ರಚಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಪುನರ್ ರಚನೆಯ ಪ್ರಸ್ತಾವವು ಎಷ್ಟು ದಿನಗಳಿಂದ ಸರ್ಕಾರದಲ್ಲಿ ಬಾಕಿ ಇರುತ್ತದೆ?

ಇ) ಪುನರ್ ರಚನೆಯ ಮೊದಲನೇ ಹಂತವಾಗಿ ಪಶುಸಂಗೋಪನಾ ಇಲಾಖೆಯಲ್ಲಿ ಆಯುಕ್ತರ ಹಾಗೂ ಅವರ ನಿರ್ದೇಶಕರ ಹುದ್ದೆಗಳನ್ನು ಸೃಜಿಸಿ ಬಹಳ ವರ್ಷಗಳೇ ಕಳೆದರೂ ಇಲ್ಲಿಯವರೆವಿಗೂ ಸಮಗ್ರ ಪುನರ್ ರಚನೆ ಮಾಡದಿರುವುದಕ್ಕೆ ಕಾರಣಗಳೇನು?

ಈ) ಇಲಾಖಾ ಅಧಿಕಾರಿಗಳ ಉದಾಸೀನತೆಯಿಂದಾಗಿ ಇಲ್ಲಿಯ ವರೆವಿಗೂ ಸಮಗ್ರವಾಗಿ ಪುನರ್ ರಚಿಸದಿರುವುದರಿಂದ ಮೂಲ ಉದ್ದೇಶಕ್ಕೆ ಧಕ್ಕೆ ಬಂದಂತಾಗಿರುವುದು ನಿಜವಲ್ಲವೇ? ಹಾಗಿದ್ದಲ್ಲಿ, ಸದರಿ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಉ) ಪಶುಸಂಗೋಪನಾ ಇಲಾಖೆಯ ಸಮಗ್ರ ಪುನರ್ ರಚನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) – ಇದೆ –

ಆ) ಪುನರ್ ರಚನೆ ಸಂಬಂಧ ಪಶುಸಂಗೋಪನೆ ಇಲಾಖೆಯಿಂದ ಪರಿಪೂರ್ಣ ಪರಿಷ್ಕೃತ ಪ್ರಸ್ತಾವನೆ ಕೋರಲಾಗಿದ್ದು, ಅದನ್ನು ಕಾಯಲಾಗುತ್ತಿದೆ.

ಇ) ಇಲಾಖೆಯಲ್ಲಿ 2004ರಲ್ಲಿ ವಿಭಾಗೀಯ ಮಟ್ಟದ ಕಛೇರಿಗಳು ರದ್ದುಗೊಂಡವು. ತದನಂತರ 2005ರಲ್ಲಿ ಶೇ.80ರಷ್ಟು ಖಾಲಿ ಹುದ್ದೆಗಳನ್ನು ರದ್ದುಗೊಳಿಸುವ ಸಲುವಾಗಿ 825 ಹುದ್ದೆಗಳನ್ನು ಗುರುತಿಸಲಾಗಿದ್ದು, ಈ ಹುದ್ದೆಗಳನ್ನು ನಂತರದ ಬದಲಾವಣೆಯೊಂದಿಗೆ ನೂತನವಾಗಿ ಹಲವು ಸಂಸ್ಥೆಗಳನ್ನು ಸೃಜಿಸಿದೆ. ಈ ರೀತಿ ಬದಲಾವಣೆಯಾಗಿರುವ ಹಿನ್ನೆಲೆಯಲ್ಲಿ ಇಲಾಖಾ ಪುನರ್ ರಚನೆಗೆ ಸಂಬಂಧಿಸಿದಂತೆ ಸಮಗ್ರ ಪ್ರಸ್ತಾವನೆಯನ್ನು ಸಿದ್ಧಗೊಳಿಸಬೇಕಾಗಿದೆ.

ಈ) ಇಲಾಖೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಯಾವುದೇ ಧಕ್ಕೆ ಉಂಟಾಗಿರುವುದಿಲ್ಲ. ಇಲಾಖಾ ಪುನರ್ ರಚನೆಯ ಸವಿಸ್ತಾರ ಪ್ರಸ್ತಾವನೆಯನ್ನು 2004ರಲ್ಲಿ ಸಲ್ಲಿಸಿದ್ದು, ಈ ಬಗ್ಗೆ ವಿವಿಧ ವೃಂದದ ಸಂಘಗಳಿಂದ ಆಕ್ಷೇಪಣೆಗಳು ಬಂದ ಕಾರಣ ಮರು ಪರಿಶೀಲನೆಗಾಗಿ ಇಲಾಖೆ ಪ್ರಸ್ತಾವನೆಯನ್ನು ತಡೆ ಹಿಡಿದಿರುತ್ತದೆ. ಇಲಾಖಾ ಪುನರ್ ರಚನೆಯನ್ನು ಪ್ರಸ್ತುತ ವಿದ್ಯಮಾನಕ್ಕೆ ಅನುಗುಣವಾಗಿ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗದಂತೆ ಇಲಾಖೆ ಮರುಪರಿಶೀಲಿಸುತ್ತಿದ್ದು, ಈ ವಿಳಂಬಕ್ಕೆ ಯಾವುದೇ ಅಧಿಕಾರಿಗಳು ಜವಾಬ್ದಾರರಾಗುವುದಿಲ್ಲ.

ಉ) ಇಲಾಖೆಯಿಂದ ಸವಿಸ್ತಾರವಾದ ಪ್ರಸ್ತಾವನೆಯನ್ನು ಪಡೆದು ಶೀಘ್ರದಲ್ಲೇ ಸಮಗ್ರ ಪುನರ್ ರಚನೆಯನ್ನು ಪೂರ್ಣಗೊಳಿಸಲಾಗುವುದು.

1169 Sri Dinesh Gundurao : Hon'ble Minister for Animal Husbandry kindly answer to the below question?

a) Whether the Government intends to re-organize the Veterinary Department?

b) Since how many days the re-organization proposal is pending with the Government?

c) As a first step towards re-organization the post of Commissioner and Additional Directors were sanctioned? What is the reason for not taking any action to complete Re-organization?

d) Due to negligence of the officers the re-organization is not completed, will it not affect the basic purpose of Re-organization? What is the action taken by the Fovernment against easing officer?

e) When the re-organization will be completed?

Sri Revunaik Belamagi (Minister for Animal Husbadry) :

a) Yes.

b) With regard to Re-organization the complete revised proposal has been called from Department and waiting for the same.

c) During the year 2004 Divisional Officers were abolished. Later on during the year 2005, 825 vacant posts were identified as a part of 80% of the vacant posts which were to be abolished. The posts, which were identified were to be altered and in additional new Institution were created. In view of all these Changes a complete revised Re-organization proposal of the Depertment has to be prepared.

d) Detailed Re-organization proposal was submitted to Government during 2004, but due to the objections raised from different Cadre level Associations, this proposal was held up in the Department for reconsideration. The Department is examining the re-organization proposal without giving much financial burden on the Government. Hence, none of the officers are responsible for delay.

e) As soon as the complete Re-organization proposal is received, action will be taken to Re-organize the Depertment.

658 ಶ್ರೀ ಸುರೇಶ್‌ಗೌಡ (ನಾಗಮಂಗಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ: ಈ ಕಾಲೇಜುಗಳ ಪೈಕಿ ಎಷ್ಟು ಕಾಲೇಜುಗಳಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

ಆ) ಹಾಗಿದ್ದಲ್ಲಿ, ಕಾಲೇಜುಗಳಿಗೆ ಮಂಜೂರಾದ ಹುದ್ದೆಗಳು ಎಷ್ಟು, ಈ ಹುದ್ದೆಗಳಲ್ಲಿ ಎಷ್ಟು ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಎಷ್ಟು ಹುದ್ದೆಗಳು ಖಾಲಿ ಇವೆ;

ಇ) ಸ್ವಂತ ಕಟ್ಟಡ ಇಲ್ಲದೇ ಇರುವ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಉಪನ್ಯಾಸಕರು ಇಲ್ಲದೇ ಇರುವ ಕಾಲೇಜುಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ನಾಗಮಂಗಲ ತಾಲ್ಲೂಕಿನಲ್ಲಿ ಒಟ್ಟು 11 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ. ಇವುಗಳ ಪೈಕಿ 8 ಕಾಲೇಜುಗಳಿಗೆ ಸ್ವಂತ ಕಟ್ಟಡ ಇರುತ್ತವೆ. 3 ಕಾಲೇಜುಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ.

ಆ) 1. ಮಂಜೂರಾದ ಹುದ್ದೆಗಳ ಸಂಖ್ಯೆ : 83
2. ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಸಂಖ್ಯೆ : 42
3. ಖಾಲಿ ಇರುವ ಹುದ್ದೆಗಳ ಸಂಖ್ಯೆ : 41.

ಇ) ಸ್ವಂತ ಕಟ್ಟಡ ಹೊಂದಿಲ್ಲದೇ ಇರುವ ಸರ್ಕಾರಿ ಪದವಿ ಪೂರ್ವ ಕಾಲೇಜು, ಬೋಗಾದಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಹರದನಹಳ್ಳಿ ಮತ್ತು ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು, ನಾಗಮಂಗಲ. ಇವುಗಳ ಪೈಕಿ ಬೋಗಾದಿ, ಮತ್ತು ಹರದನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡ ಕಾಮಗಾರಿ ಈಗಾಗಲೇ ಪ್ರಾರಂಭವಾಗಿವೆ, ನಾಗಮಂಗಲ ಬಾಲಕಿಯರ ಪದವಿ ಪೂರ್ವ ಕಾಲೇಜಿಗೆ ನಿವೇಶನದ ಕೊರತೆ ಇರುವುದರಿಂದ ಇನ್ನೂ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ನಿವೇಶನ ದೊರೆತ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಈ)

- ನೇರ ನೇಮಕಾತಿಗೆ ಲಭ್ಯವಿರುವ 2578 ಉಪನ್ಯಾಸಕರ ಹುದ್ದೆಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ದಿನಾಂಕ: 14-03-2008 ರಂದು ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಲಾಗಿದ್ದು, ಆಯೋಗದಿಂದ 2578 ಉಪನ್ಯಾಸಕರ ನೇರ ನೇಮಕಾತಿಗೆ ಅಂತಿಮ ಆಯ್ಕೆ ಪಟ್ಟಿ ಬಂದಿದ್ದು, ಅಭ್ಯರ್ಥಿಗಳ ಸಿಂಧುತ್ವ, ವೈದ್ಯಕೀಯ ಮತ್ತು ಪೊಲೀಸ್

ವರದಿ ನೀಡುವಂತೆ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ದಿನಾಂಕ: 29–06–2009ರಂದು ಕೋರಲಾಗಿದೆ. ಸದರಿ ಅಭ್ಯರ್ಥಿಗಳನ್ನು ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗುವುದು.

- ಸ್ನಾತಕೋತ್ತರ ಪದವಿ ಪಡೆದ ಅರ್ಹ ಪ್ರೌಢಶಾಲಾ ಶಿಕ್ಷಕರುಗಳ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಲಾಗಿದೆ. ಆಕ್ಷೇಪಣೆಗಳನ್ನು ಸಲ್ಲಿಸಲು ಶಿಕ್ಷಕರಿಗೆ ದಿನಾಂಕ: 17–07–2009ರಂದು ನಿಗದಿ ಪಡಿಸಲಾಗಿದೆ. ಕೊನೆಯ ದಿನಾಂಕದವರೆಗೆ ಬಂದ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಪಟ್ಟಿಯನ್ನು ಪ್ರಕಟಿಸಿ ಬಡ್ತಿ ನೀಡಲು ಕ್ರಮ ಜರುಗಿಸಲಾಗುವುದು.
- ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಸ್ನಾತಕೋತ್ತರ ಪದವಿ ಪಡೆದ ಪದವೀಧರರನ್ನು ಅಥಿತಿ ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳಲು ಪ್ರಾಚಾರ್ಯರಿಗೆ ಅನುಮತಿ ನೀಡಿದೆ.

28 ಶ್ರೀ ಪಾಟೀಲ್ ಎ.ಎಸ್ (ನಡಹಳ್ಳಿ) (ದೇವರ ಹಿಪ್ಪರಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯು ಬಿಜಾಪೂರ ಜಿಲ್ಲೆಯ ಎಷ್ಟು ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನಗೊಂಡಿವೆ (ವಿಧಾನಸಭಾ ಕ್ಷೇತ್ರ, ಗ್ರಾಮ ಪಂಚಾಯತ್ ಹೆಸರುಗಳನ್ನೊಳಗೊಂಡ ವಿವರ ನೀಡುವುದು);

ಆ) ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ;

ಇ) ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಯಾವ ಯಾವ ಗ್ರಾಮ ಪಂಚಾಯತ್‌ಗಳಿಂದ ಯಾವ ಯಾವ ಗ್ರಾಮದ ಜನರು ಸದುಪಯೋಗ ಪಡೆದುಕೊಂಡಿದ್ದಾರೆ (ಕಾಮಗಾರಿ ವಿವರ ನೀಡುವುದು);

ಈ) ಬಿಜಾಪೂರ ಜಿಲ್ಲೆಯಲ್ಲಿ ಇದೂವರೆಗೂ ಸದರಿ ಯೋಜನೆ ಅಡಿಯಲ್ಲಿ ಬಾಕಿ ಉಳಿದ ಮತ್ತು ಖರ್ಚಾದ ಹಣವೆಷ್ಟು (ಕ್ಷೇತ್ರವಾರು ವಿವರ ನೀಡುವುದು);

ಇ) ಇಲ್ಲ. ಈ ಕೋಟೆಯ ಸಂರಕ್ಷಣಾ ಕಾಮಗಾರಿಯ ಬಗ್ಗೆ ಮಾನ್ಯ ಸ್ಥಳೀಯ ಶಾಸಕರ ಗಮನಕ್ಕೆ ಮಾಹಿತಿಯನ್ನು ತರಲು ಸೂಚಿಸಲಾಗುವುದು.

985 ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಕ್ಸಲ್ ಹಾವಳಿಯ ಪ್ರದೇಶಗಳ ಶಾಸಕರುಗಳಿಗೆ ಉತ್ತಮ ಮಟ್ಟದ ಭದ್ರತೆಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಅದು ಯಾವ ರೀತಿಯದ್ದಾಗಿರುತ್ತದೆ; ಈಗ ಅದು ಯಾವ ಹಂತದಲ್ಲಿದೆ?

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ನಕ್ಸಲ್ ಪೀಡಿತ ಪ್ರದೇಶದಲ್ಲಿರುವ ಶಾಸಕರು/ಚುನಾಯಿತ ಪ್ರತಿನಿಧಿಗಳಿಗೆ ಅವರಿಗಿರುವ ಬೆದರಿಕೆಯ ಗ್ರಹಿಕೆ ಹಾಗೂ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ಭದ್ರತೆಯನ್ನು ನೀಡಲಾಗುತ್ತಿದೆ.

ಶಾಸಕರು/ಚುನಾಯಿತ ಪ್ರತಿನಿಧಿಗಳ ಭದ್ರತೆಗೆ ಸಂಬಂಧಿಸಿದಂತೆ ನಕ್ಸಲ್ ಪೀಡಿತ ಪ್ರದೇಶಗಳ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ.

ಆಗಿಂದಾಗ್ಗೆ ಈ ಬಗ್ಗೆ ಪುನರ್ ವಿಮರ್ಶಿಸಿ ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

The MLAs/Elected Representatives have been provided with security depending upon threat perception and local situation.

The Superintendents of Police of naxal affected districts have been instructed to take all necessary precautionary measures regarding security to the MLAs/Elected Representatives.

In this regard review is conducted regularly and necessary security measures are being taken.

ಆ) ಸಂಬಂಧಪಟ್ಟ ಶಾಸಕರ/ ಚುನಾಯಿತ ಪ್ರತಿನಿಧಿಗಳ ಭದ್ರತೆಯ ಹಿತದೃಷ್ಟಿಯಿಂದ ವಿವರಗಳನ್ನು ಸಂಬಂಧಪಟ್ಟ ಶಾಸಕರಿಗೆ ತಿಳಿಸಲು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

In the interest of their security, the local police officials have been instructed to appraise the concerned legislators.

459 ಶ್ರೀ ಬಚ್ಚೇಗೌಡ ಕೆ.ಪಿ.(ಚಿಕ್ಕಬಳ್ಳಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮೆಟ್ರೋ ರೈಲು ಯೋಜನೆಯ ಉದ್ದೇಶಿತ ಉದ್ದ (ಕಿ.ಮೀ.ಗಳಲ್ಲಿ) ಹಾಗೂ ಅಂದಾಜು ವೆಚ್ಚವೆಷ್ಟು (ಯೋಜನೆಯ ಫಂಡಿಂಗ್ ಸ್ಟ್ರಕ್ಚರ್ ಬಗ್ಗೆ ಮಾಹಿತಿ ನೀಡುವುದು);

ಆ) ಇಲ್ಲಿಯವರೆಗಿನ ಈ ಯೋಜನೆಯ ಗುರಿ ಮತ್ತು ಸಾಧನೆಗಳೇನು (ಭೌತಿಕ ಮತ್ತು ಆರ್ಥಿಕ ಅಂಕಿ ಅಂಶಗಳ ಬಗ್ಗೆ ಮಾಹಿತಿ ನೀಡುವುದು)?

ಇ) ಈ ಯೋಜನೆಯನ್ನು ಪೂರೈಸುವ ಬಗೆಗಿನ ಮೂಲತಃ ಕಾಲಮಿತಿ ಹಾಗೂ ವಾಸ್ತವ ಕಾಲಮಿತಿಗಳೇನು (ಮಾಹಿತಿ ನೀಡುವುದು);

ಈ) ಮೆಟ್ರೋ ರೈಲಿಗಿಂತ ಮಾನೋರೈಲು ಯೋಜನೆ ಆರ್ಥಿಕ ದೃಷ್ಠಿಯಿಂದ ಅನುಕೂಲಕರ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) :

ಅ) ಯೋಜನೆಯ ಉದ್ದೇಶಿತ ಉದ್ದ 42.6 ಕಿ.ಮೀ. ಅಂದಾಜು ವೆಚ್ಚ ರೂ. 8158 ಕೋಟಿಗಳು.

ಕ್ರ ಸಂ.		ಭಾರತ ಸರ್ಕಾರ	ಕರ್ನಾಟಕ ಸರ್ಕಾರ	ಒಟ್ಟು
1	ಸಾಮ್ಯ ಷೇರು	15%	15%	30%
2	ಅಧೀನ ಸಾಲ	10%	15%	25%
3	ಹಣಕಾಸು ಸಂಸ್ಥೆಗಳಿಂದ ಸಾಲ	–	–	45%
	ಒಟ್ಟು	–	–	**100%**

ಆ)

ಮಾರ್ಗ		ಪೂರ್ಣಗೊಳ್ಳುವ ದಿನಾಂಕ
ಬೈಯ್ಯಪ್ಪನಹಳ್ಳಿ-ಕ್ರಿಕೆಟ್ ಸ್ಟೇಡಿಯಂ	–	ಡಿಸೆಂಬರ್–2010
ಯಶವಂತಪುರ–ಸ್ವಸ್ತಿಕ್	–	ಜೂನ್–2011
ಯು.ಜಿ.ಸೆಕ್ಷನ್	–	ಜೂನ್–2012
ಸಿಟಿ ಸ್ಟೇಷನ್–ಮೈಸೂರು	–	ಆಗಸ್ಟ್–2012
ಸಿಟಿ ಮಾರ್ಕೆಟ್–ಆರ್.ವಿ.ರಸ್ತೆ	–	ಸೆಪ್ಟೆಂಬರ್–2012
ಆರ್.ವಿ.ರಸ್ತೆ ಟರ್ಮಿನಲ್ – ಪುಟ್ಟೇನಹಳ್ಳಿ ಕ್ರಾಸ್	–	ಸೆಪ್ಟೆಂಬರ್–2012
ಯಶವಂತಪುರ–ಪೀಣ್ಯ	–	ಜೂನ್–2011
ಪೀಣ್ಯ–ಹೆಸರಘಟ್ಟ ಕ್ರಾಸ್	–	ಸೆಪ್ಟೆಂಬರ್–2012

ಒಟ್ಟು 154 ಮೈಲಿಗಲ್ಲುಗಳಲ್ಲಿ 82 ಮೈಲಿ ಗಲ್ಲುಗಳನ್ನು ಮುಟ್ಟಲಾಗಿದೆ ಮತ್ತು 69 ಮೈಲಿಗಲ್ಲುಗಳು ಪ್ರಗತಿಯಲ್ಲಿವೆ.

ಆರ್ಥಿಕ ಪ್ರಗತಿ: 1419.55 ಕೋಟಿಗಳು, ಜೂನ್ 30, 2009ರವರೆಗೆ.

ಇ) ಮೂಲತಃ ಕಾಲಮಿತಿ–ಡಿಸೆಂಬರ್–2011

ವಾಸ್ತವ ಕಾಲಮಿತಿ–ಸೆಪ್ಟೆಂಬರ್–2012.

ಈ) ಪೀಕ್ ಅವರ್ ಪೀಕ್ ಡೈರೆಕ್ಷನ್ (PHPDT) 10,000ಕ್ಕಿಂತ ಹೆಚ್ಚು ಇರುವ ಸಂದರ್ಭದಲ್ಲಿ ಮಾನೋ ರೈಲು ಮೆಟ್ರೋ ರೈಲ್‌ಗಿಂತ ಆರ್ಥಿಕ ದೃಷ್ಟಿಯಿಂದ ಅನುಕೂಲಕರವಲ್ಲ.

ಉ) ಉದ್ಭವಿಸುವುದಿಲ್ಲ.

450 ಶ್ರೀ ಕುಮಾರಸ್ವಾಮಿ ಹೆಚ್.ಕೆ. : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸೇರಿದ ಆಸ್ತಿಗಳನ್ನು ನಕಲಿ ದಾಖಲೆ ಸೃಷ್ಟಿಸಿ ಕಬಳಿಸಿರುವ ಪ್ರಕರಣಗಳೆಷ್ಟು ಹಾಗೂ ನ್ಯಾಯಾಲಯದಲ್ಲಿರುವ ಪ್ರಕರಣಗಳೆಷ್ಟು (ನಕಲಿ ದಾಖಲೆ ಸೃಷಿಸಿ ಆಸ್ತಿ ಕಬಳಿಸಿರುವವರ ಪೂರ್ಣ ಹೆಸರು ಮತ್ತು ವಿಳಾಸಗಳನ್ನು ನೀಡುವುದು);

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದ ಆಸ್ತಿಗಳನ್ನು ನಕಲಿ ದಾಖಲೆ ಸೃಷ್ಟಿಸಿರುವವರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು (ಪೂರ್ಣ ಮಾಹಿತಿ ನೀಡುವುದು);

ಇ) ಇಲ್ಲಿಯವರೆವಿಗೂ ಮುಟ್ಟುಗೋಲು ಹಾಕಿಕೊಂಡಿರುವ ಪ್ರಕರಣಗಳೆಷ್ಟು (ಆಸ್ತಿಯ ಪರಿಮಾಣ ಹಾಗೂ ಬೆಲೆ ಇತ್ಯಾದಿಗಳನ್ನೊಳಗೊಂಡ ಪ್ರಕರಣವಾರು ಮಾಹಿತಿ ನೀಡುವುದು)?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಪ್ರಕರಣಗಳ ಸಂಖ್ಯೆ: 09

ಆ ಎಲ್ಲವೂ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

1. ಶ್ರೀಮತಿ ಶಾರದಮ್ಮ, ನಂ-12/1, 3ನೇ ಅಡ್ಡ ರಸ್ತೆ, ರಾಮಚಂದ್ರಪುರ, ಬೆಂಗಳೂರು-21-ಸ್ವತ್ತಿನ ಅಳತೆ 50 x 30.
2. ಶ್ರೀ ಚಂದ್ರಶೇಖರಯ್ಯ, ನಂ-100/1, ಅನ್ನಸಂದ್ರ ಪಾಳ್ಯ, ವಿಮಾನಪುರ ಅಂಚೆ, ಬೆಂಗಳೂರು-17-ಸ್ವತ್ತಿನ ಅಳತೆ:
   ಖಾತಾ ನಂ-24ರಲ್ಲಿ 70 x 150.
   ಖಾತಾ ನಂ-25ರಲ್ಲಿ 90+165/2 x 350+465/2,
   ಖಾತಾ ನಂ-26ರಲ್ಲಿ 135+230/2 x 230+75/2.
3. ಶ್ರೀ ಜಿ.ಶಿವಕುಮಾರ್, ಗುಂಜೂರು ಗ್ರಾಮ, ಬೆಂಗಳೂರು ಪೂರ್ವ ತಾಲ್ಲೂಕು - ಸ್ವತ್ತಿನ ಅಳತೆ 30 x 70.
4. ಶ್ರೀ ಆಂಜನಪ್ಪ,
   ತಿಗಳರಪಾಳ್ಯ. ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ-ಸ್ವತ್ತಿನ ಅಳತೆ 30 x 50+55/2
5. ಶ್ರೀ ಗರುಡಯ್ಯ,
   ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ. - ಸ್ವತ್ತಿನ ಅಳತೆ 30 x 45.
6. ಶ್ರೀ ಪುಟ್ಟಯ್ಯ
   ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ- ಸ್ವತ್ತಿನ ಅಳತೆ 30 x 40
7. ಶ್ರೀ ನರಸಿಂಹಮೂರ್ತಿ
   ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ - ಸ್ವತ್ತಿನ ಅಳತೆ 30 x 40.

8. ಶ್ರೀ ಕೂರ್ಲಪ್ಪ,
ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ಯಶವಂತಪುರ ಹೋಬಳಿ – ಸ್ವತ್ತಿನ ಅಳತೆ 30 x 40.
9. ಶ್ರೀ ಸುಲದಯ್ಯ,
ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ – ಸ್ವತ್ತಿನ ಅಳತೆ 30 x 45.

ಆ) ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ, ಇತ್ಯರ್ಥವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಯಾವುದು ಇಲ್ಲ.

1061 ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಇರುವ ಒಟ್ಟು ಬಸ್ ಘಟಕಗಳೆಷ್ಟು;

ಆ) ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ತಾವರಗೇರಾ ಪಟ್ಟಣಕ್ಕೆ ಬಸ್–ಘಟಕವನ್ನು ಹೊಸದಾಗಿ ಮಂಜೂರು ಮಾಡಲು ಕ್ರಮ ಕೈಗೊಂಡಿದೆಯೇ: ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) :

ಅ) 4.

ಆ) ಕುಷ್ಟಗಿ ತಾಲ್ಲೂಕಿನಲ್ಲಿ ಬರುವ ತಾವರಗೇರೆಯು ಹೋಬಳಿ ಕೇಂದ್ರವಾಗಿದ್ದು, ಕುಷ್ಟಗಿ ತಾಲ್ಲೂಕು ಕೇಂದ್ರದಿಂದ 24 ಕಿ.ಮೀ. ದೂರವಿರುವುದರಿಂದ ತಾವರಗೇರೆಯಲ್ಲಿ ಇನ್ನೊಂದು ಹೊಸದಾಗಿ ಡಿಪೋ ಪ್ರಾರಂಭ ಮಾಡುವುದು ಆರ್ಥಿಕ ಹಿತದೃಷ್ಟಿಯಿಂದ ಪೂರಕವಾಗಿರುವುದಿಲ್ಲ.

983 ಶ್ರೀ ವಿಶ್ವನಾಥ್ ಎಸ್.ಆರ್. : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೀಲಗಿರಿ ಮರ ಬೆಳೆಯಿಂದ ಪರಿಸರಕ್ಕೆ ಮಾರಕವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ಮಳೆಯೂ ಸಹ ಕಡಿಮೆಯಾಗುವುದಾಗಿ ತಜ್ಞರು ಅಭಿಪ್ರಾಯ ಪಟ್ಟಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಇ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ನೀಲಗಿರಿ ಬೆಳೆಯಿಂದ ಪರಿಸರಕ್ಕೆ ಮಾರಕವಾಗುತ್ತಿರುವುದಕ್ಕೆ ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ.

ಆ) ಈ ಬಗ್ಗೆ Overseas Development Agencies of United Kingdom (ODA) ನೆರವಿನಿಂದ "Effect of Fast Growing Species in Karnataka" ಎಂಬ ಸಂಶೋಧನೆಯನ್ನು ಬ್ರಿಟನ್ ದೇಶದಲ್ಲಿರುವ Oxford Forestry Institute ಮತ್ತು Institute of Hydrology, Wallingford ಎಂಬ ಸಂಸ್ಥೆಗಳ ತಾಂತ್ರಿಕ ಸಲಹೆ ಮತ್ತು ಸಹಕಾರದೊಡನೆ ಅಂತರ್ಜಲದ ಮಟ್ಟದ ಬಗ್ಗೆ ಅಧ್ಯಯನವನ್ನು ಮಾಡಿದ್ದು, ಅದರ ಮುಖ್ಯಾಂಶಗಳು ಕೆಳಕಂಡಂತಿವೆ.

1) ಒಣ ಪ್ರದೇಶದಲ್ಲಿ ಮಧ್ಯಮ ಮಣ್ಣಿನ ಆಳ ಇರುವೆಡೆ ನೀಲಗಿರಿ ನೆಡುತೋಪುಗಳಿಂದ ನೀರಿನ ಬಳಕೆಯ ಸ್ಥಳೀಯ ಶುಷ್ಕ ಎಲೆ ಉದುರಿಸುವ ಕಾಡಿಗಿಂತ ಹೆಚ್ಚೇನಿರುವುದಿಲ್ಲ.
2) ಈ ಸ್ಥಳಗಳಲ್ಲಿ ನೀಲಗಿರಿ ಮತ್ತು ಸ್ಥಳೀಯ ಕಾಡಿನ ನೀರಿನ ಬಳಕೆಯು ವಾರ್ಷಿಕ ಮಳೆಗೆ ಸಮನಾಗಿರುತ್ತದೆ.
3) ಅಧ್ಯಯನ ನಡೆಸಿದ ಸ್ಥಳಗಳಲ್ಲಿ ಜಲ ಮಟ್ಟದಿಂದ ನೀಲಗಿರಿ ಮರಗಳು ನೀರನ್ನು ಸೆಳೆದಿರುವುದಕ್ಕೆ ಯಾವುದೇ ಸಾಕ್ಷಾಧಾರಗಳಿಲ್ಲ.

ಇ) ಅರಣ್ಯ ಇಲಾಖೆಯು, ನೀಲಗಿರಿ ಸಸಿ ನೆಡೆಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದು, ರೈತರಿಗೆ ನೀಲಗಿರಿ ಸಸಿಗಳನ್ನು ಸರಬರಾಜು ಮಾಡುತ್ತಿಲ್ಲ.

760 ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ನಾಗರೀಕರಿಗೆ ಪ್ರಸ್ತುತ ಸರ್ಕಾರವು ಒದಗಿಸುತ್ತಿರುವ ಕುಡಿಯುವ ನೀರಿನ ದೈನಂದಿನ ಪ್ರಮಾಣವೆಷ್ಟು?

ಆ) ಪ್ರತಿ ನಾಗರೀಕರಿಗೆ ಅವಶ್ಯವಿರುವ ನೀರಿನ ಪ್ರಮಾಣವೆಷ್ಟು, ಅಂದಾಜು ಮಾಡಲಾದ ಮಾನದಂಡ ಯಾವುದು?

ಇ) ಕೊರತೆಯುಂಟಾಗುವ ನೀರಿನ ಪ್ರಮಾಣವನ್ನು ಸರಿದೂಗಿಸಲು ಕೈಗೊಂಡ ಕ್ರಮಗಳು ಯಾವುವು?

ಈ) ಹೊಸ ಯೋಜನೆಗಳನ್ನು ರೂಪಿಸಲಾಗಿದೆಯೇ, ರೂಪಿಸಿದ್ದಲಿ ವಿವರ ಒದಗಿಸುವುದು?

ಉ) ಹೊಸ ಯೋಜನೆಗಳನ್ನು ಕಾರ್ಯಾನುಷ್ಠಾನಕ್ಕೆ ತರಲು ತಗಲುವ ಅಂದಾಜು ವೆಚ್ಚವೆಷ್ಟು, ಅದನ್ನು ಯಾವ ಮೂಲದಲ್ಲಿ ಭರಿಸಲಾಗುವುದು? (ವಿವರ ನೀಡುವುದು)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಬೆಂಗಳೂರಿನ ನಾಗರೀಕರಿಗೆ ಪ್ರಸ್ತುತ ಸರಾಸರಿ–110 ಲೀಟರನಷ್ಟು ಕುಡಿಯುವ ನೀರನ್ನು ದಿನಂಪ್ರತಿ ಒದಗಿಸಲಾಗುತ್ತಿದೆ.

ಆ) ಭಾರತ ಸರ್ಕಾರದ ಸಂಸ್ಥೆ CPHEEO ನಿಗದಿಪಡಿಸಿದ ಪ್ರಕಾರ ಪ್ರತಿ ನಾಗರೀಕರಿಗೆ ದಿನಂಪ್ರತಿ 135 ಲೀಟರ್ ನೀರು ಅವಶ್ಯವಿರುತ್ತದೆ.

ಇ)

1) ಸರಾಸರಿ ಪ್ರತಿದಿನ 80 ದಶಲಕ್ಷ ಲೀಟರ್ ನೀರನ್ನು ಹೆಚ್ಚುವರಿಯಾಗಿ ಪಂಪ್ ಮಾಡಿ ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ.
2) ತ್ವರಿತ ಪರಿಹಾರಕ್ಕಾಗಿ 1390 ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆದು ಅವುಗಳಿಂದ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.
3) ಇದೇ ರೀತಿ ಮತ್ತಷ್ಟು ನೀರು ಸರಬರಾಜು ಮಾಡಲು 1000 ಕೊಳವೆ ಬಾವಿಗಳನ್ನು ಕೊರೆಯಲು ದರಖಾಸ್ತು ಪ್ರಕ್ರಿಯೆ ಪ್ರಗತಿಯಲ್ಲಿದೆ.

ಈ) ದಿನಂಪ್ರತಿ 500 ದಶ ಲಕ್ಷ ಲೀಟರ್ ನೀರು ಹೆಚ್ಚುವರಿಯಾಗಿ ಕಾವೇರಿ 4ನೇ ಹಂತ, 2ನೇ ಘಟ್ಟದಿಂದ ಸರಬರಾಜು ಮಾಡಲು ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

1000 ಹೊಸ ಕೊಳವೆ ಬಾವಿಗಳನ್ನು ಕೊರೆಯಲು ದರಖಾಸ್ತು ಪ್ರಕ್ರಿಯೆ ನಡೆಯುತ್ತಿದೆ.

ಉ) ಕಾವೇರಿ 4ನೇ ಹಂತದ 2ನೇ ಘಟ್ಟದ ನೀರು ಸರಬರಾಜು ಯೋಜನೆಗೆ ಜಪಾನ್ ಇಂಟರ್‌ನ್ಯಾಷನಲ್ ಕೋ-ಆಪರೇಶನ್ ಸಂಸ್ಥೆಯು ನೀರು ಸರಬರಾಜು ವಿಭಾಗಕ್ಕೆ ರೂ. 1750 ಕೋಟಿ ಹಣಕಾಸು ನೆರವಿನಿಂದ ಕೈಗೆತ್ತಿಕೊಳ್ಳಲಾಗಿದೆ. ಈ ಸಂಬಂಧವಾಗಿ ಭಾರತ ಸರ್ಕಾರ ಹಾಗೂ ಜಪಾನಿನ ಸರ್ಕಾರ ದಿನಾಂಕ 31-03-2005 ಮತ್ತು 31-03-2006 ರಂದು ಒಪ್ಪಂದಕ್ಕೆ ಸಹಿ ಹಾಕಿವೆ. ಈ ಹಣಕಾಸಿನ ನೆರವಿನ ಅವಧಿ 10 ವರ್ಷಗಳಾಗಿರುತ್ತದೆ.

196 ಶ್ರೀ ಸುಭಾಷ್ ಗುತ್ತೇದಾರ್(ಆಳಂದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ಕಟ್ಟಡಕ್ಕೆ ಮಂಜೂರಾಗಿರುವ ಅನುದಾನ ಎಷ್ಟು ಮತ್ತು ಯಾವ ವರ್ಷದಲ್ಲಿ ಬಿಡುಗಡೆಯಾಗಿದೆ;

ಆ) ಅನುದಾನ ಬಿಡುಗಡೆಯಾಗಿದ್ದಲ್ಲಿ ಈವರೆವಿಗೂ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗಲು ಕಾರಣಗಳೇನು; (ವಿವರಗಳನ್ನು ನೀಡುವುದು);

ಇ) ಕಟ್ಟಡದ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು; ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ನಿಗದಿಪಡಿಸಿದೆಯೇ;

ಈ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗುಲಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ ಕಾಮಗಾರಿಯು 2008-09ನೇ ಸಾಲಿನ ಆಯವ್ಯಯದಲ್ಲಿ ರೂ.150-00 ಲಕ್ಷಗಳ ಅಂದಾಜಿಗೆ ರೂ.45-00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಸ್ಥಳಾವಕಾಶವಿಲ್ಲದ ಕಾರಣ ವಿಳಂಬವಾಗಿದೆ. ಪ್ರಸ್ತುತ ಆಳಂದ್‌ದಲ್ಲಿ ಹಳೆ ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ಸ್ಥಳಾವಕಾಶ ಮಾಡಿಕೊಡಲಾಗಿದ್ದು ಸ್ಥಳಾವಕಾಶ ಮಾಡಿಕೊಡಲಾದ ಜಾಗದಲ್ಲಿ ಹಳೆಯ ಕಟ್ಟಡಗಳನ್ನು ಕೆಡವಲು ಮಿನಿ ವಿಧಾನಸೌಧ ಕಾಮಗಾರಿಯನ್ನು ಕಂದಾಯ ಇಲಾಖೆಯಿಂದ ಮಂಜೂರಾತಿ ನೀಡಿದ್ದಲ್ಲಿ ಕಾಮಗಾರಿಯನ್ನು ಟೆಂಡರ್ ಪ್ರಕ್ರಿಯೆ ಮುಖಾಂತರ ಕೈಗೊಳ್ಳಲಾಗುವುದು.

ಇ) ಸದರಿ ಕಾಮಗಾರಿಯನ್ನು ನಿರ್ಮಾಣ ಮಾಡಲು ಪ್ರಸ್ತುತ ಹಳೆ ತಹಶೀಲ್ದಾರ್ ಕಛೇರಿ ಆವರಣದಲ್ಲಿ ಸ್ಥಳಾವಕಾಶ ಮಾಡಲಾಗಿರುವುದರಿಂದ ಕಂದಾಯ ಇಲಾಖೆಯಿಂದ ಮಂಜೂರಾತಿ ದೊರೆತ ನಂತರ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಒಂದು ವರ್ಷ ಕಾಲಾವಕಾಶ ನಿಗದಿಪಡಿಸಲಾಗುವುದು.

ಈ) ಕಾಮಗಾರಿ ಪ್ರಾರಂಭಿಸಿದ ಅವಧಿಯಿಂದ ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

196 Sri Subhash R.Guttedar(Aland) : Hon'ble PWD Minister kindly answer to the below question?

a) What is the grant allotted for the construction of Mini Vidhana Soudha building in Aland Taluka of Gulbarga District and in which year grant released.

b) If released, what are the reasons for delay to start the work so far (Details to be given);

c) When the building work will b started. Is there any time limit fixed by the Government to Complete this work.

d) If yes, when this work will be completed.

Sri C.M.UDASI (PWD Minister) :

a) The work of Construction of Mini Vidhana Soudha building at Aland is approved for an estimated cost of Rs. 150-00 lakhs with the allocated grant of Rs.45-00 lakhs in the budget during the year 2008-09.

b) Due to non-availability of land.

c) Now the land is available in the premises of Old Tahasildar Office at Aland and the layout plan of this site has been submitted to the Principal Chief Architect, Bangalore for approval. Soon after getting the approval to the plan, the work will be started on tender basis after obtaining administrative approval & Technical sanction to the estimate. To complete the building work one year period is required after tender is awarded.

d) The work will be completed in one year after starting the work.

815 ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪು ವಿಧಾನಸಭಾ ಕ್ಷೇತ್ರದ ಹೆಜಮಾಡಿ ಮೀನುಗಾರಿಕೆ ಬಂದರು ಪ್ರಸ್ತಾವನೆ ಹಾಗೂ ಪ್ರಗತಿ ಯಾವ ಹಂತದಲ್ಲಿದೆ;

ಆ) ಹೆಜಮಾಡಿ ಶಾಂಭವಿ ನದಿಯ ಬಂದರು ಪ್ರದೇಶದಲ್ಲಿ ನದಿಯ ಹೂಳೆತ್ತುವ ಯೋಜನೆಗೆ ಹಣ ಮಂಜೂರಾಗಿದ್ದರೂ ಯಾವುದೇ ಕಾಮಗಾರಿ ಪ್ರಾರಂಭಿಸದಿರುವ ಬಗ್ಗೆ ಇಲಾಖೆಯ ನಿಲುವೇನು;

ಇ) ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಯೋಜನೆಯಿಂದ ಈ ಬಂದರು ಯೋಜನೆಗೆ ಜರೂರಾಗಿ ಹಣ ಬಿಡುಗಡೆಗೊಳಿಸಿ ಬಂದರು ಕಾಮಗಾರಿ ಪ್ರಾರಂಭಿಸಲಾಗುವುದೇ?

ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಕಾಪು ವಿಧಾನಸಭಾ ಕ್ಷೇತ್ರದ ಹೆಜಮಾಡಿ ಮೀನುಗಾರಿಕೆ ಇಳಿದಾಣ ಕೇಂದ್ರವನ್ನು ಕೇಂದ್ರ ಪುರಸ್ಕೃತ ಯೋಜನೆಯಡಿ ಅಂದಾಜು ರೂ.135.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಿ ಮೀನುಗಾರಿಕೆ ಚಟುವಟಿಕೆಗಳನ್ನು 2002ನೇ ಸಾಲಿನಿಂದಲೇ ನಡೆಸಿಕೊಂಡು ಬರಲಾಗುತ್ತಿದೆ. ಬಂದರಿನಲ್ಲಿ ಅಧಿಕ ಪ್ರಮಾಣದಲ್ಲಿ ಹೂಳು ತುಂಬಿದ್ದರಿಂದ, ಇಳಿದಾಣ ಕೇಂದ್ರವನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲು ಅನುವಾಗುವಂತೆ ರೂ.87.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಹೂಳೆತ್ತುವ ಮತ್ತು ಗೈಡ್‌ಬಂಡ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಯಿತಾದರೂ ತದನಂತರ ಅದರೊಡನೆ ಇನ್ನೂ ಕೆಲವು ಅಗತ್ಯ ಪೂರಕ ಕಾಮಗಾರಿಗಳನ್ನು ಕೈಗೊಳ್ಳಬೇಕಾದ ಅವಶ್ಯಕತೆ ಕಂಡು ಬಂದಿದ್ದರಿಂದ ಅದನ್ನೂ ಸೇರಿಸಿಕೊಂಡು ಹೆಜಮಾಡಿ ಕೋಡಿ ಮೀನುಗಾರಿಕೆ ತಂಗುದಾಣ 2ನೇ ಹಂತದ ಕಾಮಗಾರಿ ಎಂದು ಪರಿಗಣಿಸಿ ಪರಿಷ್ಕೃತ ಅಂದಾಜನ್ನು ತಯಾರಿಸಿ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಬಂದರು ಇಲಾಖೆಯನ್ನು ಕೋರಲಾಗಿದ್ದು, ಅದು ಬಂದ ನಂತರ ಅದರ ಆರ್ಥಿಕ ಮತ್ತು ತಾಂತ್ರಿಕ ಸಾರ್ಥಕತೆಗಳ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು.

ಆ) ಹೆಜಮಾಡಿ ಮೀನುಗಾರಿಕೆ ಇಳಿದಾಣ ಕೇಂದ್ರದಲ್ಲಿ ಹೂಳೆತ್ತುವ ಕಾಮಗಾರಿಗಾಗಿ ಆಗಸ್ಟ್ 2007 ರಲ್ಲಿ ರೂ.200.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಆದರೆ,

ತಡೆಗೋಡೆಗಳನ್ನು ನಿರ್ಮಿಸದೇ ಹೂಳೆತ್ತುವುದರಿಂದ ಯಾವುದೇ ಪ್ರಯೋಜನವಿಲ್ಲವಾದ್ದರಿಂದ ಅದರ ಆರ್ಥಿಕ ಹಾಗೂ ತಾಂತ್ರಿಕ ಸಾರ್ಥಕತೆ ಪರಿಶೀಲಿಸಿಕೊಳ್ಳುವಂತೆ ಸಿ.ಡಬ್ಲ್ಯೂ.ಪಿ.ಆರ್.ಎಸ್. ಪುಣೆರವರು ತಾಂತ್ರಿಕ ಅಭಿಪ್ರಾಯವನ್ನು ನೀಡಿದ್ದು ಅದರಂತೆ ಮೊದಲು ತಡೆಗೋಡೆ/ ಗೈಡ್‌ಬಂಡ್ ನಿರ್ಮಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸುವಂತೆ ಹಾಗೂ ಅದು ಆರ್ಥಿಕ ಮತ್ತು ತಾಂತ್ರಿಕವಾಗಿ ಸಾರ್ಥಕವಲ್ಲ ಅನ್ನುವುದಾದರೆ ಅದನ್ನು ಕೈಗೊಳ್ಳದಿರಲು ಮೀನುಗಾರಿಕೆ ನಿರ್ದೇಶಕರಿಗೆ ಸೂಚಿಸಲಾಗಿರುತ್ತದೆ.

ಇ) ಹೆಜಮಾಡಿ ಇಳಿದಾಣ ಕೇಂದ್ರದಲ್ಲಿ ತಡೆಗೋಡೆ ಮತ್ತು ಗೈಡ್‌ಬಂಡ್ ನಿರ್ಮಾಣ ಹಾಗೂ ಹೂಳೆತ್ತುವ ಕಾಮಗಾರಿಗಳನ್ನು ಒಳಗೊಂಡಂತೆ ವಿವರವಾದ ಅಂದಾಜು ಪಟ್ಟಿಯನ್ನು ಬಂದರು ಇಲಾಖೆಯಿಂದ ಪಡೆದು ಅದು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಲಾಭದಾಯಕವಾಗುವಂತಿದ್ದರೆ ಮಾತ್ರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಪಡೆದು ಕಾರ್ಯಗತಗೊಳಿಸಲಾಗುವುದು.

966 ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ–ಧಾರವಾಡ ಪೂರ್ವ) : ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಮತ್ತು ನಗರಸಭೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗೆ 2007–08 ಹಾಗೂ 2008–09ನೇ ಸಾಲಿನಲ್ಲಿ ಎಸ್‌ಎಫ್‌ಸಿ ಗ್ರಾಂಟನ್ನು ಬಿಡುಗಡೆ ಮಾಡಿದ ಅನುದಾನ ಮೊತ್ತವೆಷ್ಟು;

ಆ) ಪ್ರತಿಯೊಂದು ಕಾಮಗಾರಿಗಳವಾರು ವಿವರ ನೀಡುವುದು?

ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಮತ್ತು ನಗರಸಭೆ ಸಚಿವರು) :

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಗೆ ಎಸ್.ಎಫ್.ಸಿ. ಅನುದಾನ 2007–08 ಹಾಗೂ 2008–09ನೇ ಸಾಲಿಗೆ ಈ ಕೆಳಗಿನಂತೆ ಬಿಡುಗಡೆಗೊಳಿಸಲಾಗಿದೆ.

ರೂ,ಲಕ್ಷಗಳಲ್ಲಿ

ಕ್ರ ಸಂ.	ಅನುದಾನ	2007-08	2008-09
1	ವೇತನ	3541.80	4250.16
2	ಮುಕ್ತನಿಧಿ	2043.98	1804.16
3	ವಿಶೇಷ ಅಭಿವೃದ್ಧಿ ಅನುದಾನ	20.00	100.00
4	ವಿದ್ಯುತ್ ಶುಲ್ಕ ಪಾವತಿಗೆ	2258.16	2258.16
5	ಪ್ರೋತ್ಸಾಹಕ ಅನುದಾನ	165.45	–
6	ಕುಡಿಯುವ ನೀರು ಪರಿಹಾರ ನಿಧಿ	10.00	31.25

ಆ) 2007-08 ಹಾಗೂ 2008-09ನೇ ಸಾಲಿನಲ್ಲಿ ಎಸ್.ಎಫ್.ಎ. ಅನುದಾನದ ಮುಕ್ತನಿಧಿ ಹಾಗೂ ವಿಶೇಷ ಅಭಿವೃದ್ಧಿ ನಿಧಿಯಡಿ ಕೈಗೊಳ್ಳಲಾದ ಕಾಮಗಾರಿಗಳ ವಿವರವನ್ನು ಲಗತ್ತಿಸಲಾಗಿದೆ.

ಅನುಬಂಧ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಸನ್ 2008-09ನೇ ಸಾಲಿನ ಎಸ್.ಎಫ್.ಸಿ. ಅನುದಾನದ ಕಾಮಗಾರಿಗಳವಾರು ವಿವರ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕೆಲಸದ ವಿವರ	ಅಂದಾಜು ಮೊತ್ತ ರೂ.
1	**2**	**3**
1	ಹುಬ್ಬಳ್ಳಿ ವಿಭಾಗದ ವಾರ್ಡ್ ನಂ-23 ರ ಶಿವಾನಂದ ನಗರದ ಒಳಚರಂಡಿ ಕೊಳವೆ ಮಾರ್ಗವನ್ನು ನಂದೀಶ್ವರ ನಗರದ ಕೆರೆಯ ಹಿಂಭಾಗಕ್ಕೆ ಜೋಡಿಸುವುದು.	29.50
2	ಹುಬ್ಬಳ್ಳಿ ವಿಭಾಗದ ವಾರ್ಡ್ ನಂ-24ರ ಬಸವೇಶ್ವರ ಸರ್ಕಲ್‌ದಿಂದ ಕುವೆಂಪು ರಸ್ತೆಯವರೆಗೆ ಬಲಭಾಗದಲ್ಲಿ ಗಟಾರ ನಿರ್ಮಾಣ ಮಾಡುವುದು.	11.19

3	ಹುಬ್ಬಳ್ಳಿ ವಿಭಾಗದ ವಾರ್ಡ ನಂ–24ರ ಅಮರಗೋಳ ಗ್ರಾಮದ ಹೊಸಪೇಟೆ ಓಣಿ ಹಿಂಭಾಗದಲ್ಲಿ ಆರ್.ಸಿ.ಸಿ. ಗಟಾರ ನಿರ್ಮಾಣ ಮಾಡುವುದು.	6.94
4	ಹು.ವಿ.ವಾರ್ಡ್ ನಂ–25ರ ವಿಕತಾನಗರದಲ್ಲಿ ಒಳಚರಂಡಿ ಕಾಮಗಾರಿ ಮಾಡುವುದು (ಶೇಕಡಾ 18ರ ಅನುದಾನ)	17.03
5	ಹು.ವಿ.ವಾರ್ಡ್ ನಂ–26ರ ಶಿವಗಿರಿ ಹಾಗೂ ಲಿಂಗರಾಜನಗರ ರಸ್ತೆಗಳಿಗೆ (50 ಮಿಮೀ) ಡಾಂಬರೀಕರಣ ಮಾಡುವುದು	15.00
6	ಹು.ವಿ.ವಾರ್ಡ ನಂ–27ರ ಟಿಂಬರ್ ಯಾರ್ಡ್‌ದಿಂದ ಸಿದ್ದಕಲ್ಯಾಣನಗರ ರಸ್ತೆಗಳಿಗೆ 50ಮಿಮೀ. ಡಾಂಬರೀಕರಣ ಮಾಡುವುದು.	15.00
7	ಹು.ವಿ.ವಾರ್ಡ್ ನಂ–28ರ ರೆವಿನ್ಯೂ ಕಾಲನಿ ಮುಖ್ಯ ರಸ್ತೆ ಹಾಗೂ ಉಪರಸ್ತೆಗಳಿಗೆ ಡಾಂಬರೀಕರಣ ಮಾಡುವುದು	15.00
8	ಹು.ವಿ.ವಾರ್ಡ್ ನಂ–34ರ ಕುಂಬಕೋಣಂ ಪ್ಲಾಟ್ ಮುಖ್ಯ ರಸ್ತೆ ಹಾಗೂ ಉಪರಸ್ತೆಗಳಿಗೆ ಡಾಂಬರೀಕರಣ ಮಾಡುವುದು	15.00
9	ಹು.ವಿ.ವಾರ್ಡ್ ನಂ–35ರ ಪ್ರಗತಿ ಕಾಲನಿಯಲ್ಲಿ ಆರ್.ಸಿ.ಸಿ. ತೆರೆದ ಚರಂಡಿ ಕಟ್ಟುವುದು.	15.00
10	ಹು.ವಿ.ವಾರ್ಡ ನಂ–46ರ ಬ್ಯಾಹಟ್ಟಿ ಪ್ಲಾಟ್ ಮುಖ್ಯ ಹಾಗೂ ಉಪರಸ್ತೆಗಳಿಗೆ ಡಾಂಬರೀಕರಣ ಮಾಡುವುದು	15.00
11	ಹು.ವಿ.ವಾರ್ಡ್ ನಂ–29ರ ಮಾಧವನಗರದಲ್ಲಿ ರಸ್ತೆಗಳಿಗೆ ಕಾಂಕ್ರೀಟಿ ಪೇವಿಂಗ ಮಾಡುವುದು.	9.55
12	ಹು.ವಿ.ವಾರ್ಡ್ ನಂ–29ರ ಸುಣ್ಣದ ಭಟ್ಟಿ ಓಣಿ ರಸ್ತೆಗಳಿಗೆ ಕಾಖಮಕ್ರೀಟ್ ಪೇವಿಂಗ್ ಮಾಡುವುದು (ಶೇಕಡಾ 18ರ ಅನುದಾನ)	4.41
13	ಹು.ವಿ.ವಾರ್ಡ್ ನಂ–30ರ ಅಂಬಿಕಾನಗರ ಮುಖ್ಯ ರಸ್ತೆಗೆ ಡಾಂಬರ ಪುನರ್‌ಲೇಪನ ಮಾಡುವುದು.	15.00

14	ಹು.ವಿ.ವಾರ್ಡ್ ನಂ–31ರ ಭುವನೇಶ್ವರಿನಗರ ಗಾರ್ಡನ್ನಿಗೆ ಚೈನಲಿಂಕ್ ಮೆಸ್ ಅಳವಡಿಸುವುದು.	8.35
15	ಹು.ವಿ.ವಾರ್ಡ್ ನಂ–31ರ ಸುಭಾಸನಗರ ಗಾರ್ಡನ್ನಿಗೆ ಚೈನಲಿಂಕ್ ಮೆಸ್ ಅಳವಡಿಸುವುದು.	4.04
16	ಹು.ವಿ.ವಾರ್ಡ್ ನಂ–32ರ ದಯಾನಂದ ಕಾಲನಿಯಲ್ಲಿ ಕಾಂಕ್ರೀಟ್ ಹಾಗೂ 'ವ್ಹಿ' ಅಕಾರದ ತೆರೆದ ಚರಂಡಿ ಕಟ್ಟುವುದು.	7.95
17	ಹು.ವಿ.ವಾರ್ಡ್ ನಂ–32ರ ಚಲನಾದಿ ಓಣಿ ಹಾಗೂ ದಯಾನಂದ ಕಾಲನಿ ರಸ್ತೆಗಳಿಗೆ ಕಾಂಕ್ರೀಟ್ ಪೇವಿಂಗ್ ಮಾಡುವುದು. (ಶೇಕಡಾ 18ರ ಅನುದಾನ)	6.55
18	ಹು.ವಿ.ವಾರ್ಡ್ ನಂ–33ರ ವಿಜಯನಗರ, ಚಂದ್ರನಾಥನಗರ, ಮಯೂರಿ ಬಡಾವಣೆ ಹಾಗೂ ದೇಶಪಾಂಡೆ ಲೇಔಟ್‌ಗಳಲ್ಲಿ ಕಾಂಕ್ರೀಟ್ ಹಾಗೂ 'ವ್ಹಿ' ಆಕಾರದ ಹೊಸ ತೆರೆದ ಚರಂಡಿ ಕಟ್ಟುವುದು.	12.51
19	ಹು.ವಿ.ದ ವಾ ನಂ–33ರ ವಿಜಯನಗರ ಹಾಗೂ ಚಂದ್ರನಾಥನಗರದಲ್ಲಿ ಕಲ್ಲಿನ ತೆರೆದ ಚರಂಡಿ ದುರಸ್ತಿ ಮಾಡುವುದು.	5.00
20	ಹು.ವಿ.ದ ವಾ ನಂ–48ರ ವಸಂತನಗರ ಕ್ರಾಸ್ ದಿಂದ ಗಾಂಧೀವಾಡ ಚರ್ಚೆವರೆಗೆ ಮುಖ್ಯರಸ್ತೆಗೆ ಡಾಂಬರ ಪುನರ್‌ಲೇಪನ ಮಾಡುವುದು.	15.00
21	ಹು.ವಿ.ದ ವಾ ನಂ–49ರ ಅರಳಿಕಟ್ಟಿ ಓಣಿ ರಸ್ತೆಗಳಿಗೆ ಖಡಿಕರಣ ಮಾಡುವುದು.	1.89
22	ಹು.ವಿ.ದ ವಾ ನಂ–49ರ ಅರಳಿಕಟ್ಟಿ ಓಣಿಯಲ್ಲಿ ಕಾಂಕ್ರೀಟ್ ತೆರೆದ ಚರಂಡಿ ಹಾಗೂ ಕುಲಕರ್ಣಿ ಹಕ್ಕಲದಲದಲ್ಲಿ 'ವಿ' ಆಕಾರದ ಚರಂಡಿ ಕಟ್ಟುವುದು.	7.57
23	ಹು.ವಿ.ದ ವಾ ನಂ–49ರ ಲಿಮೆ ಚಾಳ, ಶಂಕರರಾವ್ ಚಾಳ ಹಾಗೂ ಕುಲಕರ್ಣಿ ಹಕ್ಕಲದಲ್ಲಿ ಇಂಟರಾಕ್ ಪೇವಿಂಗ್ ಮಾಡುವುದು.	5.54
24	ಹು.ವಿ.ದ ವಾ ನಂ–36 ರಲ್ಲಿಯ ರಾಮಕೃಷ್ಣನಗರ	9.90

	ಹಾಗೂ ವಿವೇಕಾನಂದನಗರ ಮುಖ್ಯ ಹಾಗೂ ಉಪರಸ್ತೆಗಳಿಗೆ ಪುನರ ಡಾಂಬರೀಕರಣ ಮಾಡುವುದು.	
25	ಹು.ವಿ.ದ ವಾ ನಂ–36 ರಲ್ಲಿಯ ಮಹಾಲಕ್ಷ್ಮೀ ಲೇಔಟಿನ ಧನ್ವಂತರಿ ಕ್ಲಿನಿಕದಿಂದ ಸಾಲಿಮರ ಮನೆ ಮುಂದೆ ಹಾಯ್ದು ಗಾಂಧಿನಗರ ನಾಲಾದವರೆಗೆ ಕಾಂಕ್ರೀಟ ತೆರೆದ ಚರಂಡಿ ನಿರ್ಮಾಣ 5.10.	5.10
26	ಹು.ವಿ. ವಾ ನಂ–37 ರಲ್ಲಿಯ ಗಣೇಶ ಕಾಲನಿ ಒಳಚರಂಡಿ ಕೊಳವೆ ಮಾರ್ಗ ಅಳವಡಿಸುವುದು.	2.15
27	ಹು.ವಿ. ವಾರ್ಡ ನಂ–37 ಗೋಕುಲದ ಸತ್ತೂರವರ ಮನೆಯಿಂದ ಪ್ರಾಥಮಿಕ ಶಾಲೆಯನ್ನು ಕುಡುವ ರಸ್ತೆಯ ತನಕ ಒಳಚರಂಡಿ ಕೊಳವೆ ಮಾರ್ಗ ಹಾಕುವುದು.	2.75
28	ಹು.ವಿ.ವಾ ನಂ–37 ರಲ್ಲಿಯ ರಾಧಾಕೃಷ್ಣನಗರದ ಎರಡು ರಸ್ತೆಗಳಿಗೆ ಮೆಟಲಿಂಗ ಮಾಡುವುದು.	1.25
29	ಹು.ವಿ.ವಾ ನಂ–37 ರಲ್ಲಿಯ ಕಾರಿಹಾಳ ಗುಳಗಣ್ಣವರ ಓಣಿಯಲ್ಲಿ ಕಾಂಕ್ರೀಟ್ ರಸ್ತೆ ಮಾಡುವುದು.	1.95
30	ಹು.ವಿ.ವಾ ನಂ–37ರಲ್ಲಿಯ ಗೋಕುಲದಲ್ಲಿ ಗೌಡರ ಓಣಿಯಲ್ಲಿ ಕಾಂಕ್ರೀಟ್ ರಸ್ತೆ ಮಾಡುವುದು.	1.80
31	ಹು.ವಿ.ವಾ ನಂ–37 ರಲ್ಲಿಯ ಗೋಕುಲದ ಮೈಲಾರಲಿಂಗೇಶ್ವರನಗರದ ಉಳಿದ ಭಾಗಗಳಿಗೆ ಒಳಚರಂಡಿ ಕೊಳವೆ ಮಾರ್ಗ ಹಾಕುವುದು, (ಶೇಕಡಾ 18ರ ಅನುದಾನ)	5.10
32	ಹು.ವಿ.ವಾ ನಂ–38 ರಲ್ಲಿಯ ಆನಂದನಗರ ವಿವೇಕಾನಂದ ಉದ್ಯಾನವನ ಹತ್ತಿರ ಅರ್ಜುನ ಕಲಘಟಗಿ ಮನೆಯಿಂದ ನಾಲಾದವರೆಗೆ ಕಾಂಕ್ರೀಟ ಗಟಾರ ನಿರ್ಮಾಣ	7.95
33	ಹು.ವಿ.ವಾ ನಂ–38 ರಲ್ಲಿಯ ಸುರಭಿನಗರ (ದೇವಿಕಾಲನಿ) ರಸ್ತೆ ಖಡೀಕರಣ ಮಾಡುವುದು.	3.10

34	ಹು.ವಿ.ವಾ ನಂ–38 ರಲ್ಲಿಯ ಮಯೂರನಗರ ಉಪರಸ್ತೆಗಳಿಗೆ ಖಡೀಕರಣ ಮಾಡುವುದು.	2.50
35	ಹು.ವಿ.ವಾ ನಂ–38 ರಲ್ಲಿಯ ಆನಂದನಗರ ಹೊರಡಿ ಅವರ ಮನೆಯಿಂದ ಅನ್ನಪೂರ್ಣೇಶ್ವರಿ ಹಿಟ್ಟಿನ ಗಿರಣಿ ಮುಖಾಂತರ ನಾಲಾದವರೆಗೆ ಖಡೀಕರಣ ಮಾಡುವುದು.	1.45
36	ಹು.ವಿ.ವಾ ನಂ–39 ರಲ್ಲಿಯ ಸುಭಾಸನಗರ ದೊಡ್ಡಮನಿ ಮಾಸ್ತರ ಮನೆಯಿಂದ ಕಾರವಾರ ರಸ್ತೆಯವರೆಗೆ ಆರ್‌ಸಿಸಿ ಗಟಾರ ಹಾಗೂ ಅಡಿಗಾಲುವೆ ನಿರ್ಮಿಸುವುದು.	7.43
37	ಹು.ವಿ.ವಾ ನಂ–39 ಬಾಫಣಾ ಬಡಾವಣೆಯಲ್ಲಿಯ ಕೆ.ಇ.ಬಿ. ಊಖಿ ಕಾರಿಡಾರ ಪಕ್ಕದ ರಸ್ತೆಯಲ್ಲಿ RCC ತೆರೆದ ಚರಂಡಿ ಹಾಗೂ ಅಆಗಳನ್ನು ನಿರ್ಮಿಸುವುದು.	7.57
38	ಹು.ವಿ.ವಾ ನಂ–40 ನಾಗಲಿಂಗಸಗಿರ ಸಿಮೆಂಟ್ ರಸ್ತೆಗಳ ನಿರ್ಮಾಣ.	3.70
39	ಹು.ವಿ.ವಾ ನಂ–40 ಚೈತನ್ಯನಗರ ಮತ್ತು ರಾಜೇಂದ್ರನಗರ ಮುಖ್ಯ ರಸ್ತೆಗಳಿಗೆ ಮೆಟಲಿಂಗ ಮತ್ತು ಡಾಂಬರೀಕರಣ ಮಾಡುವುದು.	7.20
40	ಹು.ವಿ.ವಾ ನಂ–40 ಪದ್ಮರಾಜನಗರ ಮುಖ್ಯ ರಸ್ತೆಗಳ ಮೆಟಲಿಂಗ ಮತ್ತು ಡಾಂಬರೀಕರಣ ಮಾಡುವುದು.	4.10
41	ಧಾರವಾಡ ವಿಭಾಗದ ವಾರ್ಡ ನಂ–1 ರಲ್ಲಿ ಕೆಲಗೇರಿ ವಾಡರ ಓಣಿ ಹಾಗೂ ದೊಡ್ಡಮನಿ ಓಣಿ ಭಾಗದಲ್ಲಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು. (ಶೇಕಡಾ 18ರ ಅನುದಾನ)	7.70
42	ಧಾರವಾಡ ವಿಭಾಗದ ವಾರ್ಡ ನಂ–1ರಲ್ಲಿ ಕೆಲಗೇರಿ ಹೊಸೂರ ಓಣಿ ರಸ್ತೆಯಲ್ಲಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು.	7.30

43	ಧಾರವಾಡ ವಿಭಾಗದ ವಾರ್ಡ ನಂ–2 ರ ಕುಸುಮನಗರ ಶ್ರೀ ಗುಂಡವಾಡಿ ಮನೆಯಿಂದ ಗಾರ್ಡನ್‌ವರೆಗೆ ತೆರೆದ ಚರಂಡಿ ಕಟ್ಟುವುದು.	3.55
44	ಧಾರವಾಡ ವಿಬಾಗದ ವಾರ್ಡ ನಂ–2 ರ ನಾರಾಯಣಪೂರ 2ನೇ ಮುಖ್ಯರಸ್ತೆ 5ನೇ ಅಡ್ಡರಸ್ತೆಯ ಶ್ರೀ ಸರ್ವದೇ ಮನೆ ಹತ್ತಿರ ತೆರೆದ ಚರಂಡಿ ಕಟ್ಟುವುದು.	3.50
45	ಧಾರವಾಡ ವಿಭಾಗದ ವಾರ್ಡ ನಂ–2 ರ ನಾರಾಯಣಪುರ 1ನೇ ಮುಖ್ಯರಸ್ತೆ 4ನೇ ಅಡ್ಡರಸ್ತೆಯ ಶ್ರೀ ಮೆಹತಾ ಮನೆ ಹತ್ತಿರ ತೆರೆದ ಚರಂಡಿ ಕಟ್ಟುವುದು.	3.35
46	ಧಾ.ವಿ.ವಾ.ನಂ–2 ರ ನಾರಾಯಣಪೂರ (1ನೇ ಮುಖ್ಯ 4ನೇ ಅಡ್ಡ ರಸ್ತೆ) ಉದ್ಯಾನವನದ ಸುತ್ತಲೂ ಜೈನ್ ಲಿಂಕ್ ಬೇಲಿ ಅಳವಡಿಸುವುದು.	4.60
47	ಧಾ.ವಿ.ವಾ.ನಂ–3 ರ ಸಿದ್ದಾರ್ಥ ಕಾಲನಿಯಲ್ಲಿ ಆರ್.ಸಿ.ಸಿ. ತೆರೆದ ಚರಂಡಿ ಕಟ್ಟುವುದು.	7.50
48	ಧಾ.ವಿ.ವಾ.ನಂ–3ರ ಎತ್ತಿನಗುಡ್ಡ ಗ್ರಾಮದಲ್ಲಿ ಆರ್.ಸಿ.ಸಿ. ತೆರೆದ ಚರಂಡಿ ಕಟ್ಟುವುದು.	7.50
49	ಧಾ.ವಿ.ವಾ.ನಂ–4 ರ ಮೆಹಬೂಬನಗರದಲ್ಲಿ ಕಾಂಕ್ರೀಟ ರಸ್ತೆ ನಿರ್ಮಿಸುವುದು.	15.00
50	ಧಾ.ವಿ.ವಾ.ನಂ–5 ರ ಅನಾಡಗಲ್ಲಿ ಆರ್.ಸಿ.ಸಿ. ತೆರೆದ ಚರಂಡಿ ನಿರ್ಮಿಸುವುದು.	7.50
51	ಧಾ.ವಿ.ವಾ.ನಂ–5 ರ ಜಂಬಗಿ ಓಣಿ, ಕೋಟಿ ಓಣಿ ಮತ್ತು ಹೂಗಾರ ಓಣಿಯಲ್ಲಿ ಆರ್.ಸಿ.ಸಿ. ತೆರೆದ ಚರಂಡಿ ನಿರ್ಮಿಸಿ ರಸ್ತೆ ಡಾಂಬರೀಕರಣ ಮಾಡುವುದು.	7.50
52	ಧಾ.ವಿ.ವಾ.ನಂ–6 ಕಂಠಿ ಓಣಿ ರಸ್ತೆ ಎರಡು ಬದಿಗೆ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು.	4.36
53	ಧಾ.ವಿ.ವಾ.ನಂ–6 ಜಿರಲಿ ಪ್ಲಾಟಿದಲ್ಲಿ ರಸ್ತೆಗಳಿಗೆ ಹೊಸದಾಗಿ ಒಳಚರಂಡಿ ಕೊಳವೆ ಹಾಕಿ ಶಾಖೆ ಕಟ್ಟುವುದು	1.658

54	ಧಾ.ವಿ.ವಾ.ನಂ–6 ಹಾವೇರಿಪೇಟ ಮ್ಯಾದಾರ ಓಣಿಯಲ್ಲಿ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು (ಶೇಕಡಾ 18ರ ಅನುದಾನ)	5.10
55	ಧಾ.ವಿ.ವಾ.ನಂ–6 ಮೃತ್ಯುಂಜಯ ಮುಸ್ಲಿಂ ಸ್ಮಶಾನದಲ್ಲಿ ಹೊಸದಾಗಿ ಖಡಿ ರಸ್ತೆ ಮಾಡುವುದು	1.00
56	ಧಾ.ವಿ.ವಾ.ನಂ–6 ಜಿರಲಿ ಪ್ಲಾಟಿದಲ್ಲಿ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು.	2.89
57	ಧಾ.ವಿ.ವಾ.ನಂ–7 ದರೋಗಾ ಪ್ಲಾಟಿದಲ್ಲಿ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು	6.00
58	ಧಾ.ವಿ.ವಾ.ನಂ–7 ದರೋಗಾ ಪ್ಲಾಟಿದಲ್ಲಿಯ ರಸ್ತೆಗಳಿಗೆ ಹೊಸದಾಗಿ ಖಡಿ ರಸ್ತೆ ನಿರ್ಮಿಸುವುದು.	3.00
59	ಧಾ.ವಿ.ವಾ.ನಂ–7 ಪ್ರೇಮನಗರ ಹಾಗೂ ಗೊಲ್ಲರ ಕಾಲನಿ, ಚುರುಮರಿ ಭಟ್ಟಿ ಹತ್ತಿರ ರಸ್ತೆಗಳಿಗೆ ಸ್ಟೋನ್ ಪೇವ್ಹಿಂಗ್ ನಿರ್ಮಿಸುವುದು. (ಶೇಕಡಾ 18ರ ಅನುದಾನ)	1.40
60	ಧಾ.ವಿ.ವಾ.ನಂ–7 ಪ್ರೇಂ ನಗರದಲ್ಲಿ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು. (ಶೇಕಡಾ 18 ರ ಅನುದಾನ)	1.20
61	ಧಾ.ವಿ.ವಾ.ನಂ–7 ಹೂಗಾರ ಓಣಿ ಎರಡು ಬದಿಗೆ ಕಾಂಕ್ರೀಟ ತೆರೆದ ಚರಂಡಿ ಕಟ್ಟಿ ಆರ್.ಸಿ.ಸಿ. ದಪಾಸ ಹಾಕುವುದು.	3.40
62	ಧಾ.ವಿ.ವಾ.ನಂ–8 ಮುರುಘರಾಜೇಂದ್ರ ನಗರ ಮುಖ್ಯರಸ್ತೆ ಎಡ ಭಾಗದಲ್ಲಿ ತೆರೆದ ಚರಂಡಿ ನಿರ್ಮಿಸುವುದು.	5.50
63	ಧಾ.ವಿ.ವಾ.ನಂ–8 ಮುರುಘರಾಜೇಂದ್ರನಗರ 2ನೇ ಕ್ರಾಸ್‌ದಲ್ಲಿ ಕಾಂಕ್ರೀಟ ತೆರೆದ ಚರಂಡಿ ನಿರ್ಮಿಸುವುದು.	3.10
64	ಧಾ.ವಿ.ವಾ.ನಂ–8 ದೇಸಾಯಿ ಓಣಿ ಜೈನ ಗುಡಿ ಹತ್ತಿರ ಹಾಗೂ ಹಳೇ ತಾಲ್ಲೂಕು ಕಚೇರಿ ಓಣಿ ಕೂಡು ರಸ್ತೆಗೆ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು.	1.70

65	ಧಾ.ವಿ.ವಾ.ನಂ–8 ಮುರುಘರಾಜೇಂದ್ರನಗರ 3 ಮತ್ತು 4 ನೇ ಕ್ರಾಸ್‌ಗಳಿಗೆ ಡಾಂಬರೀಕರಣ ಮಾಡುವುದು.	4.70
66	ಧಾ.ವಿ.ವಾ.ನಂ–9 ಕೋಳಿಕೇತಿ 1ನೇ ಕ್ರಾಸ್‌ದಲ್ಲಿ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು ವ ಆರ್.ಸಿ.ಸಿ. ಸ್ಲ್ಯಾಬ್ ಹಾಕುವುದು.	2.70
67	ಧಾ.ವಿ.ವಾ.ನಂ–9 ಹೊಸಯಲ್ಲಾಪುರ ಮೇನ್ ರೋಡ ಹಾಗೂ ನುಚ್ಚುಲ್ಲಿ ಬಾವಿ ಹತ್ತಿರ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು.	4.17
68	ಧಾ.ವಿ.ವಾ.ನಂ–9 ಜೋಶಿ ಓಣಿ, ವಾಲ್ಮೀಕಿ ಓಣಿ, ರಜಪೂತ ಓಣಿ, ಹಾಗೂ ಬಾಳಿಕಾಯಿ ಓಣಿ, ಉಪರಸ್ತೆಗಳಿಗೆ ಕಾಂಕ್ರೀಟ ಪೇವ್ಹಿಂಗ್ ಮಾಡುವುದು.	5.05
69	ಧಾ.ವಿ.ವಾ.ನಂ–9 ಅರೇರ ಓಣಿಯಲ್ಲಿ ತೆರೆದ ಚರಂಡಿ ವ ಆರ್.ಸಿ.ಸಿ. ಸ್ಲ್ಯಾಬ್ ಹಾಕುವುದು.	3.08
70	ಧಾ.ವಿ.ವಾ.ನಂ–10 ಮಾದರಮಟ್ಟಿ ಮಾದರ ಓಣಿ ಉಪರಸ್ತೆಗಳಿಗೆ ಕಾಂಕ್ರೀಟ ಪೇವಿಂಗ್ ಮಾಡುವುದು. (ಶೇಕಡ 18ರ ಅನುದಾನ)	4.62
71	ಧಾ.ವಿ.ವಾ.ನಂ–10 ಜೈಭೀಮನಗರ ಮುಖ್ಯರಸ್ತೆ ಅಂಬಾ ಭವಾನಿ ಗುಡಿ ಹತ್ತಿರ ಹಾಗೂ ಪಿ.ಕೆ. ಕ್ವಾಟರ್ಸ ಹತ್ತಿರ ಒಳಚರಂಡಿ ಕೊಳವೆ ಹಾಕಿ ಚೇಂಬರ ಕಟ್ಟುವುದು (ಶೇಕಡಾ 18ರ ಅನುದಾನ)	1.11
72	ಧಾ.ವಿ.ವಾ.ನಂ–10 ಉಳ್ಳಾಗಡ್ಡಿ ಓಣಿ ಮೌನೇಶ್ವರ ಗುಡಿ ರಸ್ತೆಯಲ್ಲಿ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು.	3.30
73	ಧಾ.ವಿ.ವಾ.ನಂ–10 ಹೊಸಯಲ್ಲಾಪುರ ಮುಖ್ಯರಸ್ತೆ ಹಾಗೂ ಭಾವಣಿ ಓಣಿಯಲ್ಲಿ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು ವ ಸ್ಲ್ಯಾಬ್ ಹಾಕುವುದು.	3.40
74	ಧಾ.ವಿ.ವಾ.ನಂ–10 ನೇಕಾರ ಓಣಿ ಕ್ರಾಸ್ ಹಾಗೂ ದ್ಯಾಮವ್ವನ ಗುಡಿ ಓಣಿ ಮುಖ್ಯರಸ್ತೆಯಲ್ಲಿ ಕಾಂಕ್ರೀಟ ತೆರೆದ ಚರಂಡಿ ಕಟ್ಟುವುದು ವ ಸ್ಲ್ಯಾಬ್	2.57

	ಹಾಕುವುದು.	
75	ಧಾ.ವಿ.ವಾ.ನಂ–11 ಬಾರೂದ ಗಲ್ಲಿ, ಆತ್ತಾರಗಲ್ಲಿ ತಡಕೋಡ ಓಣಿ ಹಾಗೂ ಜಮಾದಾರಗಲ್ಲಿ ಕಾಪ ರಸ್ತೆಗಳಿಗೆ ಕಾಂಕ್ರೀಟ ಪೇವಿಂಗ್ ಮಾಡುವುದು.	6.58
76	ಧಾ.ವಿ.ವಾ.ನಂ–11 ರ ರಸೂಲಪೂರ ಓಣಿ ಹಾಗೂ ಬಿಸ್ತಿ ಓಣಿ ವಿವಿಧ ಸಂದಿಗಳಿಗೆ ಕಾಂಕ್ರೀಟ ಪೇವಿಂಗ್ ಮಾಡುವುದು.	8.42
77	ಧಾ.ವಿ.ವಾ.ನಂ–12ರ ಸೈದಾಪೂರ ಮುಖ್ಯರಸ್ತೆಯಲ್ಲಿ ಕಲ್ಲೇಶ್ವರ ಗುಡಿಯವರೆಗೆ ರಸ್ತೆ ಡಾಂಬರೀಕರಣ ಮಾಡುವುದು.	15.00
78	ಧಾ.ವಿ.ವಾ.ನಂ–13ರ ಸಪ್ತಾಪೂರ 1,2,3 ಮತ್ತು 6ನೇ ಕ್ರಾಸ್ ರಸ್ತೆಗಳಲ್ಲಿ ತೆರೆದ ಚರಂಡಿ ವ ಅಡಿಗಾಲುವ ಕಟ್ಟುವುದು.	6.90
79	ಧಾ.ವಿ.ವಾ.ನಂ–13 ರ ಸಪ್ತಾಪೂರ 7,8 ಮತ್ತು 10ನೇ ಕ್ರಾಸ್ ರಸ್ತೆಗಳಲ್ಲಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು.	8.10
80	ಧಾ.ವಿ.ವಾ.ನಂ–14 ರಲ್ಲಿ ಸಿ.ಐ.ಟಿ.ಬಿ. ವಿನ್ಯಾಸದಲ್ಲಿ ಶ್ರೀ ದೊಡ್ಡಮನಿಯವರ ಮನೆ ಹತ್ತಿರ ತೆರೆದ ಚರಂಡಿ ಕಟ್ಟುವುದು	2.50
81	ಧಾ.ವಿ.ವಾ.ನಂ–14ರಲ್ಲಿ ಜಯನಗರ ಶಿಗಡಿಯವರ ಮನೆಯಿಂದ ಅನುಪಮಾ ಹೋಟೆಲ್ ರಸ್ತೆಗೆ ತೆರೆದ ಚರಂಡಿ ಕಟ್ಟುವುದು.	3.50
82	ಧಾ.ವಿ.ವಾ.ನಂ–14 ರಲ್ಲಿ ಗೋಪಾಲಪುರದಲ್ಲಿ ಕೆ.ಇ. ಬೋರ್ಡ್ಸ್‌ದಿಂದ ರೈಲ್ವೆ ನಿಲ್ದಾಣದವರೆಗೆ ತೆರೆದ ಚರಂಡಿ ಕಟ್ಟುವುದು.	4.50
83	ಧಾ.ವಿ.ವಾ.ನಂ–14 ಮಾಳಮಡ್ಡಿ ಸಂಜೀವ ನಗರ ರಸ್ತೆಯಲ್ಲಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು.	4.50
84	ಧಾ.ವಿ.ವಾ.ನಂ–15ರ ಶಿವಾನಂದ ನಗರದ ಮಿಶನ್ ಕಾಂಪೌಂಡ ಮತ್ತು ಬೋವಿಗಳಲ್ಲಿ ಆರ್.ಸಿ.ಸಿ. ತೆರೆದ ಚರಂಡಿ ನಿರ್ಮಿಸಿ ರಸ್ತೆ ಡಾಂಬರೀಕರಣ	15.00

	ಮಾಡುವುದು.	
85	ಧಾ.ವಿ.ವಾ.ನಂ–16ರ ಇಸ್ಮಾಯಿಲ್ ಅಡ್ಡ ಮುಂಭಾಗದ ರಸ್ತೆಯಲ್ಲಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು. ಹಾಗೂ ಕಾಂಕ್ರೀಟ ರಸ್ತೆ ಮಾಡುವುದು.	8.50
86	ಧಾ.ವಿ.ವಾ.ನಂ–16 ರ ಲಕ್ಷ್ಮೀಸಿಂಗನಕೇರಿಯ ಕೆರೆಗೆ ಹೋಗುವ ರಸ್ತೆಗೆ ಕಾಂಕ್ರೀಟ ರಸ್ತೆ ಮಾಡುವುದು ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು. (ಶೇಕಡಾ 18ರ ಅನುದಾನ)	6.50
87	ಧಾ.ವಿ.ವಾ.ನಂ–17 ರ ಕಲ್ಯಾಣನಗರ 3ನೇ ಮುಖ್ಯರಸ್ತೆ 9ನೇ ಅಡ್ಡರಸ್ತೆ ಹಾಗೂ 11ನೇ ಉಪರಸ್ತೆಯಲ್ಲಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು.	4.370
88	ಧಾ.ವಿ.ವಾ.ನಂ–17ರ ಶ್ರೀರಾಮನಗರ ತುಳಜಾ ಭವಾನಿ ಗುಡಿ ಬದಿಯ ಉಪರಸ್ತೆಗಳಿಗೆ ಖಡಿ ರಸ್ತೆ ಮಾಡುವುದು. (ಶೇಕಡಾ 18ರ ಅನುದಾನ)	3.293
89	ಧಾ.ವಿ.ವಾ.ನಂ–17 ರ ಗಣೇಶನಗರ ಅಡ್ಡ ರಸ್ತೆ 2,3 ಮತ್ತು 4 ರಲ್ಲಿ ತೆರೆದ ಚರಂಡಿ ಕಟ್ಟುವುದು.	4.801
90	ಧಾ.ವಿ.ವಾ.ನಂ–17 ರಲ್ಲಿ ಬಸವ ನಗರ ಭಾಗ–2 ರಲ್ಲಿಯ ರಸ್ತೆಗಳಿಗೆ ಖಡಿ ರಸ್ತೆ ಮಾಡುವುದು.	2.87
91	ಧಾ.ವಿ.ವಾ.ನಂ–18 ರ ಪುರೋಹಿತನಗರ ಮುಖ್ಯರಸ್ತೆ ಹಾಗೂ ತೇಜಸ್ವಿನಗರ ರಸ್ತೆಗಳಲ್ಲಿ ಮತ್ತು ಶಾಲ್ಮಲಾನಗರದಲ್ಲಿ ತೆರೆದ ಚರಂಡಿ ಹಾಗೂ ಅಡಿಗಾಲುವೆ ಕಟ್ಟುವುದು.	9.72
92	ಧಾ.ವಿ.ವಾ.ನಂ–18 ರ ಅತ್ತಿಕೊಳ್ಳ ಮುಖ್ಯರಸ್ತೆ ಹಾಗೂ ಉಪರಸ್ತೆಗಳಲ್ಲಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು.	5.10
93	ಧಾ.ವಿ.ವಾ.ನಂ–19 ರ ಶಕ್ತಿನಗರ 2ನೇ ಮುಖ್ಯರಸ್ತೆಯಲ್ಲಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು.	9.68

94	ಧಾ.ವಿ.ವಾ.ನಂ–19ರ ರಜತಗಿರಿ 4ನೇ ಮುಖ್ಯರಸ್ತೆ 3ನೇ ಕ್ರಾಸ್ ವಿದ್ಯಾಗಿರಿ 2ನೇ ಮುಖ್ಯರಸ್ತೆಯ ಉಪರಸ್ತೆಗಳು ಹಾಗೂ ಗಾಂಧಿನಗರ ಮುಖ್ಯರಸ್ತೆಯಿಂದ ಸಿ.ಐ.ಟಿ.ಬಿ. ರಿ.ಸ.ನಂ–48, 49 ರ ಪಕ್ಕದಲ್ಲಿ ರಸ್ತೆ ಖಡೀಕರಣ ಮಾಡುವುದು.	6.24
95	ಧಾ.ವಿ.ವಾ.ನಂ–20ರ ಶಂಕರಪೂರ ಮುಖ್ಯರಸ್ತೆಯ ಎರಡು ಬದಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು.	8.61
96	ಧಾ.ವಿ.ವಾ.ನಂ–20ರ ಶಂಕರಮಠದ ಪಕ್ಕದಲ್ಲಿ ಹಾಗೂ ಅಂಬೇಡ್ಕರ್ ನಗರಕ್ಕೆ ಕೂಡು ರಸ್ತೆಯಲ್ಲಿ ತೆರೆದ ಚರಂಡಿ ಕಟ್ಟುವುದು. (ಶೇಕಡಾ 18ರ ಅನುದಾನ)	7.01
97	ಧಾ.ವಿ.ವಾ.ನಂ–21 ಬಟ್ಟರ ಓಣಿಯಲ್ಲಿ ರಸ್ತೆಗೆ ಕಾಂಕ್ರೀಟ ರಸ್ತೆ ಮಾಡುವುದು.	6.26
98	ಧಾ.ವಿ.ವಾ.ನಂ–21 ರ ನೇಕಾರ ಓಣಿಯಲ್ಲಿ ಭಾಗಶಃ ಖಡಿ ರಸ್ತೆ ಹಾಗೂ ಉಳಿದ ಭಾಗಗಳಲ್ಲಿ ಕಾಂಕ್ರೀಟ ರಸ್ತೆ ಮಾಡುವುದು.	7.490
99	ಧಾ.ವಿ.ವಾ.ನಂ–22ರ ಸುತಗಟ್ಟಿ ಗ್ರಾಮದಲ್ಲಿ ಓಣಿಗಳಲ್ಲಿ ಗಟಾರ ಹಾಗೂ ಡಾನ್ ಬಾಸ್ಕೊ ಸ್ಕೂಲ್ ಹತ್ತಿರ ಸಿ.ಡಿ. ಕಟ್ಟುವುದು.	7.50
100	ಧಾ.ವಿ.ವಾ.ನಂ–22 ರ ಸತ್ತೂರ ಗ್ರಾಮದ ಮುಖ್ಯರಸ್ತೆ ಎರಡು ಬದಿಯಲ್ಲಿ ತೆರೆದ ಚರಂಡಿ ಕಟ್ಟುವುದು ಹಾಗೂ ಅಡಿಗಾಲುವೆ ಕಟ್ಟುವುದು.	7.50
101	ಧಾ.ವಿ.ವಾ.ನಂ–41ರ ಹೆಗ್ಗೇರಿ ಕೆ.ಎಚ್.ಬಿ. ಕಾಲೋನಿ ಅಡ್ಡ ರಸ್ತೆಗಳಿಗೆ ಆರ್.ಸಿ.ಸಿ.ತೆರೆದ ಚರಂಡಿ ನಿರ್ಮಾಣ.	5.00
102	ಧಾ.ವಿ.ವಾ. ನಂ–41ರ ಸಿದ್ದಲಿಂಗೇಶ್ವರ ಕಾಲೋನಿಯ ಮುಖ್ಯ ರಸ್ತೆ ಹಾಗೂ ಅಡ್ಡ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು.	10.00
103	ಧಾ.ವಿ.ವಾ.ನಂ–42ರ ಚನ್ನಪೇಟ ಸರ್ಕಾರಿ ಕನ್ನಡ ಶಾಲೆಯ ಉತ್ತರ ಭಾಗದ ರಸ್ತೆ ಹಾಗೂ	5.00

9-99

	ಡಾಳಿಂಬರ್ ಪೇಟೆ ರಸ್ತೆಯ ಬಲಗಡೆ ಆರ್.ಸಿ.ಸಿ. ತೆರೆದಚರಂಡಿ ನಿರ್ಮಾಣ.	
104	ಧಾ.ವಿ.ವಾ.ನಂ–42ರ ಅರವಿಂದನಗರ ವಿವೇಕಾನಂದ ಶಾಲೆಯ ದಕ್ಷಿಣ ಭಾಗದ ಅಡ್ಡ ರಸ್ತೆಗಳ ಬದಿ ಆರ್.ಸಿ.ಸಿ.ತೆರೆದ ಚರಂಡಿ ನಿರ್ಮಾಣ.	10.00
105	ಹು.ವಿ.ವಾ.ನಂ 43ರ ಪಂಜೆ ಓಣಿ, ಅಪರಾದಿ ಓಣಿ, ಹಣಗಿ ಓಣಿ, ವಿಠ್ಠಲ ಪೇಟೆ, ಗುಡಿ ಓಣಿಗಳಿಗೆ ಡಾಂಬರೀಕರಣ ಮಾಡುವುದು.	14.78
106	ಧಾ.ವಿ.ವಾ.ನಂ–44ರ ತೂರವಿಹಕ್ಕಲ ಮುಖ್ಯ ರಸ್ತೆಯಿಂದ 2ನೇ ಅಡ್ಡ ರಸ್ತೆಗೆ ಹೊಂದಿ ಇರುವ ಒಳ ರಸ್ತೆಗಳಿಗೆ ಕಾಂಕ್ರೀಟ ಪೇವಿಂಗ ಮಾಡುವುದು. (ಶೇಕಡಾ 18ರ ಅನುದಾನ)	15.00
107	ಧಾ.ವಿ.ವಾ.ನಂ–45ರ ವಾಲವಾಡ ಆಸ್ಪತ್ರೆಯ ಮತ್ತು ವಿಠ್ಠಲ ಆಸ್ಪತ್ರೆ ಎದುರಿಗಿನ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು.	6.20
108	ಧಾ.ವಿ.ವಾ.ನಂ–45ರ ಹೊಸುರ ಯಾವಗಿಲ್ ಪ್ಲಾಟ ರಸ್ತೆಗಳಿಗೆ ಮತ್ತು ದಾಂಡೇಲಿ ಬಿಲ್ಡಿಂಗ್ ಹತ್ತಿರದ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು.	6.39
109	ಧಾ.ವಿ.ವಾ.ನಂ–45ರ ಗಿರಣಿಚಾಳ 3ನೇ ಅಡ್ಡರಸ್ತೆಗೆ ಡಾಂಬರೀಕರಣ ಮಾಡುವುದು. (ಶೇಕಡಾ 18ರ ಅನುದಾನ)	2.41
110	ಧಾ.ವಿ.ವಾ.ನಂ–47ರ ಲ್ಯಾಮಿಂಗ್‌ಟನ್ ರಸ್ತೆಯಿಂದ ನೆಹರೂ ಸ್ಟೇಡಿಯಂ ರಸ್ತೆ ಮಾರ್ಗ ಕೊಪ್ಪಿಕೆರೆ ರಸ್ತೆಗೆ ಸೇರುವ ರಸ್ತೆಯ ಬಲ ಭಾಗದಲ್ಲಿ ಆರ್.ಸಿ.ಸಿ. ಗಟಾರ ಕಟ್ಟಿ ಫುಟ್‌ಪಾತ್ ನಿರ್ಮಿಸುವುದು.	15.00
111	ಕುಲಕರ್ಣಿ ಹಕ್ಕಲ 3ನೇ ಕ್ರಾಸ್‌ನಲ್ಲಿ ಸಿ.ಸಿ. ಪೇವಿಂಗ್ ಮಾಡುವುದು.	3.35
112	ವಲ್ಲಬಾಯಿನಗರ ಅಡ್ಡ ರಸ್ತೆಗೆ ಡಾಂಬರೀಕರಣ ಮಾಡುವುದು.	3.36
113	ಮಂಟೂರ ರೋಡ ಕಲಬುರ್ಗಿ ಮಠದ	2.50

	ಸ್ಮಶಾನಗಳಿಗೆ ಕೂಡುವ ರಸ್ತೆಗೆ ಡಾಂಬರೀಕರಣ ಮಾಡುವುದು.	
114	ಮಂಟೂರ ರೋಡ ಬ್ಯಾಳಿಪ್ಲಾಟ 2ನೇ & 4ನೇ ಕ್ರಾಸಿಗೆ ಖಡೀಕರಣ ಮಾಡುವುದು.	5.79
115	ಹು.ವಿ.ವಾ.ನಂ–51ರ ಗಣೇಶ ಪೇಟೆ ಮುಕ್ಕೇರಿ ಓಣಿಗೆ ಮರು ಡಾಂಬರೀಕರಣ ಮಾಡುವುದು.	15.00
116	ಹು.ವಿ.ವಾ.ನಂ–52ರ ಗಣೇಶ ಪೇಟೆ ಮುಖ್ಯರಸ್ತೆ ವಿ.ಆರ್.ಎಲ್. ಆಫೀಸ್ ನಿಂದ ಮಂಟೂರ ರಸ್ತೆವರೆಗೆ ಡಾಂಬರೀಕರಣ ಮಾಡುವುದು.	6.50
117	ಹು.ವಿ.ವಾ.ನಂ–52ರ ಸಿ.ಬಿ.ಟಿ.ದಿಂದ ನವಲೂರ ಡೈರಿ ಮೂಲ ದುರ್ಗದಬೈಲವರೆಗೆ ಗವಳಿಗಲ್ಲಿ ಮುಖ್ಯರಸ್ತೆವರೆಗೆ ಡಾಂಬರೀಕರಣ ಮಾಡುವುದು.	8.50
118	ಹು.ವಿ.ವಾ.ನಂ–53ರ ದಾದಬಾಸಪೇಟೆ ಲಕ್ಷ್ಮೀ ದೇವಸ್ಥಾನದಿಂದ ಗಣಪತಿ ಗುಡಿವರೆಗೆ ತೆರೆದ ಚರಂಡಿ ಕಟ್ಟಿ ಸ್ಲ್ಯಾಬ್ ಹಾಕುವುದು & ಶೋಲ್ಡರ ಕಾಂಕ್ರೀಟ ಮಾಡುವುದು.	15.00
119	ಹು.ವಿ.ವಾ.ನಂ–54ರ ದುರ್ಗದಬೈಲ್ ಚಾಟ ಸೆಂಟರ ಮತ್ತು ಕಲಾದಗಿ ಓಣಿಯ ರಸ್ತೆಗೆ ಡಾಂಬರೀಕರಣ ಮಾಡುವುದು.	4.40
120	ಹು.ವಿ.ವಾ.ನಂ–54ರ ಪಾನಬಜಾರ, ಬಳ್ಳಾರಿಗಲ್ಲಿ ಮತ್ತು ಕಾಯಿಪಲ್ಲೆ ಲಿಲಾವು, ಸ್ಥಳಗಳಿಗೆ ಡಾಂಬರೀಕರಣ ಮಾಡುವುದು.	4.40
121	ಹು.ವಿ.ವಾ.ನಂ–54ರ ಮುಲ್ಲಾ ಓಣಿಯಿಂದ ಕಮರಿಪೇಟೆ ಮುಖ್ಯ ರಸ್ತೆ ಕೂಡು ರಸ್ತೆ ಮತ್ತು 2ನೇ ಅಡ್ಡ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು.	6.20
122	ಹು.ವಿ.ವಾ.ನಂ–55 0 ಮಲ್ದಾರ ಓಣಿಯಲ್ಲಿ ಹಾಗೂ ಎಲಿಪೇಟದಲ್ಲಿ "ಯು" ಆಕಾರದ ಆರ್.ಸಿ.ಸಿ.ಗಟಾರ ಕಟ್ಟುವುದು.	9.92
123	ಹು.ವಿ.ವಾ.ನಂ–55ರ ಬಡಿಗೇರ ಓಣಿಯಲ್ಲಿ "ಯು" ಆಕಾರದ ಆರ್.ಸಿ.ಸಿ.ಗಟಾರ ಕಟ್ಟುವುದು.	5.08

124	ಹು.ವಿ.ವಾ.ನಂ–56ರ ಇಟಗಿ ಮಾರುತಿಗಲ್ಲಿ ಮುಖ್ಯರಸ್ತೆಗೆ ಡಾಂಬರೀಕರಣ ಮಾಡುವುದು.	3.23
125	ಹು.ವಿ.ವಾ.ನಂ–56ರ ಬ್ಯಾಡಗೇರ ಓಣಿಯ ಉಪ್ಪಾರ ಮನೆಯಿಂದ ಸಹಸ್ರಾರ್ಜುನ ಶಾಲೆಯ ವರೆಗೆ ಹಾಗೂ ಮಂಗಳವಾರ ಪೇಟ ಉಪರಸ್ತೆಗಳಿಗೆ ಡಾಂಬರೀಕರಣ ಮಾಡುವುದು.	11.55
126	ಹು.ವಿ.ವಾ.ನಂ–57ರ ವಿವಿಧ ರಸ್ತೆಗಳಿಗೆ ಅಡ್ಡ ಚರಂಡಿ ಕಟ್ಟಿ ಆರ್.ಸಿ.ಸಿ.ಸ್ಲ್ಯಾಬ್ ಹಾಕುವುದು.	5.40
127	ಹು.ವಿ.ವಾ.ನಂ–57ರ ವೀರಾಪುರ ರೋಡ ಶ್ರೀ ಮಹಾಬಳೇಶ್ವರ ಗುಡಿ ಹತ್ತಿರ ಸಮುದಾಯ ಭವನ ನಿರ್ಮಿಸುವುದು.	4.50
128	ಹು.ವಿ.ವಾ.ನಂ–57ರ ವೀರಾಪುರ ರೋಡ ಎರಡತ್ತಿನವಾರ ಎದುರಿಗೆ ಹಾಗೂ ಒಳಗಿನ ರಸ್ತೆಗೆ ಗೊಲ್ಲರ ಕಾಲನಿ. ಶಾಂತಿನಿಕೇತನ ಕಾಲನಿ, ಕರಗಣ್ಣನಗರ ಹಕ್ಕಲ ಹಾಗೂ ಮಹಾಬಳೇಶ್ವರ ಗುಡಿ ಹತ್ತಿರ ರಸ್ತೆಗೆ ಕಂಕ್ರೀಟ ಪೇವಿಂಗ ಮಾಡುವುದು.	5.10
129	ಹು.ವಿ.ವಾ.ನಂ–58ರ ಪಾಟೀಲಗಲ್ಲಿ ವಾಳ್ವೇಕರ ಹಕ್ಕಲ ರಸ್ತೆ ಶ್ರೀ ಹೊಸಮನಿಯವರ ಮನೆಯ ರಸ್ತೆ ಹಾಗೂ ರಾಮದುರ್ಗ ಚಾಳದಲ್ಲಿ "ಯು" ಆಕಾರದ ಆರ್.ಸಿ.ಸಿ. ಗಟಾರ ಕಟ್ಟುವುದು.	6.75
130	ಹು.ವಿ.ವಾ.ನಂ–58ರ ಬಂಕಾಪುರ ಚೌಕಿ ವಾಣಿಜ್ಯ ಸಂಕೀರ್ಣದ ಹತ್ತಿರ ಕಾಂಕ್ರೀಟ ಪೇವಿಂಗ ಮಾಡುವುದು.	2.50
131	ಹು.ವಿ.ವಾ.ನಂ–58ರ ಜೋತಗಾರ ಓಣಿಯಲ್ಲಿ ಸಮುದಾಯ ಭವನ ನಿರ್ಮಿಸುವುದು.	5.75
132	ಹು.ವಿ.ವಾ.ನಂ–59ರ ಬ್ಯಾಹಟ್ಟಿ ಪ್ಲಾಟದಲ್ಲಿ ಮೆಟಲಿಂಗ ರಸ್ತೆ, ಕ್ರಾಸ್ ಡ್ರೇನ ಹಾಗೂ ತೆರೆದ ಚರಂಡಿಯನ್ನು ಕಟ್ಟುವುದು.	15.00
133	ಹು.ವಿ.ವಾ.ನಂ–60ರ ಕಟಿಗರ ಓಣಿಯಲ್ಲಿ ಆರ್.ಸಿ.ಸಿ. ತೆರೆದ ಚರಂಡಿ ನಿರ್ಮಿಸಿ ಮೇಲೆ	5.00

	ಆರ್.ಸಿ.ಸಿ.ಸ್ಲ್ಯಾಬ್ (ಬ್ಲಾಕ್)ಹಾಕುವುದು.	
134	ಹು.ವಿ.ವಾ.ನಂ–60ರ ಮಸ್ತಾನಸೋಫಾ 2ನೇ ಮುಖ್ಯರಸ್ತೆ ಹಾಗೂ ಜಂಗ್ಲಿಪೇಟ ಮುಖ್ಯ ರಸ್ತೆಯಿಂದ ಅಕ್ಕಿಪೇಟ ಮಾರ್ಗವಾಗಿ ಪಠಾಣದಲ್ಲಿ ವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವುದು.	10.00
135	ಹು.ವಿ.ವಾ.ನಂ–61ರ ಶಿವಶಂಕರ ಕಾಲೋನಿ ಅಡ್ಡ ರಸ್ತೆಗಳಿಗೆ ಕಾಂಕ್ರೀಟ್ ಪೇವಿಂಗ್ ಮಾಡುವುದು.	10.00
136	ಹು.ವಿ.ವಾ.ನಂ–61 ಬೆಳಂಕರ ಓಣಿಯಿಂದ ಬೀರಬಂದ ಓಣಿ ಮುಖ್ಯ ರಸ್ತೆಗೆ ಸೇರುವ ಶ್ರೀ ಮಟ್ಟಿ ವಕೀಲರ ಮನೆಯ ಮುಂದಿನ ರಸ್ತೆಗೆ ಕಾಂಕ್ರೀಟ್ ಪೇವಿಂಗ್ ಮಾಡುವುದು.	5.00
137	ಹು.ವಿ.ವಾ.ನಂ–62ರ ಅಂಬೇಡ್ಕರ್ ಕಾಲೋನಿಯ ಶ್ರೀ ಹೊಸಮನಿಯವರ ಮನೆಯ ಮುಂದಿನ ಸಂದಿಗಳಿಗೆ ಕಾಂಕ್ರೀಟ್ ಪೇವಿಂಗ್ ಮಾಡುವುದು. (ಶೇಕಡಾ 18ರ ಅನುದಾನ)	3.70
138	ಹು.ವಿ.ವಾ.ನಂ–62ರ ಬಾಣತಿ ಕಟ್ಟಾ ರಸ್ತೆಗಳು, ಅಂಬೇಡ್ಕರ್ ಕಾಲೋನಿ ರಸ್ತೆ ನವಯೋದ್ಯಾನಗರ ರಸ್ತೆ ಹಾಗೂ ಅಯೋದ್ಯಾ ಓಣಿ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು (ಶೇಕಡಾ 18ರ ಅನುದಾನ)	11.30
139	ಹು.ವಿ.ವಾ.ನಂ–63ರ ಲಕ್ಷ್ಮೀನಗರ, ಗುರುಸಿದ್ದೇಶ್ವರ ನಗರ, ಸಂತೋಷನಗರದಲ್ಲಿ (230ಎಂಎಂ) ವ್ಯಾಸದ ಒಳಚರಂಡಿ ಕೊಳವೆ ಹಾಕುವುದು.	10.92
140	ಹು.ವಿ.ವಾ.ನಂ–63ರ ಲಕ್ಷ್ಮೀನಗರದಲ್ಲಿ ಆರ್.ಸಿ.ಸಿ. ತೆರೆದ ಚರಂಡಿ ಕಟ್ಟುವುದು.	3.36
141	ಹು.ವಿ.ವಾ.ನಂ–64ರ ಜನ್ನತನಗರದ ಮಸೀದಿ ಮುಂದಿನ ಕ್ರಾಸಿಗೆ ಕಾಂಕ್ರೀಟ ಪೇವಿಂಗ್ ಮಾಡುವುದು.	6.17
142	ಹು.ವಿ.ವಾ.ನಂ–64ರ ಜನ್ನತನಗರದ ಶ್ರೀ ಆಜೀಜ ಪಠ್ಠಣಕರಿ ಮುಂದಿನ ಸಂದಿಗೆ ಕಾಂಕ್ರೀಟ ಪೇವಿಂಗ್ ಮಾಡುವುದು.	4.36

143	ಹು.ವಿ.ವಾ.ನಂ–64ರ ಕುರುಬರ ಓಣಿ ಸಂದಿಗೆ ಕಾಂಕ್ರೀಟ ಪೇವಿಂಗ ಮಾಡುವುದು.	4.31
144	ಹು.ವಿ.ವಾ.ನಂ–65ರ ಆಲ್ತಾಪನಗರ ಪೂರ್ವ ಭಾಗ, ಮಸೀದಿ ಹಿಂದಿನ ಕ್ರಾಸ್ 3.5 ನಾಲಾ ಬದಿಗೆ ಇರುವ ಕ್ರಾಸ್‌ಗಳಲ್ಲಿ ಎನ್.ಎ.ನಗರ, ಅಲ್‌ಹೈಯಾತ ಶಾಲೆಯ ಪಕ್ಕದಲ್ಲಿ ಮತ್ತು ಶ್ರೀ ಎ.ಎನ್. ಸವಣೂರ ಮನೆಯ ಮುಂದೆ (230 ಎಂ.ಎಂ) ವ್ಯಾಸದ ಒಳಚರಂಡಿ ಕೊಳವೆ ಹಾಕುವುದು.	10.75
145	ಹು.ವಿ.ವಾ.ನಂ–65ರ ಅಲ್ತಾಪನಗರ ಮಸೀದಿ ಹಿಂದಿನ 3 ಕಾಸುಗಳಿಗೆ ಹಾಗೂ ಮಸೀದಿ ಮುಂದಿನ 3 ಕ್ರಾಸುಗಳಿಗೆ ಮತ್ತು ಇಸ್ಲಾಂಪುರ ರೋಡ್ ಕ್ರಾಸದಿಂದ ರಜಾಕಟ್‌ನವರೆಗೆ ಖಡೀಕರಣ ಮಾಡುವುದು.	4.25
146	ಹು.ವಿ.ವಾ.ನಂ–66 ರ ಶಕ್ತಿ ನಗರದಲ್ಲಿ 230 ಎಂ.ಎಂ. ವ್ಯಾಸದ ಒಳಚರಂಡಿ ಕೊಳವೆ ಹಾಕಿ ಶಾಖೆಗಳನ್ನು ಕಟ್ಟುವುದು.	3.60
147	ಹು.ವಿ.ವಾ.ನಂ–66ರ ಹೊಸ ಗಬ್ಬೂರದಲ್ಲಿ ಶ್ರೀ ಹರವಿಯವರ ಮನೆಯಿಂದ ಪಿ.ಬಿ. ರಸ್ತೆಯ ವರೆಗೆ 230 ಎಂ ಎಂ ವ್ಯಾಸದ ಒಳಚರಂಡಿ ಕೊಳವೆ ಹಾಕಿ ಶಾಖೆಗಳನ್ನು ಕಟ್ಟುವುದು.	3.13
148	ಹು.ವಿ.ವಾ.ನಂ–66ರ ಶಕ್ತಿ ನಗರದಲ್ಲಿ "ಯು" ಆಕಾರದ ಆರ್.ಸಿ.ಸಿ.ಗಟಾರ ಕಟ್ಟುವುದು.	8.27
149	ಹು.ವಿ.ವಾರ್ಡ.ನಂ–67ರ ಬೆಂಗೇರಿ ಓಣಿಯಲ್ಲಿ ತೆರೆದ ಚರಂಡಿ ಕಟ್ಟುವುದು.	4.80
150	ಹು.ವಿ.ವಾರ್ಡ.ನಂ–67ರ ಮಾರುತಿ ನಗರದಲ್ಲಿ ತೆರೆದ ಚರಂಡಿ ಕಟ್ಟುವುದು.	9.08
151	ಹು.ವಿ.ವಾರ್ಡ.ನಂ–67ರ ದಿವಾನ ಚಾಚಾ ನಗರದಲ್ಲಿ ತೆರೆದ ಚರಂಡಿ ಕಟ್ಟುವುದು.	1.12

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಸನ್ 2007-08ನೇ ಸಾಲಿನ ಎಸ್.ಎಫ್.ಸಿ. ಅನುದಾನದ
ಕಾಮಗಾರಿಗಳವಾರು ವಿವರ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕೆಲಸದ ವಿವರ	ಅಂದಾಜು ಮೊತ್ತ
1	2	3
1	ಹು.ವಿ.ವಾರ್ಡ.ನಂ-23ರ ಅಮರಗೋಳ ಗ್ರಾಮದ ಹರಿಜನಕೇರಿ ಸುಧಾರಣೆ	5.88
2	ಹು.ವಿ.ವಾರ್ಡ.ನಂ-25ರ ಕದಾಡಗಿ ಮತ್ತು ಕುರುಬರ ಓಣಿಗಳಲ್ಲಿ ಕಾಂಕ್ರೀಟ್ ರಸ್ತೆ ಮಾಡುವುದು.	4.50
3	ಹು.ವಿ.ವಾರ್ಡ.ನಂ-24ರ ಗಾಮನಗಟ್ಟಿ ಗ್ರಾಮದಲ್ಲಿ ಕಾಂಕ್ರೀಟ್ ತೆರೆದ ಚರಂಡಿ ಕಟ್ಟುವುದು.	4.75
4	ಹು.ವಿ.ವಾರ್ಡ.ನಂ-23ರ ಅಮರಗೋಳ ಗ್ರಾಮದ ಆಶ್ರಯ ಕಾಲನಿಯಲ್ಲಿ ರಸ್ತೆಗಳ ಸುಧಾರಣೆ.	5.80
5	ಹು.ವಿ.ವಾರ್ಡ.ನಂ-24ರ ಗಾಮನಗಟ್ಟಿ ಗ್ರಾಮದಲ್ಲಿ ಹರಿಜನಕೇರಿ ಸುಧಾರಣೆ ಮಾಡುವುದು.	3.75
6	ಹು.ವಿ.ವಾರ್ಡ.ನಂ-24 ರ ನವನಗರ 3, 5, ಮತ್ತು 6ನೇ ಕ್ರಾಸ್‌ಗಳಲ್ಲಿ ಒಳಚರಂಡಿ ಕೊಳವೆ ಹಾಕುವುದು.	6.78
7	ಹು.ವಿ.ವಾರ್ಡ.ನಂ-25ರ ಶ್ರೀನಗರದಿಂದ ತಾಜನಗರ ರಸ್ತೆಗೆ ಡಾಂಬರೀಕರಣ ಮಾಡುವುದು.	7.23
8	ಹು.ವಿ.ವಾರ್ಡ.ನಂ-24ರ ಅಮರಗೋಳ ಗ್ರಾಮದ ಒಳಚರಂಡಿ ಯೋಜನೆಯ ಸುಧಾರಣೆ,	17.83
9	ಹುಬ್ಬಳ್ಳಿ ವಿಭಾಗದ ವಾರ್ಡ ನಂ-34ರ ಚಿಕ್ಕವೀರಯ್ಯನವರ ಪ್ಲಾಟ ರಸ್ತೆ ಲಕ್ಷ್ಮೀ ಗುಡಿ ರಸ್ತೆ ಹಾಗೂ ವಿನಾಯಕ ಕಾಲನಿ ಭಾಗದ ರಸ್ತೆಗಳ ಸುಧಾರಣೆ.	12.11
10	ಹುಬ್ಬಳ್ಳಿ ವಿಭಾಗದ ವಾರ್ಡ ನಂ-26ರ ಕೆ.ಇ.ಬಿ. ಕಾಲನಿ, ಕಲ್ಯಾಣನಗರ, ಮೌನೇಶ್ವರನಗರ,	7.24

	ರಾಘವೇಂದ್ರ ಕಾಲನಿ, ಶಿವಗಿರಿಕಾಲನಿ, ಚಲವಾದಿ ಓಣಿ, ಅಚ್ಚವ್ವನ ಕಾಲನಿ, ಕಲ್ಮೇಶ್ವರ ಓಣಿ ಮತ್ತು ಬದಾಮಿ ಓಣಿ ರಸ್ತೆಗಳ ಸುಧಾರಣೆ.	
11	ಹುಬ್ಬಳ್ಳಿ ವಿಭಾಗದ ವಾರ್ಡ ನಂ–35ರ ಜಯನಗರ, ತಿಮ್ಮಸಾಗರ ಗುಡಿ ಹಿಂದಿನ ಮತ್ತು ಕುಮಾರವ್ಯಾಸನಗರ ರಸ್ತೆಗಳ ಸುಧಾರಣೆ.	12.67
12	ಹು.ವಿ.ವಾರ್ಡ.ನಂ–48ರ ಗಾಂಧೀವಾಡ ಚರ್ಚದಿಂದ ಕುಸುಗಲ್ ರೋಡವರೆಗೆ ಡಾಂಬರ ಪುನರ್‌ಲೇಪನ ಮಾಡುವುದು.	8.48
13	ಹು.ವಿ.ವಾರ್ಡ.ನಂ–31ರ ಬಾದಾಮಿನಗರ ಮುಖ್ಯ ರಸ್ತೆ ಡಾಂಬರ ಪುನರ್‌ಲೇಪನ ಮಾಡುವುದು ಮತ್ತು ಮಧುರಾ ಎಸ್ಟೇಟ ರಸ್ತೆ, ಹಾಗೂ ವಾರ್ಡ ನಂ–30ರ ಪಾರಸವಾಡಿ ಉಪ ರಸ್ತೆಗಳಿಗೆ ಖಡೀಕರಣ ಮಾಡುವುದು.	13.22
14	ಹು.ವಿ.ವಾರ್ಡ.ನಂ–31ರ ದಯಾನಂದ ಕಾಲನಿ, ದಾಳ್ವೀಗಾರ ಪ್ಲಾಟ ಮತ್ತು ಕೆ,ಎಚ್.ಬಿ.ಕಾಲನಿ ಮುಖ್ಯ ಮತ್ತು ಉಪ ರಸ್ತೆಗಳಿಗೆ ಡಾಂಬರಿ ಪುನರ್ ಲೇಪನ ಮಾಡುವುದು.	11.98
15	ಹು.ವಿ.ವಾರ್ಡ.ನಂ–32ರ ಆಝಾದ ಕಾಲನಿ ಮುಖ್ಯ ಮತ್ತು ಉಪ ರಸ್ತೆಗಳಿಗೆ ಡಾಂಬರ ಪುನರ್ ಲೇಪನ ಮಾಡುವುದು.	5.74
16	ಹು.ವಿ.ವಾರ್ಡ.ನಂ–37ರ ಕಾರಿಹಾಳ ಕೆರೆಯಿಂದ ಹಳೆ ಆಶ್ರಯ ಕಾಲನಿಯವರೆಗೆ ಮತ್ತು ಗೋಕುಲ ಮಾರುತಿ ಗುಡಿಯಿಂದ ಶಾಲೆವರೆಗೆ ತೆರೆದ ಚರಂಡಿ ಕಟ್ಟುವುದು.	13.84
17	ಹು.ವಿ.ವಾರ್ಡ.ನಂ–37ರ ಬಂಜಾರ ಕಾಲನಿಯಲ್ಲಿ ರಸ್ತೆ ನಿರ್ಮಿಸುವುದು.	20.68
18	ಹು.ವಿ.ವಾರ್ಡ.ನಂ–39 & 40ರ ಆನಂದನಗರ ಮುಖ್ಯ ರಸ್ತೆಗೆ ಮರು ಡಾಂಬರೀಕರಣ ಮಾಡುವುದು (ಫತೇಶಾನಗರದಿಂದ ಆನಂದನಗರ ಬಸ್‌ಸ್ಟಾಫ್‌ವರೆಗೆ)	9.00

19	ಹು.ವಿ.ವಾರ್ಡ.ನಂ–40ರ ರೋಟರಿ ಸ್ಕೂಲ್ ಆಶ್ರಯ ರಸ್ತೆಗೆ ಪ್ರಿಯದರ್ಶಿನಿ ಕಾಲನಿ ಮೂಲಕ ಪದ್ಮರಾಜನಗರವರೆಗೆ ಡಾಂಬರೀಕರಣ ಮಾಡುವುದು.	9.00
20	ಹು.ವಿ.ವಾರ್ಡ.ನಂ–36ರ ರೇಣುಕಾನಗರ ಗಾಂಧಿನಗರ, ವಿವೇಕಾನಂದನಗರ, ಮತ್ತು ಮಹಾಲಕ್ಷ್ಮೀ ಲೇಔಟ್ ಒಳರಸ್ತೆಗಳಿಗೆ ಮರು ಡಾಂಬರೀಕರಣ ಮಾಡುವುದು.	4.50
21	ಧಾರವಾಡ ವಿಭಾಗದ ವಾರ್ಡ ನಂ–13ರ ಬಯಲು ನಾಟ್ಯ ಮಂದಿರ ರಸ್ತೆಯಲ್ಲಿ ತೆರೆದ ಚರಂಡಿ ಕಟ್ಟುವುದು.	10.00
22	ಧಾರವಾಡ ವಿಭಾಗದ ವಾರ್ಡ ನಂ–1 ಹಳಿಯಾಳ ರಸ್ತೆಯಿಂದ ನೆಹರೂನಗರ (ತಪೋವನ ನಗರ) ಲಿಂಕ್ ರಸ್ತೆಗೆ ಡಾಂಬರ ಲೇಪನ ಮಾಡುವುದು.	10.00
23	ಧಾ.ವಿ.ವಾ.ನಂ–11 ರ ಜೈಭೀಮನಗರ ಮುಖ್ಯ ರಸ್ತೆ ಭೂಸಪ್ಪ ಚೌಕ್ ಮುಖಾಂತರ ಕೆ.ಸಿ.ಸಿ. ಬ್ಯಾಂಕ್ ವರೆಗೆ (ಮ್ಯಾದಾರ ಓಣಿ) ಮುಖ್ಯ ರಸ್ತೆ ಡಾಂಬರೀಕರಣ ಮಾಡುವುದು.	30.00
24	ಧಾ.ವಿ.ವಾ.ನಂ–7ರ ಮದಿಹಾಳದಲ್ಲಿ ಕನ್ನಡ ಶಾಲೆಯಿಂದ ವಿಠೋಬಾ ಗುಡಿಯಿಂದ ಗಣೇಶನಗರ ಮುಖ್ಯ ರಸ್ತೆವರೆಗೆ ಡಾಂಬರೀಕರಣ ಮಾಡುವುದು.	20.00
25	ಧಾ.ವಿ.ವಾ.ನಂ–3ರ ರಾಷ್ಟ್ರೀಯ ಹೆದ್ದಾರಿ 4 ರಿಂದ ಆಗ್ರಿಕಲ್ಚರಲ್ ಕಾಲೇಜ್ ಮುಖಾಂತರ ಎತ್ತಿನಗುಟ್ಟ ಗ್ರಾಮದ ರಸ್ತೆಗೆ ಡಾಂಬರೀಕರಣ ಮಾಡುವುದು.	20.00
26	ಧಾ.ವಿ.ವಾ.ನಂ–4 ರ ಗುಲಗಂಚಿಕೊಪ್ಪ ಜನತಾ ಕಾಲನಿಯ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು.	10.00
27	ಧಾ.ವಿ.ವಾ.ನಂ–3ರ ಕುಮಾರೇಶ್ವರ ಕಾಲನಿ ಮುಖ್ಯ ರಸ್ತೆಗೆ ಡಾಂಬರೀಕರಣ ಮಾಡುವುದು.	20.00

28	ಧಾ.ವಿ.ವಾ.ನಂ–12ರ ಜಿಲ್ಲಾ ಕ್ರೀಡಾಂಗಣ (ಆರ್.ಎನ್.ಶೆಟ್ಟಿ) ಒಳಗಿನ ರಸ್ತೆಗಳಿಗೆ ಮರು ಡಾಂಬರೀಕರಣ ಮಾಡುವುದು.	10.00
29	ಧಾ.ವಿ.ವಾ.ನಂ–19 ಚಿದಂಬರ ಹೌಸಿಂಗ್ ಸೋಸೈಟಿಯಲ್ಲಿ ಮತ್ತು ಯಲ್ಲಮ್ಮದೇವಿ ಹೌಸಿಂಗ್ ಸೊಸೈಟಿಯಲ್ಲಿನ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು.	10.00
30	ಧಾ.ವಿ.ವಾ.ನಂ–19ರ ಸತ್ತೂರ ಕಾಲನಿಯ 1ನೇ ಹಾಗೂ 3ನೇ ಕ್ರಾಸಿನಲ್ಲಿ ಹಾಗೂ ಯಲ್ಲಮ್ಮದೇವಿ ಹೌಸಿಂಗ್ ಸೊಸೈಟಿಯಲ್ಲಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು.	10.00
31	ಧಾ.ವಿ.ವಾ.ನಂ–21 ಹಾಗೂ 18 ರ ತೇಜಸ್ವಿನಗರ 7ನೇ ಅಡ್ಡರಸ್ತೆಯಲ್ಲಿ ತೆರೆದ ಚರಂಡಿ ವ ಅಡಿಗಾಲುವೆ ಕಟ್ಟುವುದು.	10.00
32	ಧಾ.ವಿ.ವಾ.ನಂ–19ರ ಮಾಸೂರ ಕಿರಾಣಿ ಅಂಗಡಿಯಿಂದ ರಜತಗಿರಿ 4ನೇ ಮುಖ್ಯ ರಸ್ತೆ ಸತ್ತೂರ ಕಾಲನಿ ಮುಖಾಂತರ ರಾಷ್ಟ್ರೀಯ ಹೆದ್ದಾರಿವರೆಗೆ ಡಾಂಬರೀಕರಣ ಮಾಡುವುದು.	15.00
33	ಧಾ.ವಿ.ವಾ.ನಂ–21ರ ನವಸಾರ ಗ್ರಾಮದ ವಿನಾಯಕನಗರದ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು.	15.00
34	ಧಾ.ವಿ.ವಾ.ನಂ–17ರ ಕಲ್ಯಾಣನಗರ 1ನೇ ಮುಖ್ಯರಸ್ತೆಗೆ ಡಾಂಬರೀಕರಣ ಮಾಡುವುದು.	40.00
35	ಧಾ.ವಿ.ವಾ.ನಂ–53ರ ಘಂಟಕೇರಿ ಮುಖ್ಯ ರಸ್ತೆಗೆ ಡಾಂಬರೀಕರಣ ಮಾಡುವುದು(ಶೇಕಡಾ 18ರ ಅನುದಾನ)	9.97
36	ಧಾ.ವಿ.ವಾ.ನಂ–56ರ ಬಾರದಾನ ಸಾಲ ಮುಖ್ಯ ರಸ್ತೆಗೆ ಎರಡು ಕಡೆ ಗಟಾರ ಕಟ್ಟಿ ಪುಟಪಾತ ನಿರ್ಮಿಸುವುದು.	14.31
37	ಧಾ.ವಿ.ವಾ.ನಂ–50ರ ಫಿಲ್ ಮಾರುಕಟ್ಟೆ ಕ್ರಾಸ್ ದಿಂದ ಮೌಲಾಲಿ ದರ್ಗಾವರೆಗೆ ಹಾಗೂ	4.97

	ಡಾ||ಮಡಕರನಿಕರ್ ರವರ ಮನೆ ಮುಂದೆ ಮರು ಡಾಂಬರೀಕರಣ ಮಾಡುವುದು.	
38	ಧಾ.ವಿ.ವಾ.ನಂ–52 ರ ಪತ್ತರಪೋಡಗಲ್ಲಿಯಲ್ಲಿ ರಸ್ತೆಗಳಿಗೆ ಡಾಂಬರೀಕರಣ ಮಾಡುವುದು.	10.00
39	ಧಾ.ವಿ.ವಾ.ನಂ–47ರ ಜೆ.ಸಿ.ನಗರ ವುಮೆನ್ಸ್ ಕಾಲೇಜ ರಸ್ತೆಯಲ್ಲಿ ಕುಬಸದ ಕಾಂಪ್ಲೆಕ್ಸ್‌ನಿಂದ ನಾಲಾದವರೆಗೆ ಸಿ.ಸಿ.ಪುಟಪಾತ ಮಾಡುವುದು.	9.99
40	ಧಾ.ವಿ.ವಾ.ನಂ–56ರ ಸರಾಫಗಟ್ಟಿ ಮುಖ್ಯ ರಸ್ತೆಯಲ್ಲಿ ಎರಡೂ ಬದಿಗೆ ಗಟಾರ ದುರಸ್ಥಿಗೊಳಿಸಿ ಫುಟ್ ಪಾತ್ ನಿರ್ಮಿಸುವುದು.	9.69
41	ಹಗ್ಗೇರಿ ಸಿದ್ಧಾರೋಡ ನಗರದಲ್ಲಿ ಹೊಸದಾಗಿ ಡಾಂಬರೀಕರಣ ಮಾಡುವುದು ಹಾಗೂ ತೆರೆದ ಚರಂಡಿ ನಿರ್ಮಾಣ.	25.00
42	ಎಸ್.ಎಂ.ಕೃಷ್ಣಾನಗರ 2ನೇ ಹಂತದಲ್ಲಿ ಒಳಚರಂಡಿ ಕೊಳವೆ ಹಾಕುವುದು.	9.77
43	ಕೆ.ಪಿ.ಟಿ.ಸಿ.ಎಲ್.ವಸತಿ ಗೃಹ ಹಾಗೂ ಕಾರ್ಯಾಲಯಗಳು ಒಳಚರಂಡಿಯನ್ನು ಪಾಲಿಕೆ ಒಳಚರಂಡಿ ಮಾರ್ಗಕ್ಕೆ ಜೋಡಿಸುವುದು.	22.79
44	ಈಶ್ವರನಗರ ಒಳಚರಂಡಿ ಕೊಳವೆ ಹಾಕುವುದು.	12.35
45	ಹು.ವಿ.ವಾ.ನಂ–54ರ ಟಿ.ಕೆ.ಹಬೀಬ ಮಿಲ್ ದಿಂದ ಘಂಟಿಕೇರಿ ಮುಖ್ಯ ರಸ್ತೆವರೆಗೆ (ಶಾಂತನಿಕೇತನ ರಸ್ತೆ) ಹಾಗೂ ವೀರಾಪುರ ರೋಡದಿಂದ ಹಿಲಿಗೆಪ್ಪನವರ ಅಡ್ಡವರೆಗೆ ಡಾಂಬರೀಕರಣ ಮಾಡುವುದು. (ಶೇಕಡಾ 18ರ ಅನುದಾನ)	9.95
46	ಹು.ವಿ.ವಾ.ನಂ–66ರ ತಿಮ್ಮಸಾಗರ ರಸ್ತೆ ಬಸವೇಶ್ವರ ಸರ್ಕಲ್‌ರಿಂದ ನಾಲಾದವರೆಗೆ ಡಾಂಬರ ರಸ್ತೆ ಮಾಡುವುದು.	9.88
47	ವಾರ್ಡ ನಂ–66ರ ತಿಮ್ಮಸಾಗರ ರಸ್ತೆ ಸಂಯುಕ್ತ ಕರ್ನಾಟಕ ಕಾಲನಿಯಿಂದ ನಾಲಾದ ವರೆಗೆ ಡಾಂಬರ ರಸ್ತೆ ಮಾಡುವುದು.	10.00
48	ಹು.ವಿ.ದ.ಡಿನಂ–55ರ ಹಾಗೂ 66ರ	19.98

	ಬನ್ನಿಮಹಾಂಕಾಳ ನಗರದಿಂದ ಪಿ.ಬಿ.ರಸ್ತೆವರೆಗೆ ಡಾಂಬರೀಕರಣ ಮಾಡುವುದು.	
49	ಹು.ವಿ.ವಾ.ನಂ–60ರ ಹಳೇ ಹುಬ್ಬಳ್ಳಿ ನಾಲಾದ ಗುಂಟ ಕಲ್ಲಿನ ಗೋಡೆ ಕಟ್ಟುವುದು ಭಾಗ–1)	14.98
50	ಹುಬ್ಬಳ್ಳಿ ನಗರದ ಹೊಸೂರ ವೃತ್ತವನ್ನು ಅಭಿವೃದ್ಧಿಪಡಿಸುವುದು.	26.65
51	ಹುಬ್ಬಳ್ಳಿ ನಗರದಲ್ಲಿ ಕಲವರ್ಟಗಳನ್ನು ನಿರ್ಮಾಣ ಮಾಡುವುದು.	7.02
52	ಶ್ರೀ ಐ.ಜಿ.ಸನದಿ ಮನೆಯಿಂದ ಸಬ್ ಜೈಲವರೆಗೆ ಇದ್ದ ರಸ್ತೆ ಪುನಶ್ಚೇತನ ಹಾಗೂ ಸುಧಾರಣೆ ಮಾಡುವುದು.	50.92
53	ಸಬ್ ಜೈಲ್ ದಿಂದ ವಿಜಯನಗರ (ವಿಜಯಾ ಹೋಟೇಲ) ಮಾರ್ಗವಾಗಿ ಅಶೋಕನಗರ ಬ್ರಿಡ್ಜದವರೆಗೆ ಇದ್ದ ರಸ್ತೆ ಮುನಶ್ಚೇತನ ಹಾಗೂ ಸುಧಾರಣೆ ಮಾಡುವುದು.	85.63
54	ವಿಜಯನಗರದಿಂದ ಕೆಂಪಣ್ಣವರ ಕಲ್ಯಾಣಮಂಟಪ ಮಾರ್ಗವಾಗಿ ದೇವಾಂಗಪೇಟ ಬಸ್‌ಸ್ಟಾಪ್‌ವರೆಗೆ ಇದ್ದ ರಸ್ತೆ ಪುನಶ್ಚೇತನ ಹಾಗೂ ಸುಧಾರಣೆ ಮಾಡುವುದು.	61.62
55	ಗೋಪನಕೊಪ್ಪ ಬಸ್‌ಸ್ಟಾಪ್‌ನಿಂದ ಸುಳ್ಳರೋಡ ಕ್ರಾಸ್‌ವರೆಗೆ ಬ್ರಿಡ್ಜವರೆಗೆ ಇದ್ದ ರಸ್ತೆ ಪುನಶ್ಚೇತನ ಹಾಗೂ ಸುಧಾರಣೆ ಮಾಡುವುದು.	81.98
56	ಗಾಂಧಿಚೌಕದಿಂದ ಹೆಬ್ಬಳ್ಳಿ ಆಗಸಿ ವಿದ್ಯಾರಣ್ಯ ಸ್ಕೂಲ್‌ವರೆಗೆ ಇದ್ದ ರಸ್ತೆ ಪುನಶ್ಚೇತನ ಹಾಗೂ ಸುಧಾರಣೆ ಮಾಡುವುದು.	14.64
57	ಕಾಮನಕಟ್ಟಿಯಿಂದ ಬೂಸಪ್ಪಾ ಚೌಕ (ಶೀಲವಂತರ ಓಣಿ) ವರೆಗೆ ಇದ್ದ ರಸ್ತೆ ಪುನಶ್ಚೇತನ ಹಾಗೂ ಸುಧಾರಣೆ ಮಾಡುವುದು.	17.01
58	ಕಾಮನಕಟ್ಟಿಯಿಂದ ಪುಟ್ಟಿಪರಪ್ಪ ಕೂಟ ಮಾರ್ಗವಾಗಿ ಹೆಬ್ಬಳ್ಳಿ ಆಗಸಿವರೆಗೆ ಇದ್ದ ರಸ್ತೆ	24.78

	ಪುನಶ್ಚೇತನ ಹಾಗೂ ಸುಧಾರಣೆ ಮಾಡುವುದು.	
59	ಹೆಬ್ಬಳ್ಳಿ ಆಗಸಿಯಿಂದ ಬಾರಾ ಇಮಾಮ್ ಮಾರ್ಗವಾಗಿ ಸವದತ್ತಿ ರಸ್ತೆವರೆಗೆ ಇದ್ದ ರಸ್ತೆ ಪುನಶ್ಚೇತನ ಹಾಗೂ ಸುಧಾರಣೆ ಮಾಡುವುದು.	15.54
60	ಧಾರವಾಡ ನಗರದಲ್ಲಿ ಕಲವರ್ಟ ನಿರ್ಮಾಣ ಮಾಡುವುದು (ನಾಲ್ಕು ಸಂಖ್ಯೆ)	4.76
61	ಅಶೋಕನಗರ ಬ್ರಿಡ್ಜದಿಂದ ಪತ್ರಕರ್ತ ಕಾಲನಿಯವರೆಗೆ ಇದ್ದ ರಸ್ತೆ ಪುನಶ್ಚೇತನ ಹಾಗೂ ಸುಧಾರಣೆ ಮಾಡುವುದು.	143.10

1060 ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಬಸ್ ಘಟಕದಲ್ಲಿ ಇರುವ ಬಸ್‌ಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಅವಧಿ ಮೀರಿ ಹಳೆಯದಾದ ಬಸ್‌ಗಳ ಸಂಖ್ಯೆ ಎಷ್ಟು;

ಆ) ಜಮಖಂಡಿ ಮತ್ತು ಮುಧೋಳ ತಾಲ್ಲೂಕಿನಲ್ಲಿ ಅನೇಕ ಹಳ್ಳಿಗಳಿಗೆ ಬಿಡಬೇಕಾದ ಹಾಗೂ ಈ ಮೊದಲು ಓಡುತ್ತಿದ್ದ ಬಸ್‌ಗಳನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಆ ಮಾರ್ಗದಲ್ಲಿ ಪುನಃ ಬಸ್ ಪ್ರಾರಂಭಿಸುವ ವಿಚಾರವಿದೆಯೇ;

ಇ) ಅವಧಿ ಮೀರಿದ ಬಸ್‌ಗಳನ್ನು ಬದಲಿಸಿ ಹೊಸ ಬಸ್‌ಗಳನ್ನು ಒದಗಿಸಲು ಇರುವ ತೊಂದರೆಗಳೇನು;

ಈ) 1-4-2008 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಖರೀದಿಸಿದ ಬಸ್‌ಗಳ ಸಂಖ್ಯೆ ಎಷ್ಟು; ಯಾವ ಯಾವ ಘಟಕಗಳಿಗೆ ಪೂರೈಸಲಾಗಿದೆ?

ಶ್ರೀ ಆರ್. ಅಶೋಕ (ಸಾರಿಗೆ ಸಚಿವರು) :

ಅ) ಬಸ್ಸುಗಳ ಸಂಖ್ಯೆ : 117.
ಅವಧಿ ಮೀರಿದ ಹಳೆಯದಾದ ಬಸ್ಸುಗಳ ಸಂಖ್ಯೆ : 25.

ಆ) ಜಮಖಂಡಿ ತಾಲ್ಲೂಕಿನಲ್ಲಿರುವ ಎಲ್ಲಾ 64 ಹಳ್ಳಿಗಳಿಗೆ ಅವಶ್ಯಕ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಮುಧೋಳ ತಾಲ್ಲೂಕಿನಲ್ಲಿರುವ 77 ಹಳ್ಳಿಗಳಿಗೆ ಸಹ ಅವಶ್ಯಕ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಆದರೆ, ವಿರಳ ಸಾರಿಗೆ ನಿಮಿತ್ತ

ಢವಳೇಶ್ವರ ಮತ್ತು ಮಾರಾಪುರ ಹಳ್ಳಿಗಳಿಗೆ ಮಹಾಲಿಂಗಪೂರದಿಂದ ಕಲ್ಪಿಸಲಾದ ಸೌಲಭ್ಯವನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ, ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳ ಬೇಡಿಕೆ ಮೇರೆಗೆ ಪುನಃ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಇ) ಪ್ರಸ್ತುತ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದಿರುವುದರಿಂದ ಯೋಜನೆಯಂತೆ ಹೊಸ ಬಸ್ಸುಗಳನ್ನು ಹಂತ-ಹಂತವಾಗಿ ಒದಗಿಸಲಾಗುವುದು.

ಈ) 1-4-2008ರಿಂದ ಇಲ್ಲಿಯವರೆಗೆ ಖರೀದಿಸಿದ ಬಸ್ಸುಗಳ ಸಂಖ್ಯೆ : 3772.

ಘಟಕಗಳಿಗೆ ಪೂರೈಸಲಾಗಿರುವ ಬಸ್ಸುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

L.A. 1060

1) KSRTC

ಕ್ರ ಸಂ	ವಿಭಾಗ	ಘಟಕ	01-04-2008 ರಿಂದ ಇಲ್ಲಿಯವರೆವಿಗೂ ನಿಯೋಜಿಸಲಾಗಿರುವ ಹೊಸ ವಾಹನಗಳ ಪರಿಮಾಣ
01	ಬೆಂಗಳೂರು(ಕೇ)	ಘಟಕ-1	13
		ಘಟಕ-2	60
		ಘಟಕ-3	32
		ಘಟಕ-4	28
		ಘಟಕ-5	14
		ಘಟಕ-6	10
	ಒಟ್ಟು		157
02	ಬೆಂಗಳೂರು (ಗ್ರಾ)	ಕನಕಪುರ	10
		ಆನೇಕಲ್	18
		ಚನ್ನಪಟ್ಟಣ	19
		ದೊಡ್ಡಬಳ್ಳಾಪುರ	14
		ಹಾರೋಹಳ್ಳಿ	9
		ರಾಮನಗರ	19
		ಮಾಗಡಿ	29

	ಒಟ್ಟು		118
03	ತುಮಕೂರು	ತುಮಕೂರು	21
		ಕುಣಿಗಲ್	14
		ತುರವೇಕೆರೆ	13
		ಸಿರಾ	9
	ಒಟ್ಟು		57
04	ಕೋಲಾರ	ಕೋಲಾರ	21
		ಕೆ.ಜಿ.ಎಫ್	20
		ಶ್ರೀನಿವಾಸಪುರ	17
		ಮಾಲೂರು	12
		ಮುಳಬಾಗಿಲು	11
	ಒಟ್ಟು		81
05	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	17
		ಚಿಂತಾಮಣಿ	19
		ಬಾಗೇಪಲ್ಲಿ	18
		ಗೌರೀಬಿದನೂರು	20
	ಒಟ್ಟು		74
06	ಮೈಸೂರು ನಗರ ಸಾರಿಗೆ	ಮೈಸೂರು–2	40
		ನಗರ–1	39
		ನಗರ–2	34
		ಸಾತಗಹಳ್ಳಿ	5
		ನಂಜನಗೂಡು	2
	ಒಟ್ಟು		120
07	ಮೈಸೂರು ಗ್ರಾಮಾಂತರ	ಕೃಷ್ಣರಾಜನಗರ	14
		ಗುಂಡ್ಲುಪೇಟೆ	14
		ಹುಣ್ಣಸೂರು	15
		ಚಾಮರಾಜನಗರ	9
		ಹೆಚ್.ಡಿ.ಕೋಟೆ	10

		ಮಡಿಕೇರಿ	21
		ಘಟಕ–1	34
	ಒಟ್ಟು		117
08	ಮಂಡ್ಯ	ಮಂಡ್ಯ	16
		ಮದ್ದೂರು	7
		ಕೊಳ್ಳೇಗಾಲ	9
		ಮಳವಳ್ಳಿ	9
		ನಾಗಮಂಗಲ	11
		ಕೆ.ಆರ್.ಪೇಟೆ	13
	ಒಟ್ಟು		65
09	ಹಾಸನ	ಹಾಸನ	42
		ಚನ್ನರಾಯಪಟ್ಟಣ	29
		ರಾಮನಾಥಪುರ	31
		ಹೊಳೆನರಸೀಪುರ	27
		ಅರಕಲಗೂಡು	36
	ಒಟ್ಟು		165
10	ಚಿಕ್ಕಮಗಳೂರು	ಚಿಕ್ಕಮಗಳೂರು	33
		ಅರಸೀಕೆರೆ	32
		ಸಕಲೇಶಪುರ	23
		ಕಡೂರು	19
		ಮೂಡಿಗೆರೆ	19
	ಒಟ್ಟು		126
11	ಮಂಗಳೂರು	ಮಂಗಳೂರು–1	28
		ಮಂಗಳೂರು–2	53
		ಪುತ್ತೂರು	21
		ಧರ್ಮಸ್ಥಳ	43
		ಕುಂದಾಪುರ	27
	ಒಟ್ಟು		172
12	ದಾವಣಗೆರೆ	ದಾವಣಗೆರೆ	18
		ಭದ್ರಾವತಿ	23

		ಚಿತ್ರದುರ್ಗ	10
		ಹರಿಹರ	15
		ಸಾಗರ	13
	ಒಟ್ಟು		79
ಒಟ್ಟಾರೆ ಹೊಸ ವಾಹನಗಳು			1331

2) BMTC:

Depot No.	**No.of Buses**	**Depot No.**	**No.of Buses**	**Depot No.**	**No.of Buses**
2	32	14	20	25	61
3	52	15	27	26	27
4	31	16	46	27	26
6	29	17	46	28	95
7	45	18	11	29	21
8	58	19	26	30	22
9	27	20	2	31	54
10	32	21	32	32	26
11	31	22	22	33	6
12	19	23	20	**TOTAL**	**1071**
13	102	24	23		

3)NEKRTC:

Sl.No	**Depot**	**2008-09**	**2009-10**	**Total No. Of Vehicles.**
01	Gulbarga-1	24	10	34
02	Gulbarga-2	21	11	32
03	Gulbarga-3	17	07	24
04	ALAND	07	10	17
05	CHINCHOLI	06	06	12
06	JEWARGI	10	02	12
07	CHITTAPUR	11	02	13
08	Raichur-1	26	07	33
09	Raichur-2	32	15	47
10	LINGASUGUR	17	04	21

11	SINDHNOR	20	06	26
12	MANVI	13	09	22
13	DEVDURGA	21	08	29
14	MASKI	00	05	05
15	BIDAR	22	10	32
16	HUMNABAD	20	05	25
17	BASVAKALYAN	18	04	22
18	BHALKI	16	06	22
19	AURAD	13	10	23
20	KOPPAL	16	09	25
21	KUSTGI	18	12	30
22	YALBURGA	16	08	24
23	GANGAVATHI	20	06	26
24	BELLARY-1	26	10	36
25	BELLARY-2	20	07	27
26	HOSPET	27	16	43
27	KULDGI	17	08	25
28	HADGILI	12	08	20
29	SIRGUPPA	18	08	26
30	YADGIR	16	11	27
31	SHAHPUR	21	14	35
32	GURMITKAL	8	05	13
33	SEDAM	10	03	13
34	SURPUR	00	08	08
	TOTAL	**560**	**269**	**829**

4)NWKRTC

ಕ್ರ ಸಂ	ಘಟಕಗಳು	ಏಪ್ರಿಲ್–08 ರಿಂದ ಮಾರ್ಚ್–09 ರವರೆಗೆ	ಏಪ್ರಿಲ್–09 ರಿಂದ ಜೂನ್–09 ರವರೆಗೆ	ಒಟ್ಟು ವಾಹನಗಳು
1	ಬೆಳಗಾವಿ–1	16	12	28
2	ಬೆಳಗಾವಿ–2	9	7 –	16
3	ಬೆಳಗಾವಿ–3	18	4	22
4	ಬೈಲಹೊಂಗಲ	8	5	13

5	ಸವದತ್ತಿ	12	3	15
6	ರಾಮದುರ್ಗ	4	2	6
7	ಖಾನಾಪುರ	5	1	6
	ಬೆಳಗಾವಿ ವಿಭಾಗ	72	34	106
1	ಹುಬ್ಬಳ್ಳಿ (ಗ್ರಾ–1)	10	7	17
2	ಹುಬ್ಬಳ್ಳಿ (ಗ್ರಾ–2)	9	6	15
3	ಹುಬ್ಬಳ್ಳಿ(ನ.ಸ–1)	2	1	3
4	ಹುಬ್ಬಳ್ಳಿ (ನ.ಸಾ–2)	12	5	17
5	ಧಾರವಾಡ	11	1	12
	ಹುಬ್ಬಳ್ಳಿ ವಿಭಾಗ	44	20	64
1	ಬಿಜಾಪುರ–1	14	0	14
2	ಬಿಜಾಪುರ–2	12	0	12
3	ಇಂಡಿ	5	0	5
4	ಸಿಂಧಗಿ	4	0	4
5	ಮುದ್ದೇಬಿಹಾಳ	6	0	6
6	ತಾಳಿಕೋಟೆ	7	0	7
7	ಬ.ಬಾಗೇವಾಡಿ	2	0	2
	ಬಿಜಾಪುರ ವಿಭಾಗ	50	0	50
1	ಶಿರ್ಸಿ	12	4	16
2	ಕುಮಟಾ	8	12	20
3	ಕಾರವಾರ	4	5	9
4	ಹಳಿಯಾಳ	3	6	9
5	ಭಟ್ಕಳ	7	1	8
6	ಯಲ್ಲಾಪುರ	4	1	5
7	ದಾಂಡೇಲಿ	2	1	3
8	ಅಂಕೋಲಾ	2	0	2
	ಶಿರ್ಸಿ ವಿಭಾಗ	42	30	72
1	ಬಾಗಲಕೋಟೆ	6	5	11
2	ಮುಧೋಳ	5	2	7

3	ಬದಾಮಿ	5	0	5
4	ಇಳಕಲ್	4	4	8
5	ಜಮಖಂಡಿ	5	2	7
6	ಬೀಳಗಿ	6	2	8
7	ಗುಳೇದಗುಡ್ಡ	2	2	4
	ಬಾಗಲಕೋಟೆ ವಿಭಾಗ	33	17	50
1	ಗದಗ	4	2	6
2	ರೋಣ	3	4	7
3	ನರಗುಂದ	7	6	13
4	ಲಕ್ಷ್ಮೇಶ್ವರ	14	0	14
5	ಮುಂಡರಗಿ	8	5	13
6	ಬೆಟಗೇರಿ	3	5	8
7	ಗಜೇಂದ್ರಗಡ	6	4	10
	ಗದಗ ವಿಭಾಗ	45	26	71
1	ಚಿಕ್ಕೋಡಿ	8	5	13
2	ಸಂಕೇಶ್ವರ	12	2	14
3	ಗೋಕಾಕ್	14	5	19
4	ನಿಪ್ಪಾಣಿ	12	2	14
5	ರಾಯಭಾಗ	5	3	8
6	ಅಥಣಿ	7	5	12
	ಚಿಕ್ಕೋಡಿ ವಿಭಾಗ	58	22	80
1	ಹಾವೇರಿ	10	5	15
2	ಹಿರೇಕೇರೂರು	5	2	7
3	ರಾಣೆಬೆನ್ನೂರು	8	4	12
4	ಹಾನಗಲ್	9	3	12
5	ಬ್ಯಾಡಗಿ	1	0	1
6	ಸವಣೂರು	0	1	1
	ಹಾವೇರಿ ವಿಭಾಗ	33	15	48
	ಒಟ್ಟು	**377**	**164**	**541**

547 ಶ್ರೀ ಸೋಮಲಿಂಗಪ್ಪ ಎಂ.ಎಸ್. : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಭತ್ತ ಬೆಳೆಗಾರರು ಅಕ್ಕಿ ಕಾರ್ಖಾನೆಗಳಿಗೆ ತಲುಪಲು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗಂಗಾವತಿ ತಾಲ್ಲೂಕಿನ ಸಿರಗುಪ್ಪ ಗ್ರಾಮದ ಮಧ್ಯೆ ಹರಿಯುವ ತುಂಗಭದ್ರಾ ನದಿಗೆ ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಸೇತುವೆ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ಅನುದಾನದ ಲಭ್ಯತೆಯ ಮೇರೆಗೆ ತೆಗೆದುಕೊಳ್ಳುವ ಬಗ್ಗೆ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

964 ಶ್ರೀ ವೀರಭದ್ರಪ್ಪ ಹಾಲಹರವಿ : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದ ಸಿ.ಬಿ.ಟಿ. ಬಸ್ ನಿಲ್ದಾಣವನ್ನು ಬೆಂಗಳೂರಿನ ಶಿವಾಜಿನಗರ ಬಸ್ ನಿಲ್ದಾಣದ ಮಾದರಿಯಲ್ಲಿ ನಿರ್ಮಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಸ್ ನಿಲ್ದಾಣದ ನೀಲಿ ನಕ್ಷೆ ಹಾಗೂ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ;

ಇ) ಬಸ್ ನಿಲ್ದಾಣದ ಕಟ್ಟಡದ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು; ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ನೂತನ ಬಸ್‌ನಿಲ್ದಾಣವನ್ನು ಖಾಸಗಿ ಸಹಭಾಗಿತ್ವ ಯೋಜನೆ (ಪಿ.ಪಿ.ಪಿ.) ಅಡಿಯಲ್ಲಿ ನಿರ್ಮಿಸಲು, ಕರ್ನಾಟಕ ರಾಜ್ಯ ಮೂಲಭೂತ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ಹಾಗೂ ಐ.ಎಲ್. & ಎಫ್.ಎಸ್. ಸಹಯೋಗಿತ್ವದ ನೋಡಲ್ ಏಜನ್ಸಿಯಿಂದ ಕೆ.ಐ.ಪಿ.ಡಿ.ಸಿ.ಗೆ ವಹಿಸಲು

ದಿನಾಂಕ: 8–7–2009 ರಂದು ನಡೆದ ಮಂಡಳಿ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿದೆ.

ಇ) ಬಸ್ ನಿಲ್ದಾಣದ ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

277 ಶ್ರೀ ಮಹೇಶ್ ಎಸ್.ಆರ್. (ಕೃಷ್ಣರಾಜನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಇತ್ತೀಚೆಗೆ ನಡೆದ ಅವ್ಯವಹಾರಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು? (ವಿವರಗಳನ್ನು ನೀಡುವುದು);

ಆ) ಈ ಅವ್ಯವಹಾರಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಇ) ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ತನಿಖೆಯ ಪ್ರಗತಿಯು ಯಾವ ಹಂತದಲ್ಲಿದೆ;

ಈ) ಈ ಅವ್ಯವಹಾರಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ರೀತಿ ಕ್ರಮ ಜರುಗಿಸಿದೆ;

ಉ) ಹಾಗಿಲ್ಲದಿದ್ದಲ್ಲಿ, ಅವ್ಯವಹಾರಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಯಾವಾಗ ಕ್ರಮ ಜರುಗಿಸಲಾಗುವುದು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಇತ್ತೀಚೆಗೆ ಯಾವುದೇ ಅವ್ಯವಹಾರಗಳು ನಡೆದಿರುವುದಿಲ್ಲ.

ಆ) ಮೇಲ್ಕಂಡ ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) –ಅದೇ–

ಈ) –ಅದೇ–

ಉ) ಅನ್ವಯಿಸುವುದಿಲ್ಲ.

543 ಶ್ರೀ ಮಂಜು.ಎ (ಅರಕಲಗೂಡು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಕಲಗೂಡು ಪಟ್ಟಣದಲ್ಲಿ ಅಗ್ನಿಶಾಮಕ ಕೇಂದ್ರ ತೆರೆಯುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಹೌದು.

ಆ) ಅರಕಲಗೂಡು ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಸರ್ಕಾರದ ಆದೇಶ ಸಂ: ಒಇ 235 ಕಸೇ 2005, ದಿನಾಂಕ: 26–10–2006 ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ಈಗಾಗಲೇ ನೀಡಿದೆ. ಅರಕಲಗೂಡಿನಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ರೂ.1,92,000/ ಗಳ ಮೊತ್ತವನ್ನು ಪಾವತಿಸಿ ಕೃಷಿ ಇಲಾಖೆಯಿಂದ 2 ಎಕರೆ ಜಮೀನನ್ನು ಈಗಾಗಲೇ ಖರೀದಿಸಲಾಗಿದೆ. ಅನುದಾನ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು ಸದರಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲಾಗುವುದು.

545 ಶ್ರೀ ಮಂಜು ಎ. (ಅರಕಲಗೂಡು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಕಲಗೂಡು ವಿಧಾನಸಭಾ ಕ್ಷೇತ್ರದ ಹಳ್ಳಿ ಮೈಸೂರು ಮತ್ತು ಮಲ್ಲಿಪಟ್ಟಣಗಳಲ್ಲಿ ನೂತನವಾಗಿ ಪೊಲೀಸ್ ಸ್ಟೇಷನ್ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ)

1) ಹಳ್ಳಿ ಮೈಸೂರು ಇಲ್ಲಿ ನೂತನವಾಗಿ ಪಲೋಸ್ ಠಾಣೆ ತೆರೆಯುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ.

   There is a proposal before the Government to open a Police Station at Halli Mysore.

2) ಮಲ್ಲಿಪಟ್ಟಣ ಗ್ರಾಮದಲ್ಲಿ ಪೊಲೀಸ್‌ಠಾಣೆ ತೆರೆಯುವ ಪ್ರಸ್ತಾವನೆಯು ಎನ್.ಪಿ.ಸಿ. ವರದಿ ಶಿಫಾರಸ್ಸುಗಳನ್ವಯ ಸಾಕಷ್ಟು ಸಮರ್ಥನೆ ಇಲ್ಲದ ಕಾರಣ ಸದರಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

   Since the proposed Police Station at Mallipatna does not fulfil the recommendations made by the National

Police Commission there is no proposal before the Government for starting the said Police Station.

ಆ) ಹಳ್ಳಿ ಮೈಸೂರು, ಇಲ್ಲಿ ನೂತನ ಪೊಲೀಸ್ ಠಾಣೆ ತೆರೆಯುವುದು ಅವಶ್ಯಕವೆಂದು ಕಂಡುಬಂದಲ್ಲಿ ಹಣಕಾಸಿನ ಲಭ್ಯತೆ ಮೇಲೆ ಪರಿಗಣಿಸಲಾಗುವುದು.

If it is found necessary to start a new Police Station at Halli Mysore, it will be considered depending upon the availability of funds.

970 ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–2010ನೇ ಸಾಲಿನಲ್ಲಿ ನಬಾರ್ಡ್ RIDF-15 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಉದ್ದೇಶಿಸಲಾದ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳು ಯಾವುವು? (ತಾಲ್ಲೂಕುವಾರು ವಿವರ ನೀಡುವುದು).

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಉದ್ದೇಶಿಸಲಾದ ರಸ್ತೆಗಳ ಅಭಿವೃದ್ಧಿಯ ಬಗ್ಗೆ ತಾಲ್ಲೂಕುವಾರು ನಿಗಧಿಪಡಿಸಲಾದ ಹಣದ ಮೊತ್ತವೆಷ್ಟು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) 2009–10ನೇ ಸಾಲಿನಲ್ಲಿ ಆರ್.ಐ.ಡಿ.ಎಫ್–15ರ ಯೋಜನೆಯಡಿ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಸ್ತಾವಿಸಲಾದ ರಸ್ತೆಗಳ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಕಾಮಗಾರಿವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ

ಆರ್ಐಡಿಎಫ್–15ರ ಯೋಜನೆಯಡಿ (2009–10)

ಪ್ರಸ್ತಾವಿಸಲಾದ ಕಾಮಗಾರಿಗಳು

Sl No	Name of Taluka	Name of work	Est Amt Rs. In Lakh
		DISTRICT : SHIMOGA	
1	Shimoga	Impts.to road from Ayanur-Malur road to Malleshankara temple	65.00

2	Bhadravathi	Impts.to Kallajjanahal-Hanumanthapura road	65.00
3	Thirthahalli	Impts.to Garathikere-Vashahosalli road	90.00
4	Bhadravathi	Impts.to road from Rangappa Circle on MM road to join Komarahalli via Devarahalli, Kachagondanahalli (1 phase)	90.00
5	Hosanagara	Impts.to Kachigebylu-Vijapur road	60.00
6	Hosanagara	Impts.to Brahmeshwara-Chikkamanathi road	80.00
7	Shikaripura	Impts.to Bhadrapura-Anjanapura road via Nandihalli, Mathighatta	240.00
8	Soraba	Impts.to road from KK road to join Thavanandhi-Anavatti road via Janginakoppa, Otur, Korakodu	160.00

ದೇವಸ್ಥಾನದ ಕೂಡು ರಸ್ತೆ ಅಭಿವೃದ್ಧಿ ಬಗ್ಗೆ

867 ಶ್ರೀ ರುದ್ರೇಶಗೌಡ ವೈ.ಎಸ್. : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನ ಹಳೇಬೀಡಿನಲ್ಲಿರುವ ದೇವಸ್ಥಾನವು ವಿಶ್ವವಿಖ್ಯಾತವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಈ ದೇವಸ್ಥಾನ ವೀಕ್ಷಣೆಗೆ ದೇಶ-ವಿದೇಶದಿಂದ ಪ್ರವಾಸಿಗರು ಬರುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಇ) ಈ ದೇವಸ್ಥಾನದ ಕೂಡು ರಸ್ತೆಗೆ ಎಷ್ಟು ವರ್ಷಗಳ ಹಿಂದೆ ಡಾಂಬರೀಕರಣ ಮಾಡಲಾಗಿರುತ್ತದೆ.

ಈ) ಈ ಕೂಡು ರಸ್ತೆಯನ್ನು ರಾಜ್ಯ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಅಭಿವೃದ್ಧಿಪಡಿಸಲು ಸಾಧ್ಯವಿಲ್ಲವೇ?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಹೌದು.

Yes

ಆ) ಹೌದು

Yes

ಇ) ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ಹಳೇಬೀಡು ದೇವಸ್ಥಾನಕ್ಕೆ ಸೇರುವ ಕೂಡು ರಸ್ತೆಯು (ಜಿಲ್ಲಾ ಮುಖ್ಯ ರಸ್ತೆ) 1.60 ಕಿಮೀ ಉದ್ದವಿದ್ದು, ಸದರಿ ರಸ್ತೆಯನ್ನು 1992–93ರಲ್ಲಿ ಡಾಂಬರೀಕರಣ ಮಾಡಲಾಗಿದೆ. ತದನಂತರ ಪ್ರತಿ ವರ್ಷ ಲಭ್ಯವಿರುವ ಅನುದಾನದಲ್ಲಿ ಗುಂಡಿ ಮುಚ್ಚಿ ವಾರ್ಷಿಕ ನಿರ್ವಹಣೆ ಮಾಡಿ ಸಂಚಾರಕ್ಕೆ ಯೋಗ್ಯಗೊಳಿಸಲಾಗುತ್ತಿದೆ.

ಈ) ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ಅಧೀನದಲ್ಲಿದ್ದು ಈ ರಸ್ತೆಯ ಅಭಿವೃದ್ಧಿಯನ್ನು ಲೋಕೋಪಯೋಗಿ ಇಲಾಖೆಯಿಂದಲೇ ಕೈಗೊಳ್ಳಬೇಕಾಗಿರುತ್ತದೆ.

This road is under the control of PWD and PWD has to develop this road.

764 ಡಾ:ಶರಣ ಪ್ರಕಾಶ ರುದ್ರಪ್ಪ ಪಾಟೀಲ್(ಸೇಡಂ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09ನೇ ಸಾಲಿನಲ್ಲಿ ಸ್ಥಳೀಯ ಶಾಸಕರ ಅನುದಾನದಡಿ ರೂ.150.00 ಲಕ್ಷದ ಕಾಮಗಾರಿಗಳ ಪ್ರಸ್ತಾವನೆ ಸಲ್ಲಿಸುವಂತೆ ಸೂಚನೆ ನೀಡಿದ ಪ್ರಕಾರ ಜಿಲ್ಲಾಧಿಕಾರಿಗಳ ಕಚೇರಿಗೆ ರೂ.150.00 ಲಕ್ಷದ ಪ್ರಸ್ತವಾನೆ ಸಲ್ಲಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಎಷ್ಟು ಹಣ ಬನಿಡುಗಡೆ ಮಾಡಲಾಗಿದೆ; ಉಳಿದ ಹಣ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು) :

ಅ) ಹೌದು.

